ಶನಿವಾರ, ಮೇ 20, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಕೋಲ್ಕತ್ತದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ದಿ ಕೇರಳ ಸ್ಟೋರಿ' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ನಟ ಅದಾ ಶರ್ಮಾ ಪಾಲ್ಗೊಂಡಿದ್ದರು

ಕಾಂಗ್ರೆಸ್
ಸತತವಾಗಿ 8 ವರ್ಷಗಳ ಕಾಲ
ಕೆಪಿಸಿಸಿ ಅಧ್ಯಕ್ಷರಾಗಿ ಮತ್ತು ಕಾಂಗ್ರೆಸ್ ಪಕ್ಷದ
ಪ್ರಣಾಳಿಕೆ ಸಮಿತಿಯ ಅಧ್ಯಕ್ಷರಾಗಿ ರಾಜ್ಯದ
ಜನತೆಗೆ ಜನಪ್ರಿಯ ಯೋಜನೆಗಳನ್ನು ನೀಡಿ
ಕರ್ನಾಟಕ ಸರ್ಕಾರದ ಸಚಿವರಾಗಿ ಪ್ರಮಾಣ
ವಚನ ಸ್ವೀಕರಿಸುತ್ತಿರುವ ನಾಡಿನ ಸರಳ ಸಜ್ಜನಿಕೆಯ
ಮಾಜಿ ಉಪಮುಖ್ಯಮಂತ್ರಿಗಳಾದ ಆದರಣೀಯ
ಡಾ॥ ಜಿ.ಪರಮೇಶ್ವರ್ ರವರಿಗೆ
ಹೃತ್ಪೂರ್ವಕ ಅಭಿನಂದನೆಗಳು
ಶ್ರೀ ಮುರಳೀದರ್ ಹಾಲಪ್ಪ
ಕೆಪಿಸಿಸಿ ವಕ್ತಾರರು
ಕೆ.ಸಿ ಕೇಶವಮೂರ್ತಿ
ಶ್ರೀ ಜಗದೀಶ್
ಕಾಂಗ್ರೆಸ್ ಮುಖಂಡರು
ಶ್ರೀ ಜಯಚಂದ್ರ
ಗುತ್ತಿಗೆದಾರರು
ಶ್ರೀ ಸುನೀಲ್ ಪ್ರಕಾಶ್
ಪ್ರಧಾನ ಕಾರ್ಯದರ್ಶಿ,
ಬೆಂ.ದ.ಜಿ.ಕಾ.ಸಮಿತಿ.
ಶ್ರೀ ಬಿ.ವಿ.ಜಯರಾಮು
ಕಾಂಗ್ರೆಸ್ ಮುಖಂಡರು

ಶನಿವಾರ, ಮೇ 20, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 139 | ಪುಟ 20

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಜಾ ಮತ ಜನತಂತ್ರದ ಹಬ್ಬ 9
ಹೊಸ ಸರ್ಕಾರಕ್ಕೊಂದು ಪ್ರಜಾ ಪ್ರಣಾಳಿಕೆ

'ಷೇರುಪೇಟೆಯಲ್ಲಿ ಸಂಶಯಾಸ್ಪದ ವಹಿವಾಟು ತಡೆಗೆ ಬಿಗಿ ನಿಯಮ' 10

ಅಭಿಷೇಕ್ ಬ್ಯಾನರ್ಜಿಗೆ ಸಿಬಿಐ ಸಮನ್ಸ್ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,729 ▲	18,203 ▲	₹62,000 (ಬೆಂಗಳೂರು) ▼	₹73,500 (ಬೆಂಗಳೂರು) ▼	82.67 ▼

ಒಳ ಪುಟಗಳು

ತಬ್ಬಲಿ ಮರಿಗಳ ತಾಯಿ ಸಾವಿತ್ರಮ್ಮ 4

ಸಿಇಟಿಯಿಂದೇ ಪ್ರಮಾಣ ಬೇಕಿತ್ತಾ : ಸಂತೋಷ್ ಪ್ರಶ್ನೆ 5

'ಜಾಮಾ ಮಸೀದಿ ಕೆಳಗೆ ಕೃಷ್ಣನ ವಿಗ್ರಹ' 11

ಉದ್ಯಾನನಗರಿಯಲ್ಲಿ ಗರಿಗೆದರಿದ ಟೆನ್ ಕೆ ಸಡಗರ 12

ಪಟ್ಟಿ ಅಖೈರುಗೊಳಿಸಲು ತಡರಾತ್ರಿವರೆಗೆ ಕಸರತ್ತು • ವರಿಷ್ಠರ ಜೊತೆ ಹಲವು ಸುತ್ತು ಮಾತುಕತೆ

25 ಸಚಿವರು ಇಂದು ಪ್ರಮಾಣ?

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸರ್ಕಾರದ ಸಚಿವ ಸಂಪುಟಕ್ಕೆ ಸೇರುವ ಶಾಸಕರ ಹೆಸರನ್ನು ಅಖೈರುಗೊಳಿಸಲು ಕಾಂಗ್ರೆಸ್ ಹೈಕಮಾಂಡ್, ನಿಯೋಜಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಿಯೋಜಿತ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಡ ರಾತ್ರಿಯವರೆಗೂ ಕಸರತ್ತು ನಡೆಸಿದ್ದಾರೆ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅಲ್ಲದೆ 25 ಶಾಸಕರು ಸಂಪುಟಕ್ಕೆ ಸೇರುವುದು ಬಹುತೇಕ ಖಚಿತವಾಗಿದೆ.

ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹಾಗೂ 25 ಶಾಸಕರು ಬೆಂಗಳೂರಿನಲ್ಲಿ ಶನಿವಾರ ಮಧ್ಯಾಹ್ನ 12.30ಕ್ಕೆ ಪ್ರಮಾಣವಚನ ಸ್ವೀಕರಿಸುವರು. ವೇಣುಗೋಪಾಲ್ ನಿವಾಸದಲ್ಲಿ ರಾತ್ರಿ 12ರ ವರೆಗೆ ಸುದೀರ್ಘ ಸಭೆ ನಡೆಸಿ ಪಟ್ಟಿಗೆ ಅಂತಿಮ ರೂಪ ನೀಡಲಾಯಿತು.

ಸಂಪುಟಕ್ಕೆ ಸೇರಲಿರುವ ಶಾಸಕರಿಗೆ ತಡರಾತ್ರಿ ದೂರವಾಣಿ ಕರೆ ಮಾಡಿ ಮಾಹಿತಿ ನೀಡಲಾಯಿತು. ನೂತನ ಸಚಿವರ ಪಟ್ಟಿಯನ್ನು ರಾಜಭವನಕ್ಕೆ ಶನಿವಾರ ಬೆಳಿಗ್ಗೆ ಕಳುಹಿಸಲಾಗುತ್ತದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸಂಪುಟಕ್ಕೆ ಸಚಿವರ ಹೆಸರನ್ನು ಅಂತಿಮಗೊಳಿಸುವ ಸಂದರ್ಭದಲ್ಲಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಬಣಕ್ಕೆ ಸಮಾನ ಆದ್ಯತೆ ನೀಡಲಾಗಿದೆ. ಹೈಕಮಾಂಡ್ ಕೋಟಾದಲ್ಲಿ ಒಂಬತ್ತು ಶಾಸಕರು ಸಂಪುಟಕ್ಕೆ ಸೇರ್ಪಡೆಯಾಗುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನವದೆಹಲಿಗೆ ಶುಕ್ರವಾರ ಮಧ್ಯಾಹ್ನ ಬಂದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ವರಿಷ್ಠರ ಜತೆಗೆ ಹಲವು ಸುತ್ತಿನ ಮಾತುಕತೆ ನಡೆಸಿದರು.

ಆರಂಭದಲ್ಲಿ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಶಿವಕುಮಾರ್ ಮಾತುಕತೆ ನಡೆಸಿದರು.

5ನೇ ಪುಟ ನೋಡಿ

ಸಂಪುಟ ಸೇರ್ಪಡೆ ಸೂತ್ರ

8 ಸಿದ್ದರಾಮಯ್ಯ ಬಣ

8 ಶಿವಕುಮಾರ್ ಬಣ

9 ಹೈಕಮಾಂಡ್

ಭರದ ಸಿದ್ಧತೆ

ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಂಪುಟ ಸದಸ್ಯರ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭಾರಿ ಸಿದ್ಧತೆ ನಡೆದಿದೆ.

'ಗ್ಯಾರಂಟಿ': ನಿರ್ಧಾರ ಇಂದು

ಬೆಂಗಳೂರು: ಕಾಂಗ್ರೆಸ್ ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಐದು 'ಗ್ಯಾರಂಟಿ'ಗಳ ಅನುಷ್ಠಾನಕ್ಕೆ ಶನಿವಾರ ನಡೆಯುವ ಸಚಿವ ಸಂಪುಟದ ಮೊದಲ ಸಭೆಯಲ್ಲೇ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮತ್ತು ಹೊಸ ಸಂಪುಟದ ಸದಸ್ಯರು ಮಧ್ಯಾಹ್ನ 12.30ಕ್ಕೆ ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣ ವಚನ ಸ್ವೀಕರಿಸುವರು. ನಂತರ ವಿಧಾನಸೌಧಕ್ಕೆ ಬರುವ ಎಲ್ಲರೂ, ಹೊಸ ಸರ್ಕಾರದ ಮೊದಲ ಸಂಪುಟ ಸಭೆ ನಡೆಸುವರು. 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್, ಬಿಪಿಎಲ್ ಕುಟುಂಬಗಳ ಸದಸ್ಯರಿಗೆ ಉಚಿತವಾಗಿ ತಿಂಗಳಿಗೆ ತಲಾ ಹತ್ತು ಕೆ.ಜಿ. ಅಕ್ಕಿ, ಮನೆಯ ಯಜಮಾನಿಗೆ ತಿಂಗಳಿಗೆ ₹2,000 ನೆರವು, ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ ₹3,000 ಹಾಗೂ ಡಿಪ್ಲೊಮಾ ಪದವೀಧರರಿಗೆ ತಿಂಗಳಿಗೆ ₹1,500 ನಿರುದ್ಯೋಗ ಭತ್ಯೆ ಮತ್ತು ಮಹಿಳೆಯರಿಗೆ ರಾಜ್ಯದಾದ್ಯಂತ ಬಸ್‌ಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯ ಒದಗಿಸುವುದಾಗಿ ಕಾಂಗ್ರೆಸ್ ಗ್ಯಾರಂಟಿ ನೀಡಿತ್ತು.

ಆಕಾಂಕ್ಷಿಗಳ ಲಾಬಿ

ಸಚಿವ ಸಂಪುಟಕ್ಕೆ ಸೇರಲು 40ಕ್ಕೂ ಅಧಿಕ ಶಾಸಕರು ನವದೆಹಲಿ ಯಲ್ಲಿ ಶುಕ್ರವಾರ ಲಾಬಿ ನಡೆಸಿದರು. ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಈ ನಾಯಕರು, ಸಂಪುಟದಲ್ಲಿ ಅವಕಾಶ ನೀಡುವಂತೆ ಮನವಿ ಮಾಡಿಕೊಂಡರು. ಉಪಮುಖ್ಯಮಂತ್ರಿ ಸ್ಥಾನ ಕೈತಪ್ಪಿದ ಎಂ.ಬಿ.ಪಾಟೀಲ ಅವರು ಖರ್ಗೆ ಅವರನ್ನು ಭೇಟಿ ಮಾಡಿ ಪ್ರಮುಖ ಖಾತೆ (ಜಲಸಂಪನ್ಮೂಲ/ ಲೋಕೋಪಯೋಗಿ/ ಇಂಧನ) ನೀಡುವಂತೆ ಒತ್ತಡ ಹೇರಿದರು. ಹಿರಿಯ ಶಾಸಕರಾದ ಎಚ್.ಕೆ.ಪಾಟೀಲ, ಆರ್.ವಿ.ದೇಶಪಾಂಡೆ, ಕೆ.ಎಚ್.ಮುನಿಯಪ್ಪ ಅವರೂ ಖರ್ಗೆ ಅವರನ್ನು ಭೇಟಿ ಮಾಡಿ ತಮ್ಮ ಹಿರಿತನಕ್ಕೆ ಮನ್ನಣೆ ನೀಡುವಂತೆ ಒತ್ತಾಯಿಸಿದರು.

ಕೆಲವರು ನಾಲ್ಕೈದು ಬಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದು, ಅವರಿಗೆ ಈ ಸಲ ಅವಕಾಶ ನೀಡಬಾರದು ಎಂದು ಕೆಲವು ಶಾಸಕರು ಮನವಿ ಮಾಡಿದರು. 'ಈ ಸಲ ಸರ್ಕಾರದಲ್ಲಿ ಯುವಕರಿಗೆ ಹಾಗೂ ಹೊಸ ಮುಖಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು' ಎಂದು ಶಾಸಕ ವಿನಯ ಕುಲಕರ್ಣಿ ಆಗ್ರಹಿಸಿದರು. 2–3 ಬಾರಿ ಶಾಸಕರಾಗಿ ಆಯ್ಕೆಯಾದವರಿಗೆ, ಈ ಹಿಂದೆ ಅವಕಾಶ ಸಿಗದವರಿಗೆ ಆದ್ಯತೆ ನೀಡಬೇಕು ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಆಗ್ರಹಿಸಿದರು.

₹2 ಸಾವಿರ ನೋಟು ಚಲಾವಣೆಗೆ ಬ್ರೇಕ್

ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ನಿರ್ಧಾರ ಮಾಡಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಘೋಷಿಸಿದೆ.

ಸದ್ಯ ಚಲಾವಣೆಯಲ್ಲಿ ಇರುವ ನೋಟುಗಳನ್ನು ಸೆಪ್ಟೆಂಬರ್ 30ರ ಒಳಗಾಗಿ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವಂತೆ ಅಥವಾ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವಂತೆ ಸೂಚನೆ ನೀಡಿದೆ.

₹2 ಸಾವಿರ ಮುಖಬೆಲೆಯ ನೋಟುಗಳನ್ನು ಬೇರೆ ಮುಖಬೆಲೆಯ ನೋಟುಗಳೊಂದಿಗೆ ಒಂದು ಬಾರಿಗೆ ₹20 ಸಾವಿರದವರೆಗೆ ಮಾತ್ರವೇ ಬದಲಾಯಿಸಿಕೊಳ್ಳಬಹುದು ಎನ್ನುವ ಮಿತಿಯನ್ನು ಆರ್‌ಬಿಐ ವಿಧಿಸಿದೆ. ಬ್ಯಾಂಕ್ ಶಾಖೆಗಳ ದೈನಂದಿನ ಕೆಲಸಗಳಿಗೆ ಅಡಚಣೆ ಆಗಬಾರದು ಎಂಬ ಕಾರಣಕ್ಕೆ ಈ ಮಿತಿಯನ್ನು ಹೇರಲಾಗಿದೆ.

ಬ್ಯಾಂಕ್ ಖಾತೆಗಳಿಗೆ ಗ್ರಾಹಕರು ಹಣ ಜಮಾ ಮಾಡುವ ರೀತಿಯಲ್ಲಿಯೇ ₹2 ಸಾವಿರದ ನೋಟುಗಳನ್ನು ಸಹ ಯಾವುದೇ ನಿರ್ಬಂಧ ಇಲ್ಲದೇ ಠೇವಣಿ ಇಡಬಹುದು. ಆದರೆ ಇದು ಶಾಸನಬದ್ಧ ನಿಬಂಧನೆಗಳಿಗೆ ಒಳಪಟ್ಟಿರಲಿದೆ ಎಂದು ಆರ್‌ಬಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಮುಖ ಅಂಶಗಳು

- ಮೇ 23ರಿಂದ ನೋಟು ಬದಲಿಸಿಕೊಳ್ಳಲು ಅವಕಾಶ. ಬ್ಯಾಂಕ್ ಶಾಖೆಗಳಲ್ಲದೆ ಆರ್‌ಬಿಐನ 19 ಪ್ರಾದೇಶಿಕ ಕಚೇರಿಗಳಲ್ಲಿಯೂ ನೋಟು ಬದಲಾಯಿಸಿಕೊಳ್ಳಬಹುದು
- ತಕ್ಷಣದಿಂದ ಜಾರಿಗೆ ಬರುವಂತೆ ₹2 ಸಾವಿರದ ನೋಟು ವಿತರಣೆ ನಿಲ್ಲಿಸಲು ಬ್ಯಾಂಕ್‌ಗಳಿಗೆ ಸೂಚನೆ
- 2016ರ ನವೆಂಬರ್‌ನಲ್ಲಿ ₹2 ಸಾವಿರದ ನೋಟು ಪರಿಚಯಿಸಲಾಯಿತು
- 2018-19ರಲ್ಲಿ ಮುದ್ರಣ ನಿಲ್ಲಿಸಲಾಯಿತು

10 ನೇ ಪುಟ ನೋಡಿ

ವೃತ್ತಿಪರ ಕೋರ್ಸ್: ಇಂದು, ನಾಳೆ ಸಿಇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಿಇಟಿ ಪರೀಕ್ಷೆ ಶನಿವಾರ ಮತ್ತು ಭಾನುವಾರದಂದು ನಡೆಯಲಿದೆ.

ಶನಿವಾರದಂದು ಜೀವ ವಿಜ್ಞಾನ, ಗಣಿತ, ಭಾನುವಾರ ಭೌತ ವಿಜ್ಞಾನ, ರಸಾಯನ ವಿಜ್ಞಾನ ವಿಷಯದ ಪರೀಕ್ಷೆಗಳು ಜರುಗಲಿವೆ.

ಇದೇ 22ರಂದು ಬೆಂಗಳೂರು, ಬೀದರ್, ವಿಜಯಪುರ, ಬಳ್ಳಾರಿ, ಬೆಳಗಾವಿ, ಮಂಗಳೂರು ಕೇಂದ್ರಗಳಲ್ಲಿ ಬೆಳಿಗ್ಗೆ 11.30ರಿಂದ 12.30ರವರೆಗೆ ಹೊರನಾಡು ಮತ್ತು ಗಡಿನಾಡು ಕನ್ನಡ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ.

ಅಂಕಿ–ಅಂಶಗಳು 4

ಚಿನಕುರಳಿ

ಪ್ರಕಾಶ್ ಶೆಟ್ಟಿ



ಚೀನಾದ ಒಡೆತನದ ಸಂಸ್ಥೆ • ವಿದೇಶಿ ವಿನಿಮಯ ಕಾನೂನು ಉಲ್ಲಂಘನೆ ಆರೋಪ

ಶಿಕ್ಷಣ ಸಂಸ್ಥೆಯ ₹8.26 ಕೋಟಿ ವಶ

ನವದೆಹಲಿ (ಪಿಟಿಐ): 'ವಿದೇಶಿ ವಿನಿಮಯ ಕಾನೂನು ಉಲ್ಲಂಘಿಸಿದ ಆರೋಪದಡಿ ಚೀನಾ ಒಡೆತನದ, ಬೆಂಗಳೂರು ಮೂಲದ ಆನ್‌ಲೈನ್ ಶಿಕ್ಷಣ ಸಂಸ್ಥೆಯ ₹ 8.26 ಕೋಟಿ ನಗದು ವಶಪಡಿಸಿಕೊಳ್ಳಲಾಗಿದೆ' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ತಿಳಿಸಿದೆ.

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ (ಫೆಮಾ) ಸೆಕ್ಷನ್ 37ಎ ಅಡಿ ಪಿಜನ್ ಎಜುಕೇಶನ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್‌ಗೆ ಸೇರಿದ ಹಣ ವಶಪಡಿಸಿ-ಕೊಳ್ಳಲಾಗಿದೆ. ಕಂಪನಿಯು 'ಒಡಾಕ್ಲಾಸ್' ಬ್ರಾಂಡ್ ಹೆಸರಿನಲ್ಲಿ ಆನ್‌ಲೈನ್ ಶಿಕ್ಷಣ ಒದಗಿಸುತ್ತಿದೆ ಎಂದು ಹೇಳಿದೆ.

ಮುಖ್ಯಾಂಶಗಳು

- ಕಂಪನಿ ವಿರುದ್ಧ ಏಪ್ರಿಲ್‌ನಲ್ಲಿ ತನಿಖೆ ನಡೆಸಿದ್ದ ಜಾರಿ ನಿರ್ದೇಶನಾಲಯ
- ಚೀನಾ, ಹಾಂಗ್‌ಕಾಂಗ್‌ಗೆ ₹ 82.72 ಕೋಟಿ ವರ್ಗಾವಣೆ: ಆರೋಪ

ತನಿಖಾ ಸಂಸ್ಥೆಯು ಏಪ್ರಿಲ್‌ನಲ್ಲಿ ಕಂಪನಿ ವಿರುದ್ಧ ತಪಾಸಣೆ ನಡೆಸಿತು. ಆಗ ಕಂಪನಿ ಶೇ 100ರಷ್ಟು ಚೀನಾ ಒಡೆತನದಲ್ಲಿರುವುದು ಮತ್ತು ಹಣಕಾಸು ನಿರ್ಧಾರಗಳು ಸೇರಿದಂತೆ ಎಲ್ಲಾ ವ್ಯವಹಾರಗಳನ್ನು ಚೀನಾದಲ್ಲಿರುವ ವ್ಯಕ್ತಿಗಳು ತೆಗೆದುಕೊಳ್ಳುತ್ತಿದ್ದಾರೆ ಎಂಬುದು ಗೊತ್ತಾಗಿದೆ.

ಚೀನಾ ಮೂಲದ ನಿರ್ದೇಶಕ ಲಿಯು ಕ್ಯಾನ್ ಸೂಚನೆ ಮೇರೆಗೆ ಜಾಹೀರಾತು ಮತ್ತು ಮಾರ್ಕೆಟಿಂಗ್ ವೆಚ್ಚಗಳ ಹೆಸರಿನಲ್ಲಿ ಕಂಪನಿಯು ಚೀನಾ ಮತ್ತು ಹಾಂಗ್‌ಕಾಂಗ್‌ಗೆ ₹ 82.72 ಕೋಟಿ ವರ್ಗಾಯಿಸಿದೆ ಎಂದು ಇ.ಡಿ ಆರೋಪಿಸಿದೆ.

ಕಂಪನಿಯು ತನ್ನ ಕಡೆಯಿಂದ ಸೇವೆ ಸ್ವೀಕೃತಿಯ ಯಾವುದೇ ದಾಖಲೆ, ವೆಚ್ಚಗಳ ವಿರುದ್ಧ ಪ್ರಕಟವಾದ ಯಾವುದೇ ಜಾಹೀರಾತಿನ ಪುರಾವೆ ಒದಗಿಸಲು ಸಾಧ್ಯವಾಗಲಿಲ್ಲ. ಲಿಯು ಕ್ಯಾನ್ ಅವರ ನಿರ್ದೇಶನದಂತೆ ಹಣಪಾವತಿ ಮಾಡಲಾಗುತ್ತಿತ್ತು ಎಂದು ಕಂಪನಿಯ ನಿರ್ದೇಶಕ ಮತ್ತು ಅಕೌಂಟ್ಸ್ ಮ್ಯಾನೇಜರ್ ತನಿಖೆ ವೇಳೆ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದೆ.

ಅಲ್ಲದೆ, ಗೂಗಲ್ ಮತ್ತು ಫೇಸ್‌ಬುಕ್ ಮೂಲಕ ಜಾಹೀರಾತು ಪ್ರಕಟಿಸಲಾಗಿದೆ ಎಂದು ಚೀನಾದ ನಿರ್ದೇಶಕರು ತಿಳಿಸಿದ್ದಾರೆ ಎಂಬುದನ್ನು ಕಂಪನಿಯ ಭಾರತೀಯ ನಿರ್ದೇಶಕ ವೇದಾಂತ ಹಮೀರ್ವಾಸಿಯಾ ಹೇಳಿದ್ದಾರೆ ಎಂದು ಇ.ಡಿ ಹೇಳಿದೆ.

ಬಿಡಿಎ: 55 ಎಕರೆ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವರಾಮ ಕಾರಂತ ಬಡಾವಣೆಯಲ್ಲಿ ಅತಿಕ್ರಮಿಸಲಾಗಿದ್ದ 55 ಎಕರೆ ಭೂಮಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವಶಕ್ಕೆ ಪಡೆದುಕೊಂಡಿದೆ.

ಯಲಹಂಕ ಸಮೀಪದ ಆವಲ-ಹಳ್ಳಿಯಲ್ಲಿ ಸ್ಟಡ್ ಫಾರ್ಮ್‌ನಲ್ಲಿ-ದ್ದ ಕುದುರೆಗಳನ್ನು ಫಾರ್ಮ್‌ನವರು ಅಲ್ಲಿಂದ ಸ್ಥಳಾಂತರಿಸಿದ ಮೇಲೆ ಬಿಡಿಎ ಅಧಿಕಾರಿಗಳು ತೆರವು ಕಾರ್ಯಾಚರಣೆ ನಡೆಸಿದರು.

ಯಲಹಂಕ ಸಮೀಪದ ಆವಲಹಳ್ಳಿಯಲ್ಲಿ ಸ್ಟಡ್ ಫಾರ್ಮ್ ಬೇಲಿ ತೆರವುಗೊಳಿಸಿದ ಬಿಡಿಎ ಸಿಬ್ಬಂದಿ

2018ರಲ್ಲಿ ಅಂತಿಮ ಅಧಿಸೂಚನೆ ನಂತರ ಸಾಕಷ್ಟು ಬಾರಿ ನೋಟಿಸ್ ನೀಡಲಾಗಿದ್ದರೂ ಫಾರ್ಮ್ ಮಾಲೀಕರು ತೆರವು ಮಾಡಿರಲಿಲ್ಲ. ಹೀಗಾಗಿ ಕಾರ್ಯಾಚರಣೆ ನಡೆಸಿ, ಮೂರು ಕಿ.ಮೀ ಕಾಂಪೌಂಡ್ ಕೆಡವಲಾಯಿತು.

'ಕುದುರೆ ಲಾಯ ಹಾಗೂ ಕಾರ್ಮಿಕರ ವಸತಿ ಕಟ್ಟಡಗಳನ್ನು ನೆಲಸಮ ಮಾಡಿಲ್ಲ. ಅವುಗಳನ್ನು ತೆರವುಗೊಳಿಸಿಕೊಳ್ಳುವಂತೆ ಫಾರ್ಮ್ ಮಾಲೀಕರಿಗೆ ಸಮಯ ನೀಡಲಾಗಿದೆ. ಮಾರ್ತಾಂಡ ಸಿಂಗ್ ಅವರು ಈ ಫಾರ್ಮ್ ಮಾಲೀಕರು' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ದೊಡ್ಡಬಳ್ಳಾಪುರ ಮತ್ತು ಹೆಸರಘಟ್ಟ ಮಧ್ಯದ 17 ಗ್ರಾಮಗಳ ವ್ಯಾಪ್ತಿಯ 3,456 ಎಕರೆ ಪ್ರದೇಶದಲ್ಲಿ 28 ಸಾವಿರ ನಿವೇಶನಗಳನ್ನು ಡಾ. ಶಿವರಾಮ ಕಾರಂತ ಬಡಾವಣೆಯಲ್ಲಿ ಬಿಡಿಎ ಅಭಿವೃದ್ಧಿಪಡಿಸುತ್ತಿದೆ. ಸುಪ್ರೀಂ ಕೋರ್ಟ್ ನೇಮಿಸಿರುವ ನ್ಯಾಯಮೂರ್ತಿ ಚಂದ್ರಶೇಖರ್ ಸಮಿತಿಯ ಮೇಲ್ವಿಚಾರಣೆಯಲ್ಲಿ ಸುಮಾರು ₹ 5,337 ಕೋಟಿ ವೆಚ್ಚದಲ್ಲಿ ಬಡಾವಣೆಯನ್ನು ನಿರ್ಮಿಸಲಾಗುತ್ತಿದೆ.

28ಕ್ಕೆ ಬ್ರಹ್ಮ ರಥೋತ್ಸವ

ಬೆಂಗಳೂರು: ನಗರದ ಕೋಟೆಯಲ್ಲಿರುವ ಪ್ರಸನ್ನ ವೆಂಕಟರಮಣಸ್ವಾಮಿ ಬ್ರಹ್ಮರಥೋತ್ಸವ ಇದೇ 28ರಂದು ನಡೆಯಲಿದೆ.

ರಥೋತ್ಸವದ ಅಂಗವಾಗಿ ಮೇ 21ರಿಂದ ಪ್ರತಿ ದಿನ ವಿವಿಧ ಕಾರ್ಯಕ್ರಮಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಬಿರುಗಾಳಿ, ಮಳೆಗೆ 300 ಪಕ್ಷಿ ಸಾವು

ಪ್ರಜಾವಾಣಿ ವಾರ್ತೆ

ಕನಕಪುರ: ಎರಡು ದಿನಗಳ ಹಿಂದೆ ಸುರಿದ ಬಿರುಗಾಳಿ ಸಹಿತ ಆಲಿಕಲ್ಲು ಮಳೆಗೆ ಇಂದಿರಾ ನಗರದ ಅಶ್ವತ್ಥಕಟ್ಟೆ ಅರಳಿ ಮರದಲ್ಲಿದ್ದ 300ಕ್ಕೂ ಹೆಚ್ಚು ಪಕ್ಷಿಗಳು ಸತ್ತಿವೆ. ಕೊಕ್ಕರೆ, ನೀರು ಕೋಳಿ, ಕೋಗಿಲೆ, ಕೆಂಬೂತ ಪಕ್ಷಿಗಳು ಮರದಲ್ಲಿದ್ದವು.

ಇಂದಿರಾ ನಗರದ ಸುತ್ತಮುತ್ತ ಇದ್ದ ಮರಗಳನ್ನು ಕತ್ತರಿಸಿದ್ದರಿಂದ ಹೆಚ್ಚಿನ ಪಕ್ಷಿಗಳಿಗೆ ಅಶ್ವತ್ಥಕಟ್ಟೆ ಅರಳಿ ಮರ ಆಶ್ರಯ ತಾಣವಾಗಿತ್ತು. ಗುರುವಾರ ಬಿದ್ದ ಆಲಿಕಲ್ಲು ಮಳೆಗೆ ಹೆಚ್ಚಿನ ಪಕ್ಷಿಗಳು ಸಾವನಪ್ಪಿವೆ.

ಐಸಿಎಆರ್–ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆ
ದಕ್ಷಿಣ ವಲಯ ಕೇಂದ್ರ, ಬೆಂಗಳೂರು – 560030
ಇ–ಮೇಲ್: aaondri@gmail.com ಫ್ಯಾಕ್ಸ್ : 080–22631475, ಫೋನ್ ನಂ. 080–22631402/405
ಎಫ್.ನಂ.2–13/ಸಿಡಿಎನ್/ಎಲ್‌ಆರ್‌ಸಿ/ಎನ್‌ಡಿಆರ್‌ಐ/2020–21/ ದಿನಾಂಕ: 19–05–2023

ಹೆಚ್ಚುವರಿ ಜಾನುವಾರು ಇತ್ಯಾದಿಗಳ ವಿಲೇವಾರಿಗಾಗಿ ಬಿಡ್‌ಗಳ ಆಹ್ವಾನ

ಈ ಸಂಸ್ಥೆಯ 55 ದೇಸಿ ಜಾನುವಾರುಗಳು ಮತ್ತು 44 ಮಿಶ್ರತಳಿ ಜಾನುವಾರುಗಳನ್ನು, ನೋಂದಾಯಿತ ಗೋಶಾಲೆಗಳಿಂದ ಸಂದಾಯವಾಗುವ ಆಫರ್‌ಗಳ ಆಧಾರದ ಮೇರೆಗೆ ವಿಲೇವಾರಿ ಮಾಡಲು ಉದ್ದೇಶಿಸಲಾಗಿರುತ್ತದೆ. ಇಂತಹ ಜಾನುವಾರುಗಳನ್ನು ಕೊಳ್ಳಲು ಆಸಕ್ತಿಯುಳ್ಳ ಗೋಶಾಲೆಗಳು, 09–06–2023 ರೊಳಗೆ ದೇಸಿ ಮತ್ತು ಮಿಶ್ರತಳಿ ಜಾನುವಾರುಗಳಿಗಾಗಿ ಪ್ರತ್ಯೇಕ ಆಫರ್‌ಗಳನ್ನು ಸಲ್ಲಿಸುವುದು. ಆಸಕ್ತಿಯುಳ್ಳ ಬಿಡ್‌ದಾರರು ಹೆಚ್ಚಿನ ವಿವರಗಳಿಗಾಗಿ ಸಂಸ್ಥೆಯ www.ndri.res.in ವೆಬ್‌ಸೈಟ್‌ಗೆ ಭೇಟಿ ನೀಡಬೇಕೆಂದು ಕೋರಲಾಗಿದೆ.

ಸಹಾಯಕ ಆಡಳಿತಾಧಿಕಾರಿ

ನಗರದಲ್ಲಿ ನಾಲ್ಕು ದಿನ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮುಂದಿನ ನಾಲ್ಕು ದಿನಗಳು ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಶನಿವಾರ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ಮಳೆಯಾಗಲಿದೆ. ಗರಿಷ್ಠ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 23 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ. 22ರ ನಂತರ ಮಳೆಯ ತೀವ್ರತೆ ಹೆಚ್ಚಲಿದೆ ಎಂದು ಇಲಾಖೆ ಹೇಳಿದೆ.

ಮೇ 23ರ ವೇಳೆಗೆ ಗರಿಷ್ಠ ಉಷ್ಣಾಂಶ 33 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಚಕ್ರ ಪಂಕ್ಚರ್ ಮಾಡಲು ಕುತಂತ್ರ ● ನಗರದ ರಸ್ತೆಗಳಲ್ಲಿ ವಾಹನಗಳ ಸಂಚಾರ ಕಷ್ಟ

ಮೊಳೆ ಎಸೆತ: 'ಪಂಕ್ಚರ್ ಮಾಫಿಯಾ' ಸಕ್ರಿಯ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದಲ್ಲಿ ಹಲವು ವಾಹನಗಳ ಚಕ್ರಗಳು ಇತ್ತೀಚಿನ ದಿನಗಳಲ್ಲಿ 'ಮೊಳೆ'ಗಳಿಂದಾಗಿ ಪಂಕ್ಚರ್ ಆಗುತ್ತಿದ್ದು, ಇದರಿಂದ ಮಾಲೀಕರ ಜೇಬಿಗೆ ಕತ್ತರಿ ಬೀಳುತ್ತಿದೆ. ವಾಹನಗಳು ಹೆಚ್ಚು ಪಂಕ್ಚರ್ ಆಗುತ್ತಿರುವ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಮೊಳೆಗಳು ಕಂಡುಬರುತ್ತಿದ್ದು, ಇದರ ಹಿಂದೆ 'ಪಂಕ್ಚರ್ ಮಾಫಿಯಾ' ಸಕ್ರಿಯವಾಗಿರುವ ಅನುಮಾನ ವ್ಯಕ್ತವಾಗಿದೆ.

ನಗರದ ಪ್ರಮುಖ ರಸ್ತೆ, ಒಳ ರಸ್ತೆ, ಹೊರ ವರ್ತುಲ ರಸ್ತೆ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿತ್ಯ ಲಕ್ಷಾಂತರ ವಾಹನಗಳು ಸಂಚರಿಸುತ್ತವೆ. ಸಾರ್ವಜನಿಕರು ವೈಯಕ್ತಿಕವಾಗಿ ಕಾರು ಹಾಗೂ ದ್ವಿಚಕ್ರ ವಾಹನ ಬಳಸುತ್ತಿದ್ದಾರೆ. ಸರಕು ಸಾಗಣೆಗೂ ಭಾರಿ ವಾಹನಗಳು ಓಡಾಡುತ್ತಿವೆ.

ಹೊರವರ್ತುಲ ರಸ್ತೆ, ಮೇಲ್ಸೇತುವೆ ರಸ್ತೆಗಳು ಹಾಗೂ ಒಳ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಮೊಳೆಗಳನ್ನು ಎಸೆಯಲಾಗುತ್ತಿದ್ದು, 'ಪಂಕ್ಚರ್ ರಸ್ತೆ'ಗಳಾಗಿ ಮಾರ್ಪಡುತ್ತಿವೆ. ಇಂಥ ರಸ್ತೆಗಳಲ್ಲಿ ಓಡಾಡುವ ವಾಹನಗಳ ಚಕ್ರಗಳು, ಮೊಳೆ ಸಿಲುಕಿ ಪಂಕ್ಚರ್ ಆಗುತ್ತಿವೆ.

ನಗರದಲ್ಲಿ ನಿತ್ಯವೂ 30ಕ್ಕೂ ಹೆಚ್ಚು ವಾಹನಗಳು ಮೊಳೆಯಿಂದ ಪಂಕ್ಚರ್ ಆಗುತ್ತಿದ್ದು, ಈ ಸಂಬಂಧ ಕೆಲವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಆದರೆ, ರಸ್ತೆಯಲ್ಲಿ ಮೊಳೆ

ಚಕ್ರ ಪಂಕ್ಚರ್ ಆಗಲು ಕಾರಣವಾದ ಮೊಳೆಯನ್ನು ಸವಾರರೊಬ್ಬರು ತೋರಿಸಿದರು

ಪ್ರಜಾವಾಣಿ ವಿಶೇಷ

ಎಸೆದವರು ಯಾರು? ಉದ್ದೇಶವೇನು? ಎಂಬುದರ ಬಗ್ಗೆ ಇದುವರೆಗೂ ತನಿಖೆ ಆಗಿಲ್ಲ.

ತಿಂಗಳಿಗೆ 5 ಬಾರಿ ಪಂಕ್ಚರ್: 'ಹೆಬ್ಬಾಳ, ನಾಗಾವರ ಮಾರ್ಗವಾಗಿ ನಿತ್ಯ ಕಾರಿನಲ್ಲಿ ಕಚೇರಿಗೆ ಹೋಗಿಬರುತ್ತೇನೆ. ಇತ್ತೀಚಿನ ದಿನಗಳಲ್ಲಿ ತಿಂಗಳಿಗೆ 5 ಬಾರಿ ಪಂಕ್ಚರ್ ಆಗಿದೆ. ಪರಿಶೀಲಿಸಿದಾಗ ಮೊಳೆಗಳು ಸಿಲುಕಿಕೊಂಡಿರುವುದು ಗೊತ್ತಾಗಿದೆ. ಪಂಕ್ಚರ್ ಹಾಕಿಸಲು ಅನಗತ್ಯ ವೆಚ್ಚವಾಗುತ್ತಿದೆ. ಕಚೇರಿಗೆ ತೆರಳಲು ಸಮಸ್ಯೆಯಾಗುತ್ತಿದೆ' ಎಂದು ಹೊರವರ್ತುಲ ರಸ್ತೆ ಬಳಿಯ ಖಾಸಗಿ ಕಂಪನಿ ಉದ್ಯೋಗಿ ಎಂ.ಪ್ರಶಾಂತ್ ಅಳಲು ತೋಡಿ ಕೊಂಡರು.

ಆಹಾರ ಡೆಲಿವರಿ ಬಾಯ್ ಹರೀಶ್, 'ಕೆ.ಜಿ. ಹಳ್ಳಿ, ಡಿ.ಜೆ.ಹಳ್ಳಿ ಒಳರಸ್ತೆಗಳಲ್ಲಿ ಹೆಚ್ಚು ಸುತ್ತಾಡುತ್ತೇನೆ. 30 ದಿನಗಳಲ್ಲಿ 4 ಬಾರಿ ಬೈಕ್ ಪಂಕ್ಚರ್ ಆಗಿದೆ. ಯಾರೊ ರಸ್ತೆಯಲ್ಲಿ ಮೊಳೆ ಎಸೆದು ಹೋಗುತ್ತಿದ್ದಾರೆ' ಎಂದರು.

ಉಬರ್ ಕ್ಯಾಬ್ ಚಾಲಕ ವಿಶಾಲ್‌ಕುಮಾರ್, 'ಮೆಜೆಸ್ಟಿಕ್, ಕಾಟನ್‌ಪೇಟೆ, ಚಾಮರಾಜಪೇಟೆ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ಹೆಚ್ಚಾಗಿ ಕ್ಯಾಬ್ ಓಡಿಸುತ್ತೇನೆ. ಈ ಭಾಗದ ರಸ್ತೆಗಳಲ್ಲಿ ಹಲವು ಬಾರಿ ಕಾರು ಪಂಕ್ಚರ್ ಆಗಿದ್ದು, ಪ್ರತಿ ಬಾರಿಯೂ ಮೊಳೆಯೇ ಕಾರಣವಾಗಿದೆ. ಒಮ್ಮೆ ಪಂಕ್ಚರ್ ಆದರೆ, ಸರಿಪಡಿಸಲು ₹ 100ರಿಂದ ₹ 200 ಖರ್ಚಾಗುತ್ತಿದೆ' ಎಂದರು.

ಆಟೊದಲ್ಲಿ ಬಂದು ಮೊಳೆ ಎಸೆದಿದ್ದ: 'ಮೈಸೂರು ರಸ್ತೆಯ ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯಲ್ಲಿ ಇತ್ತೀಚೆಗೆ ಆಟೊ ಚಾಲಕನೊಬ್ಬ, ರಸ್ತೆ ಮಧ್ಯೆ ಮೊಳೆ ಎಸೆಯುತ್ತಿದ್ದ. ಅದನ್ನು ಗಮನಿಸಿ ಆತನನ್ನು ವಿಚಾರಿಸಿದ್ದೆ. ಮಾರುಕಟ್ಟೆಯಿಂದ ತೆಗೆದುಕೊಂಡು ಹೊರಟಿದ್ದ ಮೊಳೆಗಳ ಚೀಲ ಆಟೊದಿಂದ ಕೆಳಗೆ ಬಿದ್ದಿರುವುದಾಗಿ ಹೇಳಿ ಆತ ಸ್ಥಳದಿಂದ ಹೊರಟು ಹೋದ' ಎಂದು ಸಂಚಾರ ಠಾಣೆಯೊಂದರ ಕಾನ್‌ಸ್ಟೆಬಲ್ ಹೇಳಿದರು.

'ಆಟೊ ಚಾಲಕನ ರೀತಿ ಹಲವರು ಸಂಚರಿಸುವ ಸಂದರ್ಭದಲ್ಲಿಯೇ ಮೊಳೆ ಎಸೆದು ಹೋಗುತ್ತಿದ್ದಾರೆ. ಹೀಗಾಗಿ, ಅವರ ಪತ್ತೆ ಸಾಧ್ಯವಾಗುತ್ತಿಲ್ಲ' ಎಂದರು.

ರಸ್ತೆಯಲ್ಲಿ ಸಿಕ್ಕ ಮೊಳೆಗಳು, ಕಾಂಪೌಂಡ್‌ಗೆ ಬಳಕೆ

ಬೆಂಗಳೂರಿನಲ್ಲಿ ಹೆಚ್ಚಾಗಿದ್ದ ಪಂಕ್ಚರ್ ಮಾಫಿಯಾ ವಿರುದ್ಧ 2014ರಿಂದ 2016ರವರೆಗೆ ಅಭಿಯಾನ ಆರಂಭಿಸಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಬೆನಡಿಕ್ಟ್ ಜೆಬಕುಮಾರ್, 75 ಕೆ.ಜಿ ಮೊಳೆಗಳನ್ನು ಸಂಗ್ರಹಿಸಿದ್ದರು.

ಬೆಂಗಳೂರು ತೊರೆದು ತಮ್ಮೂರಿಗೆ ಹೋಗಿದ್ದು, ಮನೆಯ ಕಾಂಪೌಂಡ್‌ಗೆ ರಕ್ಷಣೆಗಾಗಿ ಅದೇ ಮೊಳೆಗಳನ್ನು ಅಳವಡಿಸಿದ್ದಾರೆ.

ನಗರದ ಹೊರವರ್ತುಲ ರಸ್ತೆಯ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಬೆನಡಿಕ್ಟ್, ನಿತ್ಯವೂ ಸೈಕಲ್‌ನಲ್ಲಿ ಕಚೇರಿಗೆ ಹೋಗಿ ಬರುತ್ತಿದ್ದರು. ಸೈಕಲ್‌ಗೆ 5 ಅಡಿ ಉದ್ದದ ಆಯಸ್ಕಾಂತ ಕೋಲು ಕಟ್ಟಿದ್ದರು. ಮೊಳೆ ಆಯಸ್ಕಾಂತಗೆ ಅಂಟಿಕೊಳ್ಳುತ್ತಿದ್ದವು. ಇದೇ ರೀತಿಯಲ್ಲಿ ಬೆನಡಿಕ್ಟ್, 75 ಕೆ.ಜಿ ಮೊಳೆ ಸಂಗ್ರಹಿಸಿದ್ದರು.

'ಪಂಕ್ಚರ್ ಅಂಗಡಿಯವರ ಮೇಲೆ ಅನುಮಾನ'

'ನಗರದ ಕೆಲ ಪಂಕ್ಚರ್ ಅಂಗಡಿಯವರು ಮೊಳೆ ಎಸೆಯುತ್ತಿರುವ ಅನುಮಾನವಿದೆ. ಅವರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದರೆ, ಪುರಾವೆ ಇಲ್ಲವೆಂದು ಸುಮ್ಮನಾಗುತ್ತಿದ್ದಾರೆ' ಎಂದು ಚಾಲಕ ವಿಶಾಲ್‌ಕುಮಾರ್ ಹೇಳಿದರು.

'ಕಾರು ಎಲ್ಲಿ ಪಂಕ್ಚರ್ ಆಗುತ್ತದೆಯೋ, ಆ ಸ್ಥಳದ ಸಮೀಪದಲ್ಲಿಯೇ ಪಂಕ್ಚರ್ ಅಂಗಡಿ ಇರುತ್ತದೆ. ಅನಿವಾರ್ಯವಾಗಿ ಅದೇ ಅಂಗಡಿಗೆ ಹೋಗಿ ಪಂಕ್ಚರ್ ತಿದ್ದಿಸುತ್ತೇವೆ. ಅದೇ ಅಂಗಡಿಯವರ ಮೇಲೆ ಹೆಚ್ಚು ಅನುಮಾನ' ಎಂದು ತಿಳಿಸಿದರು.

'ತನಿಖೆಗೆ ಒತ್ತಾಯ'

'ಮೊಳೆ ಮುಂದಿಟ್ಟುಕೊಂಡು ಮೂಲಕ ಹಣ ಮಾಡುತ್ತಿರುವ ವರ ಪತ್ತೆ ಮಾಡಬೇಕು. ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಎಲ್ಲ ರಸ್ತೆಗಳಲ್ಲಿ ಮೊಳೆಗಳನ್ನು ಬಿಬಿಎಂಪಿ ಸಿಬ್ಬಂದಿ ತೆರವು ಮಾಡಬೇಕು' ಎಂದು ಬೈಕ್ ಸವಾರ ರವಿಕುಮಾರ್ ಒತ್ತಾಯಿಸಿದರು.

ನೇತ್ರತಜ್ಞ ಭುಜಂಗ ಶೆಟ್ಟಿ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಾಂತ ನೇತ್ರ ತಜ್ಞ ಹಾಗೂ ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ.ಕೆ.ಭುಜಂಗ ಶೆಟ್ಟಿ (69) ಅವರು ಶುಕ್ರವಾರ ರಾತ್ರಿ ಹೃದಯಾಘಾತದಿಂದ ನಿಧನರಾಗಿದ್ದಾರೆ.

ನಾರಾಯಣ ನೇತ್ರಾಲಯದಲ್ಲಿ ಕರ್ತವ್ಯ ನಿರ್ವಹಿಸಿ, ಸಂಜೆ ಮನೆಗೆ ತೆರಳಿದ್ದರು. ವ್ಯಾಯಾಮದ ಬಳಿಕ ಎದೆಯಲ್ಲಿ ನೋವು ಕಾಣಿಸಿಕೊಂಡು, ಹೃದಯಾಘಾತ ಸಂಭವಿಸಿತ್ತು. ಕುಟುಂಬಸ್ಥರು ಅವರನ್ನು ಯಶವಂತಪುರದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ರಾತ್ರಿ ವೇಳೆಗೆ ನಿಧನರಾದರು.

ರಾಜಾಜಿನಗರದ ನಾರಾಯಣ ನೇತ್ರಾಲಯದಲ್ಲಿ ಶನಿವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆವರೆಗೆ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗುವುದು.

ಭುಜಂಗ ಶೆಟ್ಟಿ ಅವರು ತಮ್ಮ ನೇತ್ರಗಳನ್ನು ದಾನ ಮಾಡಿದ್ದಾರೆ.

1978ರಲ್ಲಿ ಎಂಬಿಬಿಎಸ್ ಮಾಡಿದ್ದ ಅವರು, ಬೆಂಗಳೂರು ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿದ್ದಾರೆ. 1982ರಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜಿನ ಮಿಂಟೋ ಆಸ್ಪತ್ರೆಯಲ್ಲಿ ನೇತ್ರಶಾಸ್ತ್ರದ ರೆಸಿಡೆನ್ಸಿ ಮಾಡಿದರು. ಬಳಿಕ ಸಣ್ಣ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪ್ರಾರಂಭಿಸಿದರು.

ಅದು ಕಾಲಾನಂತರ ಬಹು ವಿಶೇಷ ಕಣ್ಣಿನ ಆಸ್ಪತ್ರೆಯಾಗಿ ಮಾರ್ಪಟ್ಟಿತು. ನಾರಾಯಣ ನೇತ್ರಾಲಯವನ್ನು ಕರ್ನಾಟಕದ ಅತಿದೊಡ್ಡ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯಾಗಿ ಪರಿವರ್ತಿಸುವಲ್ಲಿ ಪ್ರಮುಖ ಕಾರಣರಾಗಿದ್ದಾರೆ. ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯಲ್ಲಿ ಅವರು ನಿಪುಣರಾಗಿದ್ದರು.

ಆರೋಗ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಗಾಗಿ ರಾಜ್ಯೋತ್ಸವ ಪುರಸ್ಕಾರ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಚಂದ್ರಯಾನ–3: ಜುಲೈನಲ್ಲಿ ಉಡಾವಣೆ– ಇಸ್ರೊ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಯೋಜನೆಯ ಪ್ರಕಾರವೇ ನಡೆದರೆ, ಜುಲೈ ಎರಡನೇ ವಾರ 'ಚಂದ್ರಯಾನ–3' ಉಡಾವಣೆ ನಡೆಯಲಿದೆ.

ಅತ್ಯಂತ ಸೂಕ್ಷ್ಮ ತಂತ್ರಜ್ಞಾನವನ್ನು ಬಳಸಿ ಚಂದ್ರನ ದಕ್ಷಿಣ ಧ್ರುವದ ಮೇಲೆ ಚಂದ್ರಯಾನ–3 ಬಾಹ್ಯಾಕಾಶ ನೌಕೆಯನ್ನು ಇಳಿಸಲಾಗುವುದು.

'ಚಂದ್ರನನ್ನು ಆವರಿಸಿರುವ ಶಿಲಾಪದರದ ಮೇಲಿನ ಗಟ್ಟಿಗೊಂಡಿಲ್ಲದ ಘನಪದಾರ್ಥ ಅಧ್ಯಯನ ನಡೆಸುವ ಲೂನಾರ್ ರಿಗೊಲಿತ್, ಅಲ್ಲಿ ಭೂಕಂಪ ಅಧ್ಯಯನ ಮಾಡುವ ಲೂನಾರ್ ಸೆಸಿಮಿಸಿಟಿ, ಹೊರ ಆವರಣದಲ್ಲಿನ ಪ್ಲಾಸ್ಮಾ, ಬಾಹ್ಯಾಕಾಶ ನೌಕೆ ಇಳಿದ ಪ್ರದೇಶದಲ್ಲಿನ ಧಾತುರೂಪದ ಸಂಯೋಜನೆ ಮುಂತಾದವುಗಳ ಅಧ್ಯಯನ ನಡೆಸಲಾಗುವುದು. ಉಡಾವಣೆ ಜುಲೈ 2ನೇ ವಾರಕ್ಕೆ ನಿಗದಿಯಾಗಿದೆ' ಎಂದು ಇಸ್ರೊ ಅಧಿಕಾರಿಗಳು 'ಪಿಟಿಐ' ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮಹಿಳಾ ಟೆಕಿ ಆತ್ಮಹತ್ಯೆ

ಬೆಂಗಳೂರು: ಆಂಧ್ರ ಪ್ರದೇಶದ ನಿವಾಸಿ, ನಗರದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ (ಟೆಕಿ) ಆಗಿದ್ದ ಬಿ.ಪಲ್ಲವಿ (26) ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದು, ಕಿರುಕುಳ ನೀಡಿದ್ದ ಆರೋಪದಡಿ ಪತಿ ಕುಟುಂಬದವರ ವಿರುದ್ಧ ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪಲ್ಲವಿ ಅವರು ಫೆಬ್ರುವರಿ ಯಲ್ಲಿ ಸುದರ್ಶನ್ ಅವರನ್ನು ಮದುವೆಯಾಗಿದ್ದು, ಕೆಂಪಾಪುರ ದಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ದಂಪತಿ ವಾಸವಿದ್ದರು. ಸಂಬಳವನ್ನು ತಮಗೆ ನೀಡಬೇಕೆಂದು ಪತಿ, ಅವರ ಕುಟುಂಬದವರು ಕಿರುಕುಳ ನೀಡುತ್ತಿದ್ದರು. ಬೇಸತ್ತಿದ್ದ ಪಲ್ಲವಿ ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಂದೆ–ತಾಯಿ ಅವರ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತ: ಪಿಯುಸಿ ವಿದ್ಯಾರ್ಥಿ ಸಾವು

ಬೆಂಗಳೂರು: ಹುಳಿಮಾವು ಠಾಣೆ ವ್ಯಾಪ್ತಿಯಲ್ಲಿ ಗುರುವಾರ ಸಂಜೆ ಸಂಭವಿಸಿದ ಅಪಘಾತದಲ್ಲಿ ದೊಡ್ಡಕಮ್ಮನಹಳ್ಳಿ ನಿವಾಸಿ, ಪಿಯುಸಿ ವಿದ್ಯಾರ್ಥಿ ಭರತ್ (17) ಎಂಬಾತ ಮೃತಪಟ್ಟಿದ್ದಾನೆ.

'ಭರತ್, ಬೈಕ್‌ನಲ್ಲಿ ಹೊರಟಿದ್ದಾಗ ಅವಘಡ ಸಂಭವಿಸಿದೆ. ಭರತ್ ಅಪ್ರಾಪ್ತ ವಯಸ್ಕನಾಗಿದ್ದು, ಚಾಲನಾ ಪರವಾನಗಿ ಇರಲಿಲ್ಲ'. ಎಂದು ಪೊಲೀಸರು ತಿಳಿಸಿದ್ದಾರೆ. 'ಈತ ಬೈಕ್‌ನಲ್ಲಿ ಕೆರೆ ರಸ್ತೆಯಲ್ಲಿ ಹೊರಟಿದ್ದ. ಅದೇ ಮಾರ್ಗದಲ್ಲಿ ಹಂಪ್ಸ್ ಇದ್ದು, ವೇಗವಾಗಿ ಚಲಾಯಿಸಿದ್ದರಿಂದ, ಬೈಕ್ ನಿಯಂತ್ರಣ ತಪ್ಪಿದ್ದು ಸೈಕಲ್ ಸವಾರರೊಬ್ಬರಿಗೆ ಬೈಕ್ ಗುದ್ದಿತ್ತು. ನಂತರ, ಹಂಪ್ಸ್‌ನಿಂದ ಬೈಕ್ ಉರುಳಿಬಿದ್ದಿತ್ತು. ತಲೆಗೆ ತೀವ್ರ ಪೆಟ್ಟು ಬಿದ್ದು ಭರತ್ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

ಪತಿ ಕೊಲೆ: ಪತ್ನಿ–ಪ್ರಿಯಕರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ಮಾರ್ಚ್ 21ರಂದು ನಡೆದಿದ್ದ ಆನಂದ್ ಎಂಬುವವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಪತ್ನಿ ಅನಿತಾ ಹಾಗೂ ಪ್ರಿಯಕರ ಹರೀಶ್ ಅವರನ್ನು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಆನಂದ್ ಮೃತದೇಹ ಅನುಮಾನಾಸ್ಪದ ರೀತಿಯಲ್ಲಿ ಪತ್ತೆಯಾಗಿತ್ತು. ಮರಣೋತ್ತರ ಪರೀಕ್ಷೆಯಲ್ಲಿ ಪುರಾವೆ ಸಿಕ್ಕಿತ್ತು. ಪತ್ನಿಯನ್ನು ಬಂಧಿಸಿ ವಿಚಾರಿಸಿದಾಗ ತಪ್ಪೊಪ್ಪಿಕೊಂಡರು. ನಂತರ, ಹರೀಶ್‌ನನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಆನಂದ್ ಹಾಗೂ ಅನಿತಾ ದಂಪತಿ ನಡುವೆ ಜಗಳ ಶುರುವಾಗಿತ್ತು. ಇದೇ ವೇಳೆಯೇ ಅನಿತಾ ಅವರಿಗೆ ಹರೀಶ್ ಪರಿಚಯವಾಗಿದ್ದು, ಇಬ್ಬರ ನಡುವೆ ಸಲುಗೆ ಬೆಳೆದಿತ್ತು. ನಂತರ, ಒಟ್ಟಿಗೆ ಜೀವನ ನಡೆಸಲು ಅವರಿಬ್ಬರು ಯೋಚಿಸಿದ್ದರು. ತಮ್ಮ ಸಂಬಂಧಕ್ಕೆ ಅಡ್ಡಿಯಾಗುತ್ತಾರೆಂಬ ಕಾರಣಕ್ಕೆ ಪತಿ ಆನಂದ್ ಅವರನ್ನು ಕೊಲೆ ಮಾಡಲು ಅನಿತಾ ಸಂಚು ರೂಪಿಸಿದ್ದರು. ಆನಂದ್ ಅವರಿಗೆ ನಿದ್ರೆ ಮಾತ್ರೆ ಬೆರೆಸಿದ್ದ ನೀರು ಕುಡಿಸಿ ಮಲಗಿಸಿದ್ದ ಪತ್ನಿ, ಪ್ರಿಯಕರನನ್ನು ಮನೆಗೆ ಕರೆಸಿದ್ದರು. ನಂತರ, ಇಬ್ಬರೂ ಸೇರಿ ಉಸಿರುಗಟ್ಟಿಸಿ ಆನಂದ್ ಅವರನ್ನು ಕೊಂದಿದ್ದರು' ಎಂದು ಪೊಲೀಸರು ತಿಳಿಸಿದರು.

'ಮೃತದೇಹವನ್ನು ಶೌಚಾಲಯದಲ್ಲಿ ಇರಿಸಿದ್ದ ಆರೋಪಿಗಳು, ಚಾಕುವಿನಿಂದ ಕೈ ಕೊಯ್ದಿದ್ದರು. ಆತ್ಮಹತ್ಯೆ ಎಂಬುದಾಗಿ ಬಿಂಬಿಸಲು ಕಥೆ ಕಟ್ಟಿದ್ದರು. ಇದೀಗ ಮರಣೋತ್ತರ ಪರೀಕ್ಷೆ ವರದಿಯಿಂದ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ' ಎಂದು ಪೊಲೀಸರು ಹೇಳಿದರು.

ಮಹಿಳೆ ಜತೆಗೆ ಸಲುಗೆಗಾಗಿ ಪತಿ ಹತ್ಯೆ: ಆರೋಪಿ ಸೆರೆ

ಅಪರಾಧ ಸುದ್ದಿ

ಬೆಂಗಳೂರು: ಮಹದೇವಪುರ ಠಾಣೆ ವ್ಯಾಪ್ತಿಯಲ್ಲಿ ಸ್ಥಳೀಯ ನಿವಾಸಿ, ಮೆಕ್ಯಾನಿಕ್ ಆಗಿದ್ದ ಉದಯ್ ಕುಮಾರ್ (33) ಎಂಬವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಆರೋಪಿ ಅನ್ವರ್ ಖಾನ್‌ನನ್ನು ಪೊಲೀಸರು ಬಂಧಿಸಿದ್ದಾರೆ.

'ಇಬ್ಬರು ಮಕ್ಕಳ ಜೊತೆ ಪತ್ನಿ ತವರಿಗೆ ಹೋಗಿದ್ದು, ಉದಯ್ ಒಬ್ಬರೇ ಮನೆಯಲ್ಲಿದ್ದರು. ಮನೆಗೆ ನುಗ್ಗಿದ್ದ ಅನ್ವರ್ ಖಾನ್, ಚಾಕುವಿನಿಂದ ಇರಿದು ಕೃತ್ಯ ಎಸಗಿದ್ದ' ಎಂದು ಪೊಲೀಸರು ಹೇಳಿದರು.

'ಪತಿ ಮೊಬೈಲ್ ಕರೆ ಸ್ವೀಕರಿಸದಿದ್ದಾಗ ಅನುಮಾನಗೊಂಡ ಪತ್ನಿ, ಸಂಬಂಧಿಕರಿಗೆ ಮಾಹಿತಿ ನೀಡಿದ್ದರು. ಸಂಬಂಧಿಕರು ಮನೆಗೆ ಹೋಗಿ ನೋಡಿದಾಗ, ಮೃತದೇಹ ಕಂಡಿತ್ತು. ತಡರಾತ್ರಿ ಪ್ರಕರಣ ದಾಖಲಾದ ಮೂರು ಗಂಟೆಯಲ್ಲೇ ಆರೋಪಿಯನ್ನು ಬಂಧಿಸಲಾಗಿದೆ' ಎಂದರು.

ಪತ್ನಿ ಸಲುಗೆ ಶಂಕೆ: 'ಉದಯ್ ಕುಮಾರ್ ಅವರ ಪತ್ನಿ, ಹಲಸೂರು ಬಳಿಯ ಔಷಧಿ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ಅದೇ ಮಳಿಗೆ ಎದುರಿನ ಹೋಟೆಲ್‌ನಲ್ಲಿ ಅನ್ವರ್ ಖಾನ್ ಕೆಲಸಕ್ಕಿದ್ದ. ಉದಯ್ ಅವರ ಪತ್ನಿ ಜೊತೆ ಸ್ನೇಹ ಬೆಳೆಸಿದ್ದ ಅನ್ವರ್, ಸಲುಗೆಯಿಂದ ಇರಲು ಒತ್ತಾಯಿಸುತ್ತಿದ್ದ. ಪತಿ ಕೊಂದರೆ ತಾನಾಗಿಯೇ ನನ್ನ ಬಳಿ ಬರುತ್ತಾಳೆಂದು ತಿಳಿದು ಕೊಲೆಗೆ ಸಂಚು ರೂಪಿಸಿದ್ದ. ಪ್ರಕರಣದಲ್ಲಿ ಪತ್ನಿ ಭಾಗಿಯಾಗಿರುವ ಬಗ್ಗೆ ಪುರಾವೆ ಸಿಕ್ಕಿಲ್ಲ' ಎಂದು ಪೊಲೀಸರು ಹೇಳಿದರು.

ಪ್ರಮಾಣ ವಚನ ಸಮಾರಂಭದ ಹಿನ್ನೆಲೆ • ಭದ್ರತೆಗೆ 1,500ಕ್ಕೂ ಹೆಚ್ಚು ಪೊಲೀಸರ ನಿಯೋಜನೆ

ಕ್ರೀಡಾಂಗಣ ಸುತ್ತಮುತ್ತ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಸಚಿವರ ಪ್ರಮಾಣ ವಚನ ಸಮಾರಂಭ ನಿಮಿತ್ತ ನಗರದ ಕಂಠೀರವ ಕ್ರೀಡಾಂಗಣ ಸುತ್ತಮುತ್ತಲಿನ ರಸ್ತೆಗಳಲ್ಲಿ ಶನಿವಾರ ಸಾರ್ವಜನಿಕರ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

'ಕ್ವೀನ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಮುಖ್ಯ ಕಚೇರಿ, ವಿಧಾನಸೌಧ, ಕಂಠೀರವ ಕ್ರೀಡಾಂಗಣ ಬಳಿ ಹೆಚ್ಚು ಜನರು ಸೇರುವ ಸಾಧ್ಯತೆ ಇದೆ. ಹೀಗಾಗಿ, ಈ ವ್ಯಾಪ್ತಿಯ ಕೆಲ ರಸ್ತೆಗಳಲ್ಲಿ ಬೆಳಿಗ್ಗೆ 9.30 ಗಂಟೆಯಿಂದ ಮಧ್ಯಾಹ್ನ 2.30 ಗಂಟೆಯವರೆಗೆ ಸಾರ್ವಜನಿಕರ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಸಾರ್ವಜನಿಕರು ಪರ್ಯಾಯ ರಸ್ತೆ ಬಳಸಬೇಕು' ಎಂದು ಸಂಚಾರ ವಿಭಾಗದ ಪೊಲೀಸರು ಕೋರಿದ್ದಾರೆ.

ವಾಹನ ನಿಲುಗಡೆಗೆ ವ್ಯವಸ್ಥೆ: 'ಕಾರ್ಯಕ್ರಮಕ್ಕೆ ಬರುವ ಗಣ್ಯರು, ತಮ್ಮ ವಾಹನಗಳನ್ನು ಸೇಂಟ್ ಜೋಸೆಫ್ಸ್ ಕಾಲೇಜು ಮೈದಾನದಲ್ಲಿ ನಿಲ್ಲಿಸಬಹುದು. ಇತರೆ ವಾಹನಗಳ ನಿಲುಗಡೆಗೆ ಬಿಬಿಎಂಪಿ ಮುಖ್ಯ ಕಚೇರಿ ಆವರಣ, ಬದಾಮಿ ಹೌಸ್, ಕೆ.ಜಿ. ರಸ್ತೆಯ ಎಡಬದಿ ಹಾಗೂ ಯುನೈಟೆಡ್ ಮಿಷನ್ ಕಾಲೇಜು ಮೈದಾನದಲ್ಲಿ ವ್ಯವಸ್ಥೆ ಮಾಡಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಬಿಗಿ ಭದ್ರತೆ: ಸಮಾರಂಭಕ್ಕೆ ಹೆಚ್ಚು ಜನರು ಸೇರುವ ನಿರೀಕ್ಷೆ ಇದ್ದು, ಬಿಗಿ ಭದ್ರತೆಗಾಗಿ 1,500ಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಲಾಗಿದೆ.

'ಕಮಿಷನರ್, ಹೆಚ್ಚುವರಿ ಕಮಿಷನರ್, ಡಿಸಿಪಿಗಳು, ಎಸಿಪಿಗಳು, ಇನ್‌ಸ್ಪೆಕ್ಟರ್‌ಗಳು ಹಾಗೂ ಸಿಬ್ಬಂದಿ ಜೊತೆಗೆ ಕೆಎಸ್‌ಆರ್‌ಪಿ ಹಾಗೂ ಸಿಎಆರ್ ಸಿಬ್ಬಂದಿಯನ್ನೂ ಬಳಸಿಕೊಳ್ಳಲಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಸ್ಫೋಟಕ, ಮೊನಚಾದ ಆಯುಧ, ಬೆಂಕಿ ಪೊಟ್ಟಣ, ಲೈಟರ್ ಹಾಗೂ ಇತರೆ ನಿರ್ಬಂಧಿತ ವಸ್ತುಗಳನ್ನು ಸಮಾರಂಭಕ್ಕೆ ಕೊಂಡೊಯ್ಯುವಂತಿಲ್ಲ' ಎಂದು ತಿಳಿಸಿದರು.

ನೂತನ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಪ್ರಮಾಣ ವಚನ ಸಮಾರಂಭಕ್ಕಾಗಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ಸಿದ್ಧತೆ ನಡೆಯಿತು –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಸಿಇಟಿ ಪರೀಕ್ಷಾರ್ಥಿಗಳಿಗೆ ಸೂಚನೆ

ಬೆಂಗಳೂರು: ಕಂಠೀರವ ಕ್ರೀಡಾಂಗಣದ ಸುತ್ತಮುತ್ತಲಿನ ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ಬರೆಯುವ ಅಭ್ಯರ್ಥಿಗಳಿಗೆ ತೊಂದರೆಯಾಗದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಪೊಲೀಸರು ಹಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಸಂಚಾರದಟ್ಟಣೆಯಲ್ಲಿ ಸಿಲುಕಿಕೊಂಡ ಅಭ್ಯರ್ಥಿಗಳು ಪೊಲೀಸರಿಗೆ ಪ್ರವೇಶಪತ್ರ ತೋರಿಸಿದರೆ ಅವರನ್ನು ಪರೀಕ್ಷಾ ಕೇಂದ್ರಗಳಿಗೆ ಕರೆದೊಯ್ಯಲು ನೆರವಾಗುವರು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ. ಪರೀಕ್ಷೆ ಬರೆಯಲಿರುವ ಅಭ್ಯರ್ಥಿಗಳು ಬೆಳಿಗ್ಗೆ 8.30ರ ಒಳಗೆ ಕೇಂದ್ರವನ್ನು ತಲುಪಬೇಕು ಕೋರಲಾಗಿದೆ.

ಕಂಠೀರವ ಕ್ರೀಡಾಂಗಣದ ಸುತ್ತಮುತ್ತಲ ಕಾಲೇಜುಗಳು:

- ಬಿಷಪ್ ಕಾಟನ್ ಮಹಿಳಾ ಪದವಿಪೂರ್ವ ಕಾಲೇಜು
- ಗುಡ್ ವಿಲ್ ಬಾಲಕಿಯರ ಪದವಿಪೂರ್ವ ಕಾಲೇಜು
- ಸೇಂಟ್ ಜೋಸೆಫ್ಸ್ ಪದವಿಪೂರ್ವ ಕಾಲೇಜು
- ಸೇಂಟ್ ಜೋಸೆಫ್ಸ್ ಇಂಡಿಯನ್ ಪಿಯು ಕಾಲೇಜು
- ಸೇಂಟ್ ಆ್ಯನ್ಸ್ ಬಾಲಕಿಯರ ಪಿಯು ಕಾಲೇಜು
- ಆರ್. ಬಿ.ಎ.ಎನ್.ಎಂ.ಎಸ್ ಪಿಯು ಕಾಲೇಜು
- ಎಸ್.ಜೆ.ಆರ್.ಸಿ. ಬಿಐಎಫ್‌ಆರ್ ಪಿಯು ಕಾಲೇಜು
- ಕ್ಯಾಥೆಡ್ರಲ್ ಕಾಂಪೋಸಿಟ್ ಪಿಯು ಕಾಲೇಜು
- ಸೇಂಟ್ ಯುಫ್ರಿಶಿಯಸ್ ಬಾಲಕಿಯರ ಪ್ರೌಢಶಾಲೆ ಮತ್ತು ಕಾಂಪೋಸಿಟ್ ಪಿಯು ಕಾಲೇಜು
- ಸ್ಟ್ರೇಸಿ ಮೆಮೋರಿಯಲ್ ಕಾಂಪೋಸಿಟ್ ಪಿಯು ಕಾಲೇಜು
- ಹಸನತ್ ಮಹಿಳಾ ಪಿಯು ಕಾಲೇಜು

ನಿರ್ದೇಶನಗಳು ಏನೇನು?

- ಮಧ್ಯಾಹ್ನದ ಸಿಇಟಿಗಾಗಿ ಸೇಂಟ್ ಜೋಸೆಫ್ ಪಿಯು ಕಾಲೇಜು ಕೇಂದ್ರಕ್ಕೆ ಬರುವ ಅಭ್ಯರ್ಥಿಗಳು, ಸೇಂಟ್ ಮಾರ್ಕ್ಸ್ ರಸ್ತೆ ಹಾಗೂ ವಿಠಲ್‌ಮಲ್ಯ ರಸ್ತೆ ಮೂಲಕ ಬಂದು ಯುಬಿಸಿಟಿ ಮುಂಭಾಗದ ರಸ್ತೆ ಮೂಲಕ ಒಳಗೆ ಪ್ರವೇಶಿಸಬೇಕು
- ಸೇಂಟ್ ಜೋಸೆಫ್ ಪರೀಕ್ಷಾ ಕೇಂದ್ರಕ್ಕೆ ಬರುವ ಅಭ್ಯರ್ಥಿಗಳಿಗೆ ಪರೀಕ್ಷಾ ಪ್ರಾಧಿಕಾರ ಉಪಾಹಾರ, ಊಟದ ವ್ಯವಸ್ಥೆ ಮಾಡಿದೆ.
- ಸೇಂಟ್ ಜೋಸೆಫ್ ಪರೀಕ್ಷಾ ಕೇಂದ್ರದ ವಿದ್ಯಾರ್ಥಿಗಳು ಸಂಚಾರ ಸಂಬಂಧಿತ ಸಮಸ್ಯೆಗಳಿದ್ದರೆ, ಎಸಿಪಿ ಮೊಬೈಲ್ ನಂಬರ್ 9480801809 ಸಂಪರ್ಕಿಸಬಹುದು

ಸಂಚಾರ ನಿರ್ಬಂಧದ ರಸ್ತೆಗಳು

- ಕ್ವೀನ್ಸ್ ವೃತ್ತದಿಂದ ಸಿದ್ದಲಿಂಗಯ್ಯ ವೃತ್ತ
- ಬಾಳೆಕುಂದ್ರಿ ವೃತ್ತದಿಂದ ಕ್ವೀನ್ಸ್ ವೃತ್ತ
- ಸಿಟಿಒ ವೃತ್ತದಿಂದ ಕ್ವೀನ್ಸ್ ವೃತ್ತ
- ಹಲಸೂರು ಗೇಟ್ ಕಡೆಯಿಂದ ಸಿದ್ದಲಿಂಗಯ್ಯ ವೃತ್ತ

ಬ್ಯಾನರ್, ಫ್ಲೆಕ್ಸ್ ಮರುಕಳಿಸಿದ ಪಾರುಪತ್ಯ

ಬೆಂಗಳೂರು: ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ, ಸಂಪುಟ ಸದಸ್ಯರ ಪ್ರಮಾಣವಚನ ಸ್ವೀಕಾರ ಸಮಾರಂಭದ ಹಿನ್ನೆಲೆಯಲ್ಲಿ ನಗರದಲ್ಲಿ ಮತ್ತೆ ಬ್ಯಾನರ್, ಫ್ಲೆಕ್ಸ್‌ಗಳು ಮರುಕಳಿಸಿವೆ.

ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯುವ ಕಂಠೀರವ ಕ್ರೀಡಾಂಗಣದ ಸುತ್ತ ಕಸ್ತೂರಬಾ, ವಿಠ್ಠಲ ಮಲ್ಯ ಮತ್ತು ರಾಜಾರಾಂ ಮೋಹನ್‌ರಾಯ್ ರಸ್ತೆಗಳಲ್ಲಿ ವಿಭಿನ್ನ ಬಗೆಯ ಫ್ಲೆಕ್ಸ್‌ಗಳು ಗಮನಸೆಳೆದವು. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸೋನಿಯಾಗಾಂಧಿ, ಪ್ರಿಯಾಂಕಾ ಗಾಂಧಿ ಅವರ ಚಿತ್ರವಿರುವ ವೃತ್ತಾಕಾರದ ಬ್ಯಾನರ್‌ಗಳು ಈ ರಸ್ತೆಗಳಲ್ಲಿ ರಾಜಾಜಿಸುತ್ತಿವೆ.

ನಗರದಲ್ಲಿ ಸಂಜೆ ಸುರಿದ ಸಣ್ಣ ಪ್ರಮಾಣದ ಮಳೆ ತುಸು ಹಿನ್ನಡೆ ತಂದರೂ, ನಂತರ ಅದನ್ನೆಲ್ಲ ಮೀರುವಂತೆ ತಯಾರಿ ತ್ವರಿತಗತಿಯಲ್ಲಿ ಸಾಗಿತು. ರಸ್ತೆಗಳ ಇಕ್ಕೆಲಗಳಲ್ಲಿ ಹಾಕಿರುವ ಫ್ಲೆಕ್ಸ್ ಮತ್ತು ಬ್ಯಾನರ್‌ಗಳಿಂದ ಸಂಚಾರಕ್ಕೆ ಅಡಚಣೆಯಾಗಿದೆ.

ಬ್ಯಾನರ್‌ಗಳಲ್ಲಿ ನಾಯಕರ ಚಿತ್ರಗಳ ಜೊತೆಗೆ ಕಾರ್ಯಕರ್ತರು, ಶಾಸಕರ ಚಿತ್ರಗಳು ಇವೆ. ಕ್ರೀಡಾಂಗಣ ಸುತ್ತ-ಮುತ್ತಲಿನ ರಸ್ತೆಗಳಲ್ಲದೆ, ಟೌನ್‌ಹಾಲ್, ಎನ್‌ಆರ್ ಸ್ಕ್ವೇರ್, ವಿಧಾನಸೌಧ, ಎಂ.ಜಿ.ರಸ್ತೆ ಸೇರಿ ಬಹುತೇಕ ಜಂಕ್ಷನ್‌ಗಳಲ್ಲಿ ಶುಭಾಶಯ ಕೋರುವ ಬ್ಯಾನರ್‌ಗಳಿವೆ.

ಇನ್ನು, ಕಾಂಗ್ರೆಸ್ ಶಾಸಕರಿಲ್ಲದ ಕ್ಷೇತ್ರಗಳೂ ಸೇರಿದಂತೆ ಕಾಂಗ್ರೆಸ್ ಶಾಸಕರಿರುವ ವಿಧಾನಸಭೆ ಕ್ಷೇತ್ರಗಳ ಜಂಕ್ಷನ್‌ಗಳಲ್ಲಿ ಅಲ್ಲಿನ ಶಾಸಕರ ಬೃಹತ್ ಬ್ಯಾನರ್‌ಗಳು ರಾರಾಜಿಸುತ್ತಿವೆ.

ಹೂಗುಚ್ಛಕ್ಕೆ ಬೇಡಿಕೆ: ನಗರದಲ್ಲಿ ಹೂಗುಚ್ಛ ಸಿದ್ಧಪಡಿಸುವ ಅಂಗಡಿಗಳಲ್ಲಿ ಮಾರಾಟ ಹೆಚ್ಚಾಗಿತ್ತು. ಅಲ್ಲದೆ, ನೂರಾರು ಹೂಗುಚ್ಛಗಳನ್ನು ಸಿದ್ಧಪಡಿಸಿ ಶನಿವಾರ ಬೆಳಿಗ್ಗೆಯೇ ನೀಡಬೇಕು ಎಂದು ಕಾರ್ಯಕರ್ತರು ಹಲವು ಮಳಿಗೆಗಳಲ್ಲಿ ಬುಕಿಂಗ್ ಮಾಡಿದ್ದರು.

'ಇಂತಹ ಬೇಡಿಕೆ ಬರುತ್ತದೆ ಎಂದು ಮೊದಲೇ ನಿರೀಕ್ಷಿಸಿದ್ದು, ಮೊದಲೇ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಅಲ್ಲದೆ, ಹೂವಿನ ಬೇಡಿಕೆಯನ್ನೂ ಹೆಚ್ಚು ಸಲ್ಲಿಸಲಾಗಿದೆ' ಎಂದು ಹೂಗುಚ್ಛ ವ್ಯಾಪಾರಿ ಹುಸೇನ್ ಹೇಳಿದರು.

ಮಾರುಕಟ್ಟೆಯಲ್ಲೂ ಹೂಗುಚ್ಛ ತಯಾರಿಸುವ ಸಾಮಗ್ರಿಗಳಿಗೂ ಹೆಚ್ಚಿನ ಬೇಡಿಕೆ ಇತ್ತು. ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಮುಂಜಾನೆ ಖರೀದಿ ಹೆಚ್ಚಾಗಿರುತ್ತದೆ. ಆದರೆ, ಶುಕ್ರವಾರ ಸಂಜೆಯಿಂದ ತಡರಾತ್ರಿವರೆಗೂ ಸಾಮಗ್ರಿಗಳನ್ನು ಕೊಂಡಯ್ಯುತ್ತಿದ್ದ ದೃಶ್ಯ ಕಂಡುಬಂತು.

ಮಳೆಯ ಸಿಂಚನ: ಶುಕ್ರವಾರ ಸಂಜೆ ಸಣ್ಣದಾಗಿ ಸುರಿದ ಮಳೆ ಸಿದ್ಧತೆಗೆ ಒಂದಷ್ಟು ಹಿನ್ನಡೆ ತಂದಿತ್ತು. ರಸ್ತೆಗಳಲ್ಲಿ ಮರಗಳನ್ನು ಕಟ್ಟಿ ಬ್ಯಾನರ್ ಅಳವಡಿಸುವ ಕೆಲಸ ರಾತ್ರಿಯಿಡೀ ನಡೆಯಿತು.

ಸುದ್ದಿ 2 ನಿಮಿಷ

ಗಾಣಿಗ ಪೀಠಕ್ಕೆ ಉತ್ತಾರಾಧಿಕಾರಿ ಆಗಲು ಮುಕ್ತ ಆಹ್ವಾನ

ನೆಲಮಂಗಲ: ಗಾಣಿಗ ಪೀಠಕ್ಕೆ ಉತ್ತರಾಧಿಕಾರಿಯಾಗಲು ಬಯಸುವ ಯುವಕರು ಮಠವನ್ನು ಸಂಪರ್ಕಿಸುವಂತೆ ತೈಲೇಶ್ವರ ಗಾಣಿಗರ ಮಹಾ ಸಂಸ್ಥಾನದ ಪೀಠಾಧಿಪತಿ ಪೂರ್ಣಾನಂದ ಪುರಿ ಸ್ವಾಮೀಜಿ ತಿಳಿಸಿದ್ದಾರೆ.

ಸಮೀಪದ ನಗರೂರಿನ ಮಠದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಉತ್ತರಾಧಿಕಾರಿಯಾಗಲು ಆಸಕ್ತಿ ಹೊಂದಿರುವವರು ಗಾಣಿಗ ಜನಾಂಗದ ಯುವಕರು ಮಠವನ್ನು ಸಂಪರ್ಕಿಸಬಹುದು. ಒಂದು ವೇಳೆ, ಗಾಣಿಗ ಜನಾಂಗದ ಯುವಕರು ಆಸಕ್ತಿ ತೋರದಿದ್ದರೆ, ಅನಾಥನನ್ನು ಕರೆತಂದು ಉತ್ತಾರಾಧಿಕಾರಿಯನ್ನಾಗಿ ನೇಮಿಸಲಾಗುವುದು' ಎಂದು ಘೋಷಿಸಿದರು.

'ಗಾಣಿಗರಿಗೆ ಪೀಠ ಸ್ಥಾಪಿಸುವುದು ಜೀವನದ ಗುರಿಯಾಗಿತ್ತು. ಪೀಠಾಧಿಪತಿಯಾಗಿ ಒಂದು ವರ್ಷ ಪೂರೈಸಿದ್ದೇನೆ. ಮೊದಲ ವಾರ್ಷಿಕೋತ್ಸವ ಭಾನುವಾರ ಬೆಳಿಗ್ಗೆ 10:30ಕ್ಕೆ ನಡೆಯಲಿದ್ದು, ಕೈಲಾಸಾಶ್ರಮದ ಜಯೇಂದ್ರಪುರಿ ಶ್ರೀಗಳು, ವನಕಲ್ಲು ಬಸವ ರಮಾನಂದ ಶ್ರೀಗಳು, ದೇವಾಂಗ ಗುರುಪೀಠದ ದಯಾನಂದ ಪುರಿ ಶ್ರೀಗಳು, ತೊಗಟವೀರ ಕ್ಷತ್ರಿಯ ದಿವ್ಯ ಜ್ಞಾನಾನಂದಗಿರಿ ಶ್ರೀಗಳು ಭಾಗವಹಿಸಲಿದ್ದಾರೆ' ಎಂದರು.

'ಪೀಠಾಧಿಪತಿಯಾಗುವ ಪಟ್ಟಭದ್ರರು ಹಲವು ತೊಂದರೆಗಳನ್ನು ನೀಡಿದರು. ಎಲ್ಲವನ್ನೂ ಮೆಟ್ಟಿನಿಂತು ಮಠ, ವಿದ್ಯಾರ್ಥಿನಿಲಯ, ಸಮುದಾಯ ಭವನ, ಶಾಲೆಯನ್ನು ಸರ್ಕಾರ ಹಾಗೂ ದಾನಿಗಳ ನೆರವಿನಿಂದ ಸ್ಥಾಪಿಸಿದ್ದೇನೆ' ಎಂದರು.

ಶ್ವಾಸಕೋಶದ ಕಸಿ ಯಶಸ್ವಿ

ಬೆಂಗಳೂರು: ನಗರದ 61 ವರ್ಷದ ವ್ಯಕ್ತಿಯೊಬ್ಬರಿಗೆ ಚೆನ್ನೈನ 'ಎಂಜಿಎಂ ಹೆಲ್ತ್‌ಕೇರ್'ನಲ್ಲಿ ಶ್ವಾಸಕೋಶದ ಕಸಿ ಕೈಗೊಳ್ಳಲಾಗಿದೆ. ಡಾ.ಕೆ.ಆರ್. ಬಾಲಕೃಷ್ಣನ್, ಡಾ.ಕೆ.ಜಿ.ಸುರೇಶ್‌ರಾವ್ ಮತ್ತು ಡಾ.ಅಪರ್ ಜಿಂದಾಲ್ ಅವರಿದ್ದ ತಜ್ಞರ ತಂಡ ಈ ಶಸ್ತ್ರಚಿಕಿತ್ಸೆ ಕೈಗೊಂಡಿದೆ.

'ಶ್ವಾಸಕೋಶದ ಕಸಿ ಸಂಕೀರ್ಣ ಮತ್ತು ಸವಾಲಿನ ಪ್ರಕ್ರಿಯೆಯಾಗಿದೆ. ದೇಹಕ್ಕೆ ಆಮ್ಲಜನಕ ಪೂರೈಸುವಲ್ಲಿ ಶ್ವಾಸಕೋಶ ಪ್ರಮುಖ ಅಂಗ. ಶ್ವಾಸಕೋಶಕ್ಕೆ ಹಾನಿಯಾದ ಸಂದರ್ಭದಲ್ಲಿ ಚಿಕಿತ್ಸೆ ಮತ್ತು ಇತರೆ ವಿಧಾನಗಳು ವಿಫಲವಾದ ಸಂದರ್ಭದಲ್ಲಿ ಕಸಿ ಮಾಡುವುದು ಅನಿವಾರ್ಯವಾಗುತ್ತದೆ' ಎಂದು ತಜ್ಞ ವೈದ್ಯ ಡಾ. ಅಪರ್ ಜಿಂದಾಲ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

'ದೈಹಿಕ ಮತ್ತು ಮಾನಸಿಕವಾಗಿ ಸಿದ್ಧರಾಗಿರುವವರಿಗೆ ಮಾತ್ರ ಈ ಕಸಿ ಮಾಡಲು ಸಾಧ್ಯ. ಶಸ್ತ್ರಚಿಕಿತ್ಸೆ ನಂತರ 21 ದಿನಗಳವರೆಗೆ ಆಸ್ಪತ್ರೆಯಲ್ಲಿ ವೈದ್ಯರ ನಿಗಾದಲ್ಲಿ ಇರಬೇಕಾಗುತ್ತದೆ. ಇದು ಆಯಾ ವ್ಯಕ್ತಿಯ ಮೇಲೆ ಅವಲಂಬನೆಯಾಗಿರುತ್ತದೆ' ಎಂದು ತಿಳಿಸಿದರು

ಎಂಜಿಎಂ ಹೆಲ್ತ್‌ಕೇರ್‌ನ ಸಹ ನಿರ್ದೇಶಕ ಡಾ.ಸುರೇಶ್ ರಾವ್ ಅವರು, 'ದಾನಿಗಳು ಲಭ್ಯವಾಗದ ಕಾರಣ ನಿರೀಕ್ಷಿತ ಮಟ್ಟದಲ್ಲಿ ಇಂತಹ ಕಸಿ ಶಸ್ತ್ರಚಿಕಿತ್ಸೆಗಳು ನಡೆಯುತ್ತಿಲ್ಲ. 'ದಾನಿಯ ಶ್ವಾಸಕೋಶ ಸ್ವೀಕರಿಸುವವರಿಗೆ ಹೊಂದಾಣಿಕೆಯಾಗುವುದು ಮುಖ್ಯ' ಎಂದು ವಿವರಿಸಿದರು.

ಮಾಜಿ ಶಾಸಕರ ವಿರುದ್ಧದ ದೂರು ರದ್ದು

ಬೆಂಗಳೂರು: ಆದಾಯ ಮೀರಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿ ಬೆಳಗಾವಿ ಜಿಲ್ಲೆಯ ಬಾಗೇವಾಡಿ ಕ್ಷೇತ್ರ ಪ್ರತಿನಿಧಿಸಿದ್ದ (ಈಗ ಇದು ಬೆಳಗಾವಿ ಗ್ರಾಮೀಣ ಕ್ಷೇತ್ರ) ಮಾಜಿ ಶಾಸಕ ಅಭಯ್ ಕುಮಾರ್ ಪಾಟೀಲ್ ವಿರುದ್ಧದ ಖಾಸಗಿ ದೂರನ್ನು ಹೈಕೋರ್ಟ್ ರದ್ದುಪಡಿಸಿದೆ.

ತಮ್ಮ ವಿರುದ್ಧ ಬೆಳಗಾವಿ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಅಭಯ್ ಕುಮಾರ್ ಪಾಟೀಲ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಕಲಂ19ರ ಅನುಸಾರ ದೂರು ದಾಖಲಿಸುವ ಮುನ್ನ ಪೂರ್ವಾನುಮತಿ ಪಡೆದಿಲ್ಲ. ಹೀಗಾಗಿ, ಪೂರ್ವಾನುಮತಿ ಇಲ್ಲದೆ ದಾಖಲಿಸಿದ ಖಾಸಗಿ ದೂರು ಮತ್ತು ಎಫ್‌ಐಆರ್ ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯ ಪಟ್ಟಿದೆ.

ತಂಬಾಕು ಉತ್ಪನ್ನಗಳ ಮಾರಾಟ, ಸೇವನೆಗೆ ಕಡಿವಾಣ ಹಾಕಲು ತಜ್ಞರ ಆಗ್ರಹ • ತೆರಿಗೆ ಹೆಚ್ಚಿಸಲು ಮನವಿ

'ನಿಯಮಬಾಹಿರ ಹುಕ್ಕಾಬಾರ್‌ಗಳ ನಿರ್ಬಂಧಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನುಬಾಹಿರ ಹುಕ್ಕಾಬಾರ್‌ಗಳ ವಿರುದ್ಧ ಕ್ರಮ, ತಂಬಾಕು ಉತ್ಪನ್ನಗಳ ಮಾರಾಟಕ್ಕೆ ಕಡಿವಾಣ ಹಾಕಲು ಕಾನೂನು ಬಲಗೊಳಿಸುವಿಕೆ, ತಂಬಾಕು ಉತ್ಪನ್ನಗಳಿಗೆ ತೆರಿಗೆ ಹೆಚ್ಚಿಸಬೇಕು ಎಂಬ ಒತ್ತಾಯಗಳು ವಿವಿಧ ಕ್ಷೇತ್ರಗಳ ತಜ್ಞರಿಂದ ಇಲ್ಲಿ ಕೇಳಿಬಂದವು.

ಕರ್ನಾಟಕ ನೋ ಫಾರ್ ಟೊಬ್ಯಾಕೊ, ಸರ್ಕಾರೇತರ ಸಂಸ್ಥೆ ಮಾಯಾ ಹಾಗೂ ಎಚ್‌ಸಿಜಿ ಆಸ್ಪತ್ರೆ ಜಂಟಿಯಾಗಿ ಶುಕ್ರವಾರ 'ಮಕ್ಕಳು ಹಾಗೂ ಯುವಜನರನ್ನು ತಂಬಾಕು, ಮಾದಕ ವಸ್ತುಗಳ ವ್ಯಸನದಿಂದ ರಕ್ಷಿಸುವಲ್ಲಿ ಮಾಧ್ಯಮದ ಪಾತ್ರ' ಕುರಿತು ಕಾರ್ಯಾಗಾರ ಆಯೋಜಿಸಿತ್ತು.

ಹೃದ್ರೋಗ ತಜ್ಞೆ ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ, 'ಚಲನಚಿತ್ರಗಳು ಹಾಗೂ ಕಿರುತೆರೆ ಧಾರಾವಾಹಿಗಳಲ್ಲಿ ಧೂಮಪಾನದ ದೃಶ್ಯ ತೋರಿಸುವುದು ಫ್ಯಾಷನ್ ಆಗಿದೆ. ಇದನ್ನು 'ಹೀರೋಯಿಸಂ' ಎಂಬಂತೆ ಬಿಂಬಿಸುತ್ತಿರುವುದು ದುರದೃಷ್ಟಕರ. ಇದರಿಂದ ಪ್ರಭಾವಿತರಾಗುವ ಯುವಜನರು ಧೂಮಪಾನ ವ್ಯಸನಿಗಳಾಗುತ್ತಿದ್ದಾರೆ. ಮಹಿಳೆಯರಲ್ಲೂ ಧೂಮಪಾನ ಪ್ರವೃತ್ತಿ ಹೆಚ್ಚಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್‌ನ ಪ್ರಗತಿ ಬಿ.ಹೆಬ್ಬಾರ್, 'ತಂಬಾಕು ಮಾರಾಟಕ್ಕೆ ಸಂಬಂಧಿಸಿದಂತೆ ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನಗಳ (ಕೋಟ್ಪಾ) ಕಾಯ್ದೆಯನ್ನು ಬಲಪಡಿಸಬೇಕು' ಎಂದು ಹೇಳಿದರು.

ಕರ್ನಾಟಕ ನೋ ಫಾರ್ ಟೊಬ್ಯಾಕೊ ಒಕ್ಕೂಟದ ಸಂಚಾಲಕ ಜಿತಿನ್ ಚಂದ್ರನ್, 'ತಂಬಾಕು ಉತ್ಪನ್ನಗಳು ಕೈಗೆಟುಕದಂತೆ ತೆರಿಗೆ ಹೆಚ್ಚಿಸಬೇಕು. ಗುಜರಾತ್, ಮಹಾರಾಷ್ಟ್ರ ಸೇರಿ ವಿವಿಧ ರಾಜ್ಯಗಳ ಮಾದರಿಯಲ್ಲಿ ಕರ್ನಾಟಕದಲ್ಲೂ ಹುಕ್ಕಾಬಾರ್ ನಿಷೇಧಿಸಬೇಕು' ಎಂದರು.

ತಂಬಾಕು ಉತ್ಪನ್ನಗಳ ಬಳಕೆ, ಮಾರಾಟಕ್ಕೆ ಇರುವ ವಯೋಮಿತಿಯನ್ನು 18ರಿಂದ 24ಕ್ಕೆ ಹೆಚ್ಚಿಸಬೇಕು ಎಂಬ ಅಭಿಪ್ರಾಯವೂ ಸಂವಾದದಲ್ಲಿ ವ್ಯಕ್ತವಾಯಿತು. 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಇದ್ದರು.

ಕಾರ್ಯಾಗಾರದಲ್ಲಿ (ಎಡದಿಂದ) ರಾಜ್ಯ ತಂಬಾಕು ನಿಯಂತ್ರಣ ಕೋಶದ ವ್ಯವಸ್ಥಾಪಕ ಪ್ರಭಾಕರ್, ರಾಜ್ಯ ಸಮಾಲೋಚಕಿ ಡಾ.ಶ್ರೀದೇವಿ, ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ, ಪ್ರಗತಿ ಬಿ.ಹೆಬ್ಬಾರ್ ಹಾಗೂ ಎಚ್‌ಸಿಜಿ ಆಸ್ಪತ್ರೆಯ ಡಾ.ಶಾಲಿನಿ ಠಾಕೂರ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ಕಡಿಮೆ ಬೆಲೆಗೆ ಲಭ್ಯ'

'ತಂಬಾಕು ಉತ್ಪನ್ನಗಳು ಕಡಿಮೆ ಬೆಲೆಗೆ ಲಭ್ಯವಾಗುತ್ತಿವೆ. ಅವುಗಳ ಬಳಕೆಯನ್ನು ನಿಯಂತ್ರಿಸುವ ಕ್ರಮಗಳು ಪರಿಣಾಮಕಾರಿಯಾಗಿಲ್ಲ. ತಂಬಾಕು ಉತ್ಪನ್ನಗಳಿಗೆ ನಿಗದಿಪಡಿಸಿದ ತೆರಿಗೆ ಹಣಕ್ಕಿಂತ, ಅವುಗಳ ಸೇವನೆಯಿಂದ ಕಾಣಿಸಿಕೊಳ್ಳುವ ಅನಾರೋಗ್ಯ ಸಮಸ್ಯೆಗಳಿಗೆ ವೆಚ್ಚ ಹೆಚ್ಚಾಗಲಿದೆ. ರಾಜ್ಯ ಸರ್ಕಾರವು ವಾರ್ಷಿಕ ಸರಾಸರಿ ₹983 ಕೋಟಿ ಅನ್ನು ತಂಬಾಕು ಸಂಬಂಧಿತ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆಗೆ ಖರ್ಚು ಮಾಡುತ್ತಿದೆ. ಅಪಾರ ಪ್ರಮಾದಲ್ಲಿ ಬೀಡಿ, ಸಿಗರೇಟ್ ತುಂಡುಗಳನ್ನು ಎಲ್ಲೆಂದರಲ್ಲಿ ಎಸೆಯಲಾಗುತ್ತಿದೆ. ಇದನ್ನು ತಡೆಯಲು ನಿಯಮಗಳನ್ನು ರೂಪಿಸಬೇಕು' ಎಂದು ಆರ್ಥಿಕ ತಜ್ಞ ಹಾಗೂ ಸಾರ್ವಜನಿಕ ಆರೋಗ್ಯ ನೀತಿಯ ವಿಶ್ಲೇಷಕ ಡಾ.ರಿಜೋ ಎಂ. ಜಾನ್ ಒತ್ತಾಯಿಸಿದರು.

ಇದೇ 21ಕ್ಕೆ ಬಿಜೆಪಿ ಆತ್ಮಾವಲೋಕನ ಸಭೆ

ಬೆಂಗಳೂರು: ಇದೇ 21ರಂದು ಚುನಾವಣಾ ಸೋಲಿನ ಬಗ್ಗೆ ಆತ್ಮಾವಲೋಕನ ಸಭೆಯನ್ನು ಬಿಜೆಪಿ ನಡೆಸಲಿದ್ದು, 23 ರಂದು ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ.

ಸಭೆಯಲ್ಲಿ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಚುನಾವಣಾ ನಿರ್ವಹಣಾ ಸಮಿತಿಯ ಸಂಚಾಲಕಿ ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ನಿರ್ಗಮಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರು ಭಾಗವಹಿಸಲಿದ್ದಾರೆ.

ಚುನಾವಣೆಯಲ್ಲಿ ಸೋಲಿನ ಕಾರಣಗಳ ಬಗ್ಗೆ ಚರ್ಚಿಸಲಾಗುವುದು. ಬಹಳಷ್ಟು ಕ್ಷೇತಗಳಲ್ಲಿ ಅತ್ಯಲ್ಪ ಮತಗಳ ಅಂತರದಲ್ಲಿ ಪಕ್ಷದ ಅಭ್ಯರ್ಥಿಗಳು ಸೋಲು ಕಂಡಿದ್ದು, ಇದಕ್ಕೆ ನೈಜ ಕಾರಣಗಳ ಬಗ್ಗೆ ವಿವರಣೆ ಪಡೆಯಲಾಗುವುದು ಎಂದು ಮೂಲಗಳು ಹೇಳಿವೆ. ಮಂಗಳವಾರ ನಡೆಯುವ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯೂ ನಡೆಯಲಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

318 ಬೋಗಿ ಪೂರೈಸಲು ಬಿಇಎಂಎಲ್ ಬಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಆರ್‌ಸಿಎಲ್‌ಗೆ 318 ಬೋಗಿಗಳನ್ನು ಪೂರೈಸಲು ಸರ್ಕಾರಿ ಸ್ವಾಮ್ಯದ ಬಿಇಎಂಎಲ್ ಅತಿ ಕಡಿಮೆ ದರದಲ್ಲಿ ಬಿಡ್ ಮಾಡಿದೆ.

ಬಿಇಎಂಎಲ್, ಅಲ್‌ಸ್ಟಾಮ್ ಟ್ರಾನ್ಸ್‌ಪೋರ್ಟ್ ಇಂಡಿಯಾ, ಸಿಎಎಫ್ ಮತ್ತು ಟಿಟಾಗಢ್ ವ್ಯಾಗನ್ ಕಂಪನಿಗಳು ಬೋಗಿಗಳನ್ನು ಪೂರೈಸಲು ಬಿಡ್ ಮಾಡಿದ್ದವು.

ಶುಕ್ರವಾರ ಬಿಡ್‌ಗಳನ್ನು ತೆರೆಯಲಾಗಿದ್ದು, ಹಣಕಾಸಿನ ಮೌಲ್ಯಮಾಪನ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

318 ಬೋಗಿಗಳಲ್ಲಿ 96 ಅನ್ನು ಕಾಳೇನ ಅಗ್ರಹಾರ–ನಾಗವಾರ ಮಾರ್ಗದಲ್ಲಿ (21 ಕಿ.ಮೀ) ಮೆಟ್ರೊ ಮಾರ್ಗದಲ್ಲಿ ಬಳಸಲಾಗುವುದು. ಈ ಮಾರ್ಗವು 2024ರಲ್ಲಿ ಸಿದ್ಧವಾಗಲಿದೆ.

96 ಬೋಗಿಗಳನ್ನು ಕೆ.ಆರ್. ಪುರ– ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗದಲ್ಲಿ ಬಳಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾಸರಹಳ್ಳಿ: ರಸ್ತೆ ದಾಟುವಾಗ ಅಪಘಾತ

ಹೆದ್ದಾರಿ ದಾಟಲು ಹರಸಾಹಸ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ರಾಷ್ಟ್ರೀಯ ಹೆದ್ದಾರಿ–4ರ ದಾಸರಹಳ್ಳಿ ಬಸ್ ನಿಲ್ದಾಣದ ಬಳಿ ಮೆಟ್ರೊ ನಿಲ್ದಾಣವು ಸಹ ಇದ್ದು, ನಾಗರಿಕರು, ವಿದ್ಯಾರ್ಥಿಗಳು ರಸ್ತೆ ದಾಟಲು ನಿತ್ಯ ಹರಸಾಹಸ ಮಾಡುತ್ತಿದ್ದಾರೆ.

ಬಸ್ ನಿಲ್ದಾಣಕ್ಕೆ ತೆರಳಲು ರಾಷ್ಟ್ರೀಯ ಹೆದ್ದಾರಿ ರಸ್ತೆ ದಾಟಿಕೊಂಡೇ ಹೋಗಬೇಕಾಗುತ್ತದೆ. ಸ್ಕೈವಾಕ್ ನಿರ್ಮಿಸಿಲ್ಲ. ರಸ್ತೆ ದಾಟುವಾಗ ಅನೇಕ ಬಾರಿ ಅಪಘಾತಗಳು ನಡೆದು ಪ್ರಾಣ ಕಳೆದುಕೊಂಡವರೂ ಇದ್ದಾರೆ.

'ಇಲ್ಲಿ ಸ್ಕೈವಾಕ್ ನಿರ್ಮಿಸುವಂತೆ ಹಲವು ಬಾರಿ ಹೋರಾಟ ಮಾಡಿ ಅಧಿಕಾರಿಗಳಿಗೆ ಮನವಿ ನೀಡಿದ್ದೆವು. ಸ್ಕೈವಾಕ್ ನಿರ್ಮಿಸುವ ಭರವಸೆಯನ್ನು ನೀಡಿದ್ದರು. ಆದರೆ, ಭರವಸೆ ಈಡೇರಿಸಿಲ್ಲ' ಎಂದು ಜನ್ಮಭೂಮಿ ನಾಗರಾಜು ಆಕ್ರೋಶ ವ್ಯಕ್ತಪಡಿಸಿದರು.

'ರಾಷ್ಟ್ರೀಯ ಹೆದ್ದಾರಿಯಾದ ಕಾರಣ ವಾಹನಗಳ ವೇಗ ಹೆಚ್ಚಿರುತ್ತದೆ. ಕೆಲವೊಮ್ಮೆ ಸಿಗ್ನಲ್ ಬಿದ್ದರೂ ವಾಹನಗಳನ್ನು ನಿಲ್ಲಿಸದೆ ಚಲಿಸುತ್ತಾರೆ. ಆದಷ್ಟು ಶೀಘ್ರ ಪಾದಚಾರಿ ಮಾರ್ಗ ನಿರ್ಮಿಸಿ ಅಪಘಾತಗಳನ್ನು ತಡೆಯಬೇಕು' ಎಂದು ಸಾಹಿತಿ ವೈ.ಬಿ. ಎಚ್.ಜಯದೇವ್ ಕೋರಿದರು.

ದಾಸರಹಳ್ಳಿ ರಾಷ್ಟ್ರೀಯ ಹೆದ್ದಾರಿ 4ರ ರಸ್ತೆ ದಾಟಲು ಜನರ ಹರಸಾಹಸ

ನಗರದಲ್ಲಿ ಇಂದು

14ನೇ ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಪ್ರೊ.ಟಿ.ಜಿ.ಸೀತಾರಾಂ, ಅಧ್ಯಕ್ಷತೆ: ವಿರಂದರ್ ಸಿಂಗ್ ಚೌಹಾಣ್, ಆಯೋಜನೆ ಹಾಗೂ ಸ್ಥಳ: ಗೀತಂ ವಿಶ್ವವಿದ್ಯಾಲಯ, ನಾಗದೇನಹಳ್ಳಿ, ಬೆಳಿಗ್ಗೆ 9.30

ದೀಪಕ್ ಶಂಕರ್ ಅವರ 'ಇನ್‌ಟು ದಿ ವೈಲ್ಡ್' ಏಕವ್ಯಕ್ತಿ ಛಾಯಾಚಿತ್ರಗಳ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ

ವಿಶ್ವ ಜೇನು ದಿನಾಚರಣೆ ಹಾಗೂ ಮಧುಮೇಳ: ಉದ್ಘಾಟನೆ: ಎಸ್. ವಿ.ಸುರೇಶ, ಮುಖ್ಯ ಅತಿಥಿಗಳು: ಛಾಯಾ ನಂಜಪ್ಪ, ಅಧ್ಯಕ್ಷತೆ: ಎನ್.ಬಿ. ಪ್ರಕಾಶ್, ಆಯೋಜನೆ: ಕೃಷಿ ವಿಶ್ವವಿದ್ಯಾಲಯ, ಸ್ಥಳ: ನಾರ್ಥ್ ಬ್ಲಾಕ್ ಆವರಣ, ಜಿಕೆವಿಕೆ, ಬೆಳಿಗ್ಗೆ 10

ರಾಗಿ ಕಣ ಸಂತೆ: ಉದ್ಘಾಟನೆ: ಲೈಲಾ ತ್ಯಾಬ್ಜಿ, ಸರೋಜಮ್ಮ ಚಂದ್ರಶೇಖರ್, ಸ್ಥಳ: ಶ್ರೀರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ ಶಾಲೆ ಆವರಣ, ಗೊಟ್ಟಿಗೆರೆ, ಬೆಳಿಗ್ಗೆ 11

'ಕನ್ನಡೇತರರಿಗೆ ಕನ್ನಡ ಕಲಿಸುವವರ ಕೈಪಿಡಿ' ಪುಸ್ತಕ ಬಿಡುಗಡೆ: ಚಿರಂಜೀವಿ ಸಿಂಗ್, ಅಧ್ಯಕ್ಷತೆ: ಎ.ಮುರಿಗೆಪ್ಪ, ಮುಖ್ಯ ಅತಿಥಿಗಳು: ಎಂ. ಅಬ್ದುಲ್ ರೆಹಮಾನ್ ಪಾಷ, ಶೇಖ್ ಹಾರೂನ್ ಸಪ್ದರ್, ಜನಾಬ್ ಇಕ್ಬಾಲ್ ಅಹ್ಮದ್, ಆಯೋಜನೆ: ಫೆಡರೇಷನ್ ಆಫ್ ಮುಸ್ಲಿಂ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್, ಸ್ಥಳ: ಬಿಫ್ಟ್ ಆಡಿಟೋರಿಯಂ, ದಾರುಸ್ಸಲಾಮ್ ಕಟ್ಟಡ, ಕ್ವೀನ್ಸ್ ರಸ್ತೆ, ಸಂಜೆ 4.30

'ನೆರಳ ನಿಧಾನ' ಪುಸ್ತಕ ಬಿಡುಗಡೆ: ಕೃತಿ ಬಗ್ಗೆ: ಎಚ್.ಎಲ್.ಪುಷ್ಪಾ, ಅಧ್ಯಕ್ಷತೆ: ವೂಡೇ ಪಿ.ಕೃಷ್ಣ, ಉಪಸ್ಥಿತಿ: ದ್ವಾರನಕುಂಟೆ ಪಾತಣ್ಣ, ಆಯೋಜನೆ: ಶೇಷಾದ್ರಿಪುರಂ ಸಂಜೆ ಕಾಲೇಜು, ಗೋಧೂಳಿ ಕನ್ನಡ ಸಂಘ, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಸಂಜೆ 5

ದತ್ತಿ ಪ್ರಶಸ್ತಿಗಳ ಪ್ರದಾನ: ಮುಖ್ಯ ಅತಿಥಿ: ರಾ.ಕೃ. ಶ್ರೀಧರಮೂರ್ತಿ, ಅಧ್ಯಕ್ಷತೆ: ಪಿ.ವಿ. ನಾರಾಯಣ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಶ್ರಿಯಾ ಡಿ., ಗೌರವ ಅತಿಥಿಗಳು: ಸತ್ಯನಾರಾಯಣ ರಾಜು, ರಕ್ಷಾ ಕಾರ್ತಿಕ್, ಸಂಧ್ಯಾ ಶರ್ಮಾ ಆಯೋಜನೆ: ನೃತ್ಯಗಂಗಾ ಪ್ರದರ್ಶನ ಕಲಾ ಕೇಂದ್ರ, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 5

ಎಂ.ನರಸಿಂಹಮೂರ್ತಿ ಅವರ 'ನೆನೆ ಮನವೇ' ಪುಸ್ತಕ ಬಿಡುಗಡೆ: ರವಿಸುಬ್ರಹ್ಮಣ್ಯ, ಅಧ್ಯಕ್ಷತೆ: ಬಾಬು ಕೃಷ್ಣಮೂರ್ತಿ, ಕೃತಿ ಬಗ್ಗೆ: ಎಸ್.ಆರ್. ಲೀಲಾ, ಉಪಸ್ಥಿತಿ: ಜಿ.ಬಿ. ಹರೀಶ್, ಆಯೋಜನೆ: ಮಾಧ್ಯಮ ಕ್ರಿಯೇಷನ್ಸ್, ಸ್ಥಳ: ಅಕ್ಷರಂ, ಶ್ರೀ ರಾಘವೇಂದ್ರಸ್ವಾಮಿ ಮಠದ ಪಕ್ಕ, ಗಿರಿನಗರ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಮೋನಾಲ್ ಎ. ಕೇಸ್ಕರ್, ಆಯೋಜನೆ: ನಾಟ್ಯ ನಿನಾದ ನೃತ್ಯಾಲಯ ಟ್ರಸ್ಟ್, ಸ್ಥಳ: ಉಡುಪಿ ಶ್ರೀ ಕೃಷ್ಣ ರಜತಾದ್ರಿ, ಸಂಪಿಗೆ ರಸ್ತೆ, ಮಲ್ಲೇಶ್ವರ, ಸಂಜೆ 5.30

ಕಾರಂತ–ತೇಜಸ್ವಿ ನಾಟಕೋತ್ಸವ 2023: 'ಚಂದ್ರಯಾನ' ಪುಸ್ತಕ ಬಿಡುಗಡೆ, ಉಪಸ್ಥಿತಿ: ಮಂಡ್ಯ ರಮೇಶ್, ಬಿ.ವಿ. ರಾಜಾರಾಂ, ಉಮಾಶಂಕರ್ ಅಪಾಲಿ, ಎಂ. ಭೈರೇಗೌಡ, ವಿ. ಗಂಗಾಧರ್, ನಾಟಕ ಪ್ರದರ್ಶನ: 'ಕರ್ವಾಲೋ', ಆಯೋಜನೆ: ರೂಪಾಂತರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಅನಾದ್ಯಂತ ಟೆಕ್ನೊ ಸಾಂಸ್ಕೃತಿಕ ಉತ್ಸವ: ಗಾಯನ: ದರ್ಶನ್ ರಾವಲ್, ಆಯೋಜನೆ ಹಾಗೂ ಸ್ಥಳ: ನಿಟ್ಟೆ ತಾಂತ್ರಿಕ ವಿದ್ಯಾಲಯ, ಯಲಹಂಕ

ದೆಹಲಿಯಲ್ಲಿ ಅಧಿಕಾರಿಗಳ ವರ್ಗಾವಣೆ ಪ್ರಾಧಿಕಾರ ರಚಿಸಿ ಸುಗ್ರೀವಾಜ್ಞೆ

ನವದೆಹಲಿ (ಪಿಟಿಐ): ರಾಜಧಾನಿ ನವದೆಹಲಿಯಲ್ಲಿ ಗ್ರೂಪ್ ಎ ಅಧಿಕಾರಿಗಳ ವರ್ಗಾವಣೆ, ನಿಯೋಜನೆ ಪ್ರಕ್ರಿಯೆ ಉಸ್ತುವಾರಿಗಾಗಿ 'ರಾಷ್ಟ್ರ ರಾಜಧಾನಿ ನಾಗರಿ ಸೇವಾ ಪ್ರಾಧಿಕಾರ'ವನ್ನು ಕೇಂದ್ರ ಸರ್ಕಾರ ರಚಿಸಿದೆ. ಈ ಸಂಬಂಧ ಶುಕ್ರವಾರ ಸುಗ್ರೀವಾಜ್ಞೆ ಹೊರಡಿಸಿದೆ.

ದಾದ್ರಾ ಮತ್ತು ನಗರ್ ಹವೇಲಿ (ನಾಗರಿಕ) ಸೇವೆ ಕೇಡರ್‌ನ (ಡಿಎಎನ್‌ಐಸಿಎಸ್) ಅಧಿಕಾರಿಗಳ ವಿರುದ್ಧದ ಶಿಸ್ತುಕ್ರಮ ಪ್ರಕ್ರಿಯೆಗಳು ಕೂಡಾ ಈ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡಲಿದೆ ಎಂದು ಸುಗ್ರೀವಾಜ್ಞೆಯಲ್ಲಿ ತಿಳಿಸಲಾಗಿದೆ.

ನವದೆಹಲಿಯಲ್ಲಿ ಸೇವಾ ವಲಯದ ಮೇಲಿನ ಅಧಿಕಾರವನ್ನು ದೆಹಲಿ ಸರ್ಕಾರದ ಸುಪರ್ದಿಗೆ ಒಪ್ಪಿಸುವ ಸುಪ್ರೀಂ ಕೋರ್ಟ್‌ನ ಆದೇಶ ಹೊರಬಿದ್ದ ಒಂದು ವಾರದ ನಂತರ ಪ್ರಾಧಿಕಾರವನ್ನು ರಚಿಸುವ ಸಂಬಂಧ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಜಾರಿಗೊಳಿಸಿದೆ.

ದೆಹಲಿ ಸರ್ಕಾರದ ಮುಖ್ಯಮಂತ್ರಿ ಅವರು ಪ್ರಾಧಿಕಾರದ ಅಧ್ಯಕ್ಷರಾಗಿದ್ದು, ಮುಖ್ಯ ಕಾರ್ಯದರ್ಶಿ, ಗೃಹ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಅವರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ ಎಂದು ತಿಳಿಸಲಾಗಿದೆ.

ಪ್ರಾಧಿಕಾರ ಸಭೆಯಲ್ಲಿ ಹಾಜರಿರುವ ಸದಸ್ಯರು ಮತ ಚಲಾಯಿಸುವ ಮೂಲಕ, ಬಹುಮತದ ಆಧಾರದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕು. ಪ್ರಾಧಿಕಾರದ ಎಲ್ಲ ಶಿಫಾರಸುಗಳನ್ನು ಸದಸ್ಯ ಕಾರ್ಯದರ್ಶಿ ಅವರು ದೃಢೀಕರಿಸಬೇಕು ಎಂದು ಸೂಚಿಸಲಾಗಿದೆ.

ಅಗತ್ಯಾನುಸಾರ ಅಧ್ಯಕ್ಷರ ಅನುಮೋದನೆ ಆಧರಿಸಿ ಪ್ರಾಧಿಕಾರದ ಸಭೆ ಕರೆಯಬೇಕು. ಪ್ರಾಧಿಕಾರದ ಜೊತೆಗೆ ಚರ್ಚಿಸಿ ಕೇಂದ್ರ ಸರ್ಕಾರವು ಪ್ರಾಧಿಕಾರಕ್ಕೆ ನೆರವು ನೀಡಬಹುದಾದ ವಿವಿಧ ವರ್ಗಗಳ ಅಧಿಕಾರಿಗಳು, ಸಿಬ್ಬಂದಿ ಅಗತ್ಯವನ್ನು ನಿರ್ಧರಿಸಬಹುದು ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಪಶ್ಚಿಮ ಬಂಗಾಳ ಸರ್ಕಾರದ ಅರ್ಜಿ: 'ಸುಪ್ರೀಂ'ನಿಂದ ವಜಾ

ನವದೆಹಲಿ(ಪಿಟಿಐ): ಪಶ್ಚಿಮ ಬಂಗಾಳದಲ್ಲಿ ರಾಮನವಮಿ ಆಚರಣೆ ವೇಳೆ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ನಡೆಸುತ್ತಿರುವ ತನಿಖೆಗೆ ತಡೆ ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಕೋಲ್ಕತ್ತ ಹೈಕೋರ್ಟ್ ಆದೇಶದ ಅನ್ವಯ ಹಿಂಸಾಚಾರದ ಬಗ್ಗೆ ಎನ್‌ಐಎ ತನಿಖೆ ನಡೆಸುತ್ತಿದೆ. ಇದನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎ. ನರಸಿಂಹ ಹಾಗೂ ಕೆ.ವಿ. ವಿಶ್ವನಾಥನ್ ಅವರಿದ್ದ ತ್ರಿಸದಸ್ಯ ಪೀಠವು, 'ಹೈಕೋರ್ಟ್ ಆದೇಶಕ್ಕೆ ತಡೆ ನೀಡುವುದಿಲ್ಲ. ಬೇಸಿಗೆ ರಜೆ ಮುಗಿದ ಬಳಿಕ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಾಗುವುದು' ಎಂದು ಎನ್‌ಐಎ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾಗೆ ತಿಳಿಸಿತು.

ಅಸಮರ್ಪಕ ನಿರ್ವಹಣೆ ಆರೋಪ: ರಿಜಿಜು ನಿರಾಕರಣೆ

ನವದೆಹಲಿ (ಪಿಟಿಐ): ಭೂವಿಜ್ಞಾನ ಸಚಿವರಾಗಿ ಕಿರಣ್ ರಿಜಿಜು ಅವರು ಶುಕ್ರವಾರ ಅಧಿಕಾರ ವಹಿಸಿಕೊಂಡರು. ಅಸಮರ್ಪಕ ನಿರ್ವಹಣೆಯ ಕಾರಣದಿಂದ ಹಠಾತ್ ಆಗಿ ಕಾನೂನು ಮತ್ತು ನ್ಯಾಯಾಂಗ ಸಚಿವ ಸ್ಥಾನದಿಂದ ಕೆಳಗಿಳಿಸಲಾಗಿದೆ ಎಂಬ ಅಭಿಪ್ರಾಯವನ್ನು ಅವರು ಅಲ್ಲಗಳೆದರು.

ತಮ್ಮ ಹಿಂದಿನ ಸಚಿವಾಲಯದ ಕುರಿತ ಪ್ರಶ್ನೆಗೆ ಉತ್ತರಿಸಲು ಅವರು ನಿರಾಕರಿಸಿದರು. 'ಹಿಂದಿನ ಸಚಿವಾಲಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಬೇಡಿ. ಅದು ಈಗ ಪ್ರಸ್ತುತ ಅಲ್ಲ' ಎಂದರು. 'ಇಂಥ ಬದಲಾವಣೆಗಳು ಮತ್ತು ವಿವಿಧ ಜವಾಬ್ದಾರಿಯನ್ನು ವಹಿಸುವುದು ಸರ್ಕಾರದ ಕಾರ್ಯವಿಧಾನದ ಸ್ವರೂಪ. ಇದು ಪ್ರಧಾನಮಂತ್ರಿಯ ವಿಶೇಷಾಧಿಕಾರ' ಎಂದು ಹೇಳಿದರು.

Superbrands 2023

ನಿಮ್ಮ ಅಡುಗೆ ಮನೆಯನ್ನು ಅಪ್‌ಗ್ರೇಡ್ ಮಾಡಿ.

ನಿಮ್ಮ ಮನೆಯನ್ನು ಅಪ್‌ಗ್ರೇಡ್ ಮಾಡಿ.

ಸ್ವಚ್ಛ್ ಶ್ರೇಣಿಯ ಈ ಪ್ರೆಷರ್ ಕುಕ್ಕರ್ ಸೋರಿಕೆ ನಿಯಂತ್ರಣ ಹೊಂದಿದೆ

ಸ್ವಚ್ಛ್ ಪ್ರೆಷರ್ ಕುಕ್ಕರ್

24%-42% ರಿಯಾಯಿತಿ*

ಭಾರತದ ಪ್ರಪ್ರಥಮ 6 ಪದರದ ನಾನ್ ಸ್ಟಿಕ್ ಕೋಟಿಂಗ್ ಇರುವ ಹಾರ್ಡ್ ಅನೋಡೈಸ್ಡ್ ಕುಕ್‌ವೇರ್

6-Layer Non-Stick Coating

ಡ್ಯೂರಾಸ್ಟೋನ್ ಕುಕ್‌ವೇರ್

32%-62% ರಿಯಾಯಿತಿ*

24%/66% ರಿಂದ ರಿಯಾಯಿತಿ*

ಏಪ್ರಿಲ್ 15 ರಿಂದ ಜೂನ್ 30 2023 ವರೆಗೆ

ಪ್ರೆಸ್ಟೀಜ್ ಏನನ್ನಾದರೂ ಯಾವುದಕ್ಕಾದರೂ ಎಕ್ಸ್‌ಚೇಂಜ್ ಆಫರ್*

ಸುಲಭ ಸ್ವಚ್ಛತೆಗಾಗಿ ಕ್ರಾಂತಿಕಾರಿ ವಿನ್ಯಾಸ

ಸ್ವಚ್ಛ್ ಗ್ಯಾಸ್ ಸ್ಟವ್

33%-43% ರಿಯಾಯಿತಿ*

ಕೈ ಬೀಸುವಷ್ಟರಲ್ಲಿ ನಿಮ್ಮ ಅಡುಗೆ ಮನೆ ಹೊಗೆ ರಹಿತ

ಆಸ್ಕರ್ ಚಿಮಣಿ

50% ರಿಯಾಯಿತಿ*

ಶಕ್ತಿಶಾಲಿ ಮಿಕ್ಸರ್ ಗ್ರೈಂಡರ್ ನಾದುವುದು, ಕತ್ತರಿಸುವುದು, ಅರೆಯುವುದು ಮತ್ತು ಸಂಗ್ರಹಿಸುವುದು.

ಎಂಡ್ಯುರಾ ಮಿಕ್ಸರ್ ಗ್ರೈಂಡರ್ 1000W

38%-48% ರಿಯಾಯಿತಿ*

ಪ್ರೆಷರ್ ಕುಕ್ಕರ್‌ನ ವಿಜಿಲ್ ಲೆಕ್ಕ ಹಾಕುವ ಅನುಕೂಲಕರ ಇಂಡಕ್ಷನ್ ಕುಕ್‌ಟಾಪ್



ಇಂಡಕ್ಷನ್ ಕುಕ್‌ಟಾಪ್ 2000W

38%-44% ರಿಯಾಯಿತಿ*

ಆರ್ದ್ರ ಮತ್ತು ಡ್ರೈ ಕ್ಲೀನಿಂಗ್ ಎರಡಕ್ಕೂ ಸೂಕ್ತವಾದ ವ್ಯಾಕ್ಯೂಮ್ ಕ್ಲೀನರ್

ಟೈಫೂನ್ 05 ವ್ಯಾಕ್ಯೂಮ್ ಕ್ಲೀನರ್

ಫ್ಲ್ಯಾಟ್ 46% ರಿಯಾಯಿತಿ*

ನಿಮ್ಮ ಅನುಕೂಲಕ್ಕಾಗಿ ಸಣ್ಣ ಉಪಕರಣಗಳು

25%-66% ರಿಯಾಯಿತಿ*

*ಷರತ್ತುಗಳು ಅನ್ವಯಿಸುತ್ತವೆ. ಈ ಕೊಡುಗೆಗಳು ಕೇವಲ ಎಕ್ಸ್‌ಚೇಂಜ್‌ಗೆ ಮಾತ್ರ ಅನ್ವಯಿಸುತ್ತದೆ. ಎಲ್ಲ ಡಿಸ್ಕೌಂಟ್‌ಗಳು ಎಮ್‌ಆರ್‌ಪಿ ಮೇಲೆ ಮಾತ್ರ. ಆಯ್ದ ಡೀಲರ್ ಔಟ್‌ಲೆಟ್‌ಗಳಲ್ಲಿ ದಾಸ್ತಾನು ಇರುವವರೆಗೆ ಮಾತ್ರ. ಬದಲಾವಣೆ ಬೆಲೆಯು ಖರೀದಿಸಿದ ಸಾಮಾನು ಮತ್ತು ಹಿಂತಿರುಗಿಸಲಾಗುವ ಹಳೆಯ ಸಾಮಾನುಗಳನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ : 10 ಲೀ ಅಲ್ಯುಮೀನಿಯಂ ಪ್ರೆಷರ್ ಕುಕ್ಕರ್‌ಗೆ ಬದಲಾವಣೆಯ ಮೇಲೆ ನೀವು 3 ಲೀ ಪಾಪ್ಯುಲರ್ ಸ್ವಚ್ಛ್ ಪ್ರೆಷರ್ ಕುಕ್ಕರ್ ಖರೀದಿಸಿದರೆ, ವಾಸ್ತವದ ಡಿಸ್ಕೌಂಟ್ ರೂ.615.00 ಆಗಿರುತ್ತದೆ. ವಾಸ್ತವಿಕ ಬದಲಾವಣೆ ಕೊಡುಗೆ ಬೆಲೆಯ ಬಗ್ಗೆ ತಿಳಿದುಕೊಳ್ಳಲು, ದಯವಿಟ್ಟು ಆಯ್ದ ಡೀಲರ್ ಅಂಗಡಿಗಳಲ್ಲಿ ಲಭ್ಯವಿರುವ ಯಾವುದಕ್ಕಾದರೂ ಏನನ್ನಾದರೂ ಬದಲಾವಣೆ ಕೊಡುಗೆ ಬೆಲೆ ಪಟ್ಟಿಯನ್ನು ನೋಡಿರಿ. ಹಿಂತಿರುಗಿಸಬಹುದಾದ ಹಳೆಯ ಸಾಮಾನುಗಳೆಂದರೆ ಅಲ್ಯುಮಿನಿಯಮ್/ಸ್ಟೈಯನ್‌ಲೆಸ್ ಸ್ಟೀಲ್ ಪ್ರೆಷರ್ ಕುಕ್ಕರ್‌ಗಳು, ಅಲ್ಯುಮಿನಿಯಮ್/ಸ್ಟೈಯನ್‌ಲೆಸ್ ಸ್ಟೀಲ್ ಕುಕ್‌ವೇರ್ (ಕನಿಷ್ಠ 400 ಗ್ರಾಂ ಪಾತ್ರೆ ತೂಕ), ಗ್ಯಾಸ್ ಸ್ಟವ್‌ಗಳು (ಕನಿಷ್ಠ 2 ಬರ್ನರ್‌ಗಳು), ಮಿಕ್ಸರ್ ಗ್ರೈಂಡರ್‌ಗಳು (ಬಾಡಿ, ಮೋಟರ್ ಮತ್ತು ಎರಡು ಸ್ಟೈನ್‌ಲೆಸ್ ಸ್ಟೀಲ್ ಜಾರ್‌ಗಳನ್ನು ಒಳಗೊಂಡಿರಬೇಕು), ಇಂಡಕ್ಷನ್ ಕುಕ್‌ಟಾಪ್‌ಗಳು, ರೈಸ್ ಕುಕ್ಕರ್‌ಗಳು, ಚಿಮ್ನಿಗಳು, ಹಾಬ್‌ಟಾಪ್‌ಗಳು, ವೆಟ್ ಗ್ರೈಂಡರ್‌ಗಳು, ಓಟಿಜಿಗಳು, ಕೆಟಲ್, ಟೋಸ್ಟರ್‌ಗಳು, ಇಸ್ತ್ರಿ ಪೆಟ್ಟಿಗೆಗಳು, ಮೈಕ್ರೊವೇವ್ ಅವೆನ್, ಜ್ಯೂಸರ್‌ಗಳು, ಬ್ಲೆಂಡರ್‌ಗಳು, ವಾಟರ್ ಪ್ಯೂರಿಫೈಯರ್‌ಗಳು ಮತ್ತು ವಾಕ್ಯೂಮ್ ಕ್ಲೀನರ್‌ಗಳು.

Prestige®

CUSTOMER CARE NO 080-6000 4411 | Follow 'TTK Prestige' on | PRESTIGE XPERT on WhatsApp 97423 34411 | shop.ttkprestige.com | ttk

ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?

Prestige Xclusive **Outer Ring Road-Hennur Coco,** Ph:7204250679; **Tumkur Rd. 8th Mile T.Dasarahalli,** Ph:9972541116; **Koramangala,** Ph:9742901122; **Bull Temple Rd,** Ph:26609012; **Malleswaram,** Ph:9448282470; **Rt Nagar Main Rd,** Ph:41698761; **Ganganagar Cbi Rd,** Ph:43705914; **Wheeler Rd,** Ph:25803080; **Kattriguppe Circle,** Ph:40900685; **Vijayanagar,** Ph:41330034; **Hsr Bda Cmplx,** Ph:25726991;**Marathahalli,** Ph:42197088; **Sanjaynagar,** Ph:41258300;**Banaswadi Ring Rd,** Ph:41634115; **Jayanagar,** Ph:9845066549; **J.P.Nagar,**Ph:41122235; **Rajarajeshwaringr,** Ph:28603540, 9008418800; **Kengeri Stl Town,** Ph:28485296;**Rajajinagar,** Ph:41731224;**B.T.M.Layout,** Ph:40939168;**Sarjapura Rd,** Ph:42038646;**Konankunte Cross,** Ph:26860350; **Nagharabhavi Bda Cmplx,** Ph:9739004750; **Begur, Ph:**8073408322; **Vidyaranayapura,** Ph:9845518824; **Wilson Garden,** Ph:-9480010720; **Brookefield,** Ph:28541555; **Ramamurthynagar,** Ph:420449545; **Kr Puram,** Ph:8861494277; **Cambridge Layout,** Ph:42074468; **Kaggadaspura,** Ph:7306666610; **Kammanahalli,** Ph:41606044;**Whitefield,** Ph:40907273;**Chandapura,** Ph:9036190725;**Hoskote,** Ph:27932227; **Dommasandra,** Ph:9611423555; **Hesarghatta Road,** Ph:28370400; **Uttarahalli,** Ph:9986879095; **Anjananagr Magadi Rd,** Ph:23281206; **Kadugodi,** Ph:8123042234; **Hosur Rd Huskur Gate,** Ph:9606406009; **Yelahanka Newtown,** Ph:8668034376; **Jayamahal Ext,** Ph:41616484; **Mahalakshmi Lyt,** Ph:23572233; **Jpnagar 7th Phase, Puttenahalli,** Ph:41465855; **Kumaraswamy Lyt,** Ph:9739011252;**Chandralyt,** Ph:9845146418; **Channasandra,** Ph:9986369569; **Sheshadripuram,** Ph:8711090976; **Kasturinagar,** Ph:08049923166; **Tc Palya,** Ph:9740333334; **Attibele,** Ph:9341221525; **Jigani,**Ph:8762069852; **Sarjapura Town,**Ph:9036373175; **Hosa Rd Junction,**Ph:9845597099; **Mathikere,** Ph:6366636592; **Basaveshwaranagar,** Ph:9739591008; **Thalagatapura,Vajarahalli,** Ph: 9964116888; **Hegganahalli,** Ph:28360289; **Gottigere,** Ph:8431241099;**Amruthahalli,** Ph:9141169883;**Ullal,** Ph:9686646565; **Jayanagar 4th Block East Extension,** Ph: 9945446335; **Nelamangala,** Ph:9632356627, **Kolar,** Ph:9738882584; **Channapatna,** Ph:9686661294; **Madhugiri,** Ph:9611552805; **Gauribidanur,** Ph:8317399465; **Gubbi,** Ph:9035195120,8095459040; **Banshankari Stage 2, Bda Complex, Ph:**49890679,9740677740; **Vijayabank Colony, Bilekahalli,** Ph:8970366139; **Whitefield,** Ph:08040907273; **Malur,** Ph:9845028859; **Kumbalagodu,** Ph:9845014860; **Devanahalli,** Ph:9845737576; **Thanisandra,** Ph:9686340159; **E.City Phase 1,** Ph:7557000060; **Hulimavu,** Ph:8904654433; **Singanayakanahalli,** Ph:9591059156; **Anekal,** Ph:8660070202.

Also Available At :Jayanagar: Sarathy, Ph:41210047;Vishaals, Ph:08022447285; Royal Mart, Ph:8790311104;Anjana Superstores, Ph:41301836; Kitchenmart, Ph:26652885;Aravinda, Ph:41301989;**Sajjan Rao Circle:** Vardhaman Intl, Ph:8073383878; **Vv Puram:**Kesariya, Ph:080-41531515, 41131535; **Bankcolony:**Vardhaman Ind, Ph:22428300;**Banashankari:**Varada Glass & Crky, Ph:9980949316;Patel Agn, Ph:26714285;Patel Ktchen Apl, Ph:9079061706;Chamundi Ind, Ph:26712633;**Bilekhalli:**Sree Pooja Ha, Ph:9036919084;**Begur Rd:**Omsar Intl, Ph:9241650196;**Bommanahalli:**Sri Durga Ha, Ph:9900674018;**Chamarjpet:**Vadirajstores, Ph:41517646;**Hosa Rd:**Maharaja Kw, Ph:9036400829;**Isro Layout:**Bhumi Kitchen, Ph:9916830850;**Jp Nagar:**Santripti, Ph:9986699193;**Kanakapura Rd:** Royal Mart, Ph:28425777;**Padmanabnagar:**Royalmart, Ph:9886088993;**Uttarahalli:**Royalmart, Ph:26394114;Rme Super Market, Ph:9964228208;**Mysore Road:**The Karnataka Metal Industry, Ph:9449342727;**Ayyappanagar:**Top Mart Sm, Ph:7204448111; **Babusapalya:**Karnataka Ha, Ph:8105754544;**Basaveshwarnagar:**Bigday Hm, Ph:9972517344;Mahaveer Ha, Ph:9844173501; Modern Colln, Ph:23583440;Aadhinath Kitchen Gal, Ph:41220555;**Gayathri Ngr:**J.K.Steel, Ph:23320853;**Giri Nagar:**Vidya Ent, Ph:9449988650;Matahji Ha, Ph: 7019385120; **Bagalgunte:**Royal Mart, Ph:9538000072;**Chandra Layout:**Rajguru Kw, Ph:9513034351; Pavan Kw, Ph:8618028319;**Ganganagar:**Patel Ind, Ph:8050899296;**Hanumathanagar:**Home Studio, Ph:9945933111; Kamal Appliances, Ph:9008800881;**Hesargatta Main Rd:**Royal Mart, Ph:28398200;**Horamavu:**Mamtha Ha, Ph:8880050050;**Hbr Layout:**Bhavani Ha, Ph:9845916164;**Harlur** Vinayaka Ha, Ph:7760531454:**Katriguppe:**Mk Metal Mart, Ph:9035779199;**Kr Puram:**Srm Elect, Ph:9845445748; Pooja Ele And, Ph:9738850503; **Kammanahalli:**Ramdev Steel, Ph:7259575732; Hm Traders, Ph:9964797616;**Konenkunte Cross:Mahalaxmi Elct & Ha, Ph:8123203588,Kasavanahalli:**Mathaji Ha, Ph:8880796036;**Kundanhalli:** New Prakash Ha, Ph:7090444111; **Kengeri:**Falcon Hm, Ph:7829999066;**Koramangala:**Sowbhagya Traders, Ph:7337733887;**Kmr Swy Layout:** Bhoomi Kitchen, Ph:9036850850;Patel Ha, Ph:8951979665;**Laggere:**Top Mart, Ph:9110246047;**Lnpura:**Arihanth Ent, Ph:7899633338;**Malleshwaram:**Deviprasad Ha, Ph:23564536;Bright Novelty, Ph:23343505; Hanuman Ha, Ph:8095429312;**Mathikere:**M.Bhawarlals Inc, Ph:41724740;Maharaja Agency, Ph:41278050;**Kadugodi:**Little Wonder, Ph:9961224224;**Madiwala:**Surya Ha, Ph:9449635332;**Malleshpalya:**Bajrang Ha, Ph:9449526463;New Bheru Ha, Ph:9448680738;Ramdev Ha, Ph:9035175860;Sri Bhagawathi Ha, Ph:9590575427; Maa Ambe Ha, Ph:8884198322;**Magadiroad:** Kesariya, Ph:6361685271;Royal Mart, Ph:23584498;**Annaporneshwari Nagar:**Deepak Ha, Ph:9148912736;**M S Palya:**Royal Mart, Ph:8147014079;**B Narayanpura:**Yellow Mart, Ph:7676726487;**Rajajinagar:**Mahalakshmi Metal House, Ph:23355994;Rathna Sales, Ph:23375566;Dhanalakshmi Kitchen World, Ph:41285801;Jayalakshmi Kw, Ph:9844755146;R S Mart, Ph:6363602929;Pooja Stl Cent, Ph:23327014; Vardhaman Intl, Ph:080-40974556;**Rajankunte:**Rmr Super Market, Ph:9108636912;**Rr Nagar:**Milan Ha, Ph:28605619;Pavan Kg, Ph:9739207043;**Tavarakere:**Mytri Mart Sm, Ph:9036466761;**T C Palya:**Rhk Super Mkt, Ph:9731668995;Big Day Sm, Ph:8867604818;Karnataka Ha, Ph:6363064024;**Tipsandra:**Pawar Ha, Ph:9980517021;Milan Ha, Ph:9986196375;Ramdev Ha, Ph:7406901545;**Ulsoor:**Aishwaryapranam Hn, Ph:9902788429;Pranam Steel Center, Ph:9448053781;**Udaynagar:**Mother India, Ph:9036189765;**Madanayakak Halli:** Vardhaman Intl, Ph: 8553170346;**Venkatapura:**Pooja Kg, Ph:9900426176;**Vijayanagar:**Vijaylaxmi Kw, Ph:9845022284;Maruthi Ha, Ph:8904689155;**Vidyarnapura:**Praksh Kw, Ph:8050620877;Mahalakshmi Steel House, Ph:9663375159;All Seasons Hm, Ph:9946728736;**Whitefield:** Little Wonder, Ph:7975372794; Rolla Hm, Ph:9148003448;Loyalcity, Ph:7892565797;Royal Mart, Ph:7079734574;**Yelahanka:**Royalmart, Ph:41705760; Mutha Electricals, Ph:22971920;Sai Kitchen World, Ph:9632811797; **Btm Layout:**Patel Agencies, Ph:9482853401;**Indranagar:**Kitchen Expert, Ph:7350436750; **Lalbagh Road:** Mohankheda Impex, Ph: 9986198760; **Nagrathpet:** Mahipal Entpr, Ph:41248070;Mahadev Dist, Ph:41514943;Shubham Home Appliances, Ph:9448674150;Bhagawathi Ha, Ph:9663850009;Marudhar Ha, Ph:9945444454;Ramdev Metal, Ph:8618014985; Puckraj & Sons, Ph:9448771841;B M Agencies, Ph:9886617028;Bhagavti Spares, Ph: 9513992993; Rajendra Appl, Ph:9036848312;Pramod Steel, Ph:9844074193;Jainam Marketing, Ph:9036783828;Usha Home Ind, Ph:41519106; Karnataka Metal Ind, Ph:9844515458;Renuka Mktg, Ph:41224591; Pooja Dist, Ph:41234022;**Bvk Iyengar Rd:** Jain Wire Emporium, Ph:9844731913;Crockery World, Ph:9845025420;Manglik Mktng, Ph:9448970501; Shahgulab Chand & Sons, Ph:080-41222095; **Chickpet:** Mahesh Dist, Ph:9916086085; **Vartur:** Kitchen Kettles, Ph:9148994805; **Haraluru:** Maharaja Kitchen World, Ph:9036400829; **Hsr Layout:** Pawan Home Appliances, Ph:9686549035;**Tumkur:**N.R Metal Agency, Ph:08162-275003;Kavitha Kitchen Ware, Ph:9538537166, Ph:Surya Metal Store, Ph:9731351050; Tumkur Trade Centre, Ph:9901432287;Darshan Ha, Ph:9632132567;Sudha Ha, Ph:9964011253;Niketana Trading Co, Ph:9538826927;**Gubbi:**Keerthi Gas Stove, Ph:9686004169;**Tiptur:** Sri Sai Electronics, Ph:8861432166;Srirama-Ent, Ph:9880362018;Kumar And Kumar, Ph:9141609900;**Turuvekere:**Sri Sai Electronics, Ph:8861432166;**Pavgada:**Shivanagere Ha, Ph:9880768236;Meenakshi Appl, Ph:9880360326;**Sira:**Swamy Ent, Ph:9741561491;Lakshmi Steel, Ph:9060434807; Mallikarjuna Home Appliances, Ph:8123206930;**Madhugiri:**Akshya Ha, Ph:9141786066;Vinayaka Store, Ph:9900219291;**Kunigal:**Karnataka Metal Stores, Ph:9448550390;New Karnataka Steel Centre, Ph:08132221548;Karnataka Home Appliances, Ph:8892197645;**Chiknayakakanhalli:**Rhythm Music, Ph:9845194086;Huliyar:Abhi Electronics, Ph:944866833;**Kgf:**Prakash Ha, Ph:9845113454;**Bangarpet:**Kumar Stores, Ph:9845935240;**Gauribidanur:**Sri Raju Hn, Ph:9448249527;Dhighvijaya Elec, Ph: 7204757456;**Kanakapura:**Sri Kabbalamma Ha, Ph:9880835508;**Kolar:**Reddy Ele, Ph:9844472531;Rakesh Ele, Ph:9880634555;Naveenprakash Ha, Ph:9844997787;**Malur:**Srm Elec, Ph:9845445748;Reddy Ele, Ph:9844435121;**Vijayapura:**Rmcity, Ph:9845164990;Reddy Ele, Ph:9900336061;**Devanahalli:**New Sowmya Ele, Ph:9141335210;**Chintamani:**Great India Ele, Ph:9742963551;Lavanya Stores, Ph:9242498294. **For Franchisee Enquiry, Please Contact: Goutham G Ramaswamy, Ph:9663242707.**

ALSO AVAILABALE AT: SPAR Hypermarket



ಸಕಲೇಶಪುರ ತಾಲ್ಲೂಕಿನ ಬಾಗೆ ಬಳಿ ಸಾಕಾನೆಗಳ ಸಹಾಯದಿಂದ ವಯಸ್ಸಾದ ಮಖ್ನಾ ಆನೆಯನ್ನು ಶುಕ್ರವಾರ ಸೆರೆ ಹಿಡಿಯಲಾಯಿತು – ಪ್ರಜಾವಾಣಿ ಚಿತ್ರ

ಮಖ್ನಾ ಆನೆ ಸೆರೆ: ಶಿಬಿರಕ್ಕೆ ರವಾನೆ

ಪ್ರಜಾವಾಣಿ ವಾರ್ತೆ

ಹಾಸನ: ಬಂಡೀಪುರ ಅರಣ್ಯಕ್ಕೆ ಬಿಟ್ಟು ಬಂದಿದ್ದರೂ, ಮತ್ತೆ ಜಿಲ್ಲೆಗೆ ಬಂದಿದ್ದ ವಯಸ್ಸಾದ ಮಖ್ನಾ (ದಂತವಿಲ್ಲದ ಗಂಡಾನೆ) ಕಾಡಾನೆಯನ್ನು ಶುಕ್ರವಾರ ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದು ದುಬಾರೆ ಆನೆ ಶಿಬಿರಕ್ಕೆ ರವಾನಿಸಿದರು.

ಸಾಕಾನೆಗಳೊಂದಿಗೆ ಬೆಳಿಗ್ಗೆ ಕಾರ್ಯಾಚರಣೆ ಆರಂಭಿಸಿದ ಸಿಬ್ಬಂದಿ, ಸಕಲೇಶಪುರ ತಾಲ್ಲೂಕಿನ ಬಾಗೆ ಬಳಿ ಆನೆ ಪತ್ತೆ ಹಚ್ಚಿದ್ದರು.

ಅರವಳಿಕೆ ಚುಚ್ಚು ಮದ್ದು ಮೂರು ಬಾರಿ ಚುಚ್ಚುಮದ್ದು ನೀಡಿದರೂ, ಆನೆ ಮೇಲೆ ಪರಿಣಾಮ ಬೀರಲಿಲ್ಲ. ನಾಲ್ಕನೇ ಬಾರಿಗೆ ಚುಚ್ಚುಮದ್ದು ನೀಡಿದಾಗ, ಬಾಗೆಯ ಟಾಟಾ ಎಸ್ಟೇಟ್‌ನಲ್ಲಿ ಹೋಗಿ ನಿಂತಿತ್ತು. ನಂತರ ಹಗ್ಗದಿಂದ ಕಟ್ಟಿ ಲಾರಿಗೆ ಏರಿಸಲಾಯಿತು.

ಜನರಿಗೆ ಉಪಟಳ ನೀಡುತ್ತಿದ್ದ ಆನೆಯನ್ನು ಕಳೆದ ವರ್ಷ ಜೂನ್‌ನಲ್ಲಿ ಸೆರೆ ಹಿಡಿದು, ಬಂಡೀಪುರ ಅರಣ್ಯಕ್ಕೆ ಬಿಡಲಾಗಿತ್ತು. ಆದರೆ, 45 ದಿನಗಳ ನಂತರ ಮತ್ತೆ ಸಕಲೇಶಪುರ ಹಾಗೂ ಬೇಲೂರು ತಾಲ್ಲೂಕಿನಲ್ಲಿ ಪ್ರತ್ಯಕ್ಷವಾಗಿತ್ತು. ಈ ಹಿಂದೆ ದಾಳಿ ನಡೆಸಿದ್ದ ಮನೆ, ನ್ಯಾಯಬೆಲೆ ಅಂಗಡಿಗಳ ಮೇಲೆಯೇ ದಾಳಿ ಮುಂದುವರಿಸಿತ್ತು.

'ಆನೆಯನ್ನು ಶಿಬಿರಕ್ಕೆ ಕಳಿಸಿ ಪಳಗಿಸುವ ಯೋಚನೆ ಇದೆ' ಎಂದು ಡಿಎಫ್‌ಒ ಕೆ.ಹರೀಶ್ ತಿಳಿಸಿದ್ದಾರೆ.

ಬನ್ನೇರುಘಟ್ಟ ಜೈವಿಕ ಉದ್ಯಾನ: ನೂರಕ್ಕೂ ಹೆಚ್ಚು ಅನಾಥ ಮರಿಗಳಿಗೆ ಮಡಿಲು

ತಬ್ಬಲಿ ಮರಿಗಳ ತಾಯಿ ಸಾವಿತ್ರಮ್ಮ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಯಿಯಿಂದ ದೂರವಾದ ಮತ್ತು ತಬ್ಬಲಿಯಾದ ಹುಲಿ, ಚಿರತೆ, ಕರಡಿ ಮರಿಗಳು ಸೇರಿದಂತೆ ಅನೇಕ ವನ್ಯಜೀವಿಗಳಿಗೆ ಬನ್ನೇರುಘಟ್ಟ ಜೈವಿಕ ಉದ್ಯಾನದ ಪಶುವೈದ್ಯಕೀಯ ಆಸ್ಪತ್ರೆಯ ಸಹಾಯಕಿ ಸಾವಿತ್ರಮ್ಮ ತಾಯಿಯಾಗಿದ್ದಾರೆ.

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಈವರೆಗೂ ನೂರಾರು ಅನಾಥ ಮರಿಗಳನ್ನು ಸ್ವಂತ ಮಕ್ಕಳಂತೆ ಅಕ್ಕರೆಯಿಂದ ಆರೈಕೆ ಮಾಡಿ ಪೋಷಣೆ ಮಾಡಿದ್ದಾರೆ.

ಬನ್ನೇರುಘಟ್ಟ ಸಮೀಪದ ಶೀಲೀಂದ್ರ ದೊಡ್ಡಿಯ ಸಾವಿತ್ರಮ್ಮ 20 ವರ್ಷಗಳಿಂದ ಬನ್ನೇರುಘಟ್ಟ ಜೈವಿಕ ಉದ್ಯಾನದ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ಸಹಾಯಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾಡಿನಲ್ಲಿ ಆಕಸ್ಮಿಕವಾಗಿ ತಾಯಿಯಿಂದ ದೂರವಾದ ಅಥವಾ ತಬ್ಬಲಿಯಾದ ಹುಲಿ, ಕರಡಿ, ಚಿರತೆ, ಜಿಂಕೆ, ಸಿಂಹ ಮರಿಗಳನ್ನು ಉದ್ಯಾನದ ಆಸ್ಪತ್ರೆಗೆ ತರಲಾಗುತ್ತದೆ. ಕಾಡಿನ ತಬ್ಬಲಿಗಳು ಇಲ್ಲಿಗೆ ಬಂದ ನಂತರ ಸಾವಿತ್ರಮ್ಮ ಮಡಿಲು ಸೇರುತ್ತವೆ. ಮರಿಗಳನ್ನು ಪ್ರೀತಿಯಿಂದ ಆರೈಕೆ ಮಾಡುವುದು ಅವರಿಗೆ ಅತ್ಯಂತ ಖುಷಿಯ ಕೆಲಸ. ವನ್ಯಜೀವಿಗಳನ್ನು ಸ್ವಂತ ಮಕ್ಕಳಂತೆ ಆರೈಕೆ ಮಾಡಿ ಬೆಳೆಸಿದ್ದಾರೆ. ಇದುವರೆಗೂ 50 ಚಿರತೆ, 15 ಸಿಂಹ, 7 ಹುಲಿ, ಹಲವಾರು ಜಿಂಕೆ ಮರಿಗಳು ಸೇರಿದಂತೆ ಸುಮಾರು ನೂರಕ್ಕೂ ಹೆಚ್ಚು ಅನಾಥ ಮರಿಗಳನ್ನು ಅವರು ಬೆಳೆಸಿದ್ದಾರೆ.

ವನ್ಯಜೀವಿಗಳ ಮರಿಗಳನ್ನು ಸಾಕುವುದು ಅತ್ಯಂತ ಸವಾಲಿನ ಕೆಲಸ. ಮರಿಗಳ ನಡವಳಿಕೆ, ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿ ಅವುಗಳ ಬೇಕು, ಬೇಡಗಳನ್ನು ಅರ್ಥ ಮಾಡಿಕೊಂಡು ಕಾಳಜಿಯಿಂದ ಬೆಳೆಸಬೇಕು. ಆ ಕೆಲಸವನ್ನು ಸಾವಿತ್ರಮ್ಮ ವ್ರತದಂತೆ ಮಾಡುತ್ತಿದ್ದಾರೆ.

ಪುಟ್ಟ ಮರಿಗಳು ಆರೈಕೆಗಾಗಿ ಆಸ್ಪತ್ರೆಗೆ ಬಂದಾಗ ಕೆಲವೊಮ್ಮೆ ರಜೆಯನ್ನೂ ತೆಗೆದುಕೊಳ್ಳದೆ ಮರಿಗಳ ಲಾಲನೆ, ಪಾಲನೆಯಲ್ಲಿ ತೊಡಗಿದ ನಿದರ್ಶನಗಳಿವೆ.

'ಮರಿಗಳಿಗೆ ಬಾಟಲಿಯಲ್ಲಿ ಹಾಲು ಕುಡಿಸಬೇಕಾದರೆ ಹಲವಾರು ಬಾರಿ ಪರಚುತ್ತವೆ, ಕೈ, ಮೈ ಕಚ್ಚುತ್ತವೆ. ರಕ್ತ ಬರುತ್ತದೆ. ಒಂದು ತಿಂಗಳೊಳಗಿನ ಮರಿಗಳನ್ನು ತೊಡೆಯ ಮೇಲೆ ಮಲಗಿಸಿಕೊಂಡು ಬಾಟಲ್ ಮೂಲಕ ಹಾಲು ನೀಡಬೇಕಾಗುತ್ತದೆ' ಎಂದು ಸಾವಿತ್ರಮ್ಮ 'ಪ್ರಜಾವಾಣಿ' ಜತೆ ಅನುಭವ ಬಿಚ್ಚಿಟ್ಟರು.

ವನ್ಯಜೀವಿಗಳ ಮರಿಗಳ ಮಲ, ಮೂತ್ರ ಸ್ವಚ್ಛ ಮಾಡುವುದು ಕಷ್ಟದ ಕೆಲಸ. ಪ್ರತಿದಿನ ಮರಿಗಳಿಗೆ ಬಳಸುವ ಬಟ್ಟೆಗಳನ್ನು ಬದಲಾಯಿಸಬೇಕಾಗುತ್ತದೆ. ಕೆಲವೊಮ್ಮೆ ಮರಿಗಳು ಮಲ, ಮೂತ್ರ ವಿಸರ್ಜನೆ ಮಾಡುವುದಿಲ್ಲ. ಆ ಸಂದರ್ಭದಲ್ಲಿ ಹತ್ತಿ ಬಳಸಿ ಅವುಗಳ ಗುದದ್ವಾರದಲ್ಲಿ ಒತ್ತಡ ಹಾಕಬೇಕಾಗುತ್ತದೆ' ಎನ್ನುತ್ತಾರೆ. 'ಒಂದು-ಒಂದೂವರೆ ತಿಂಗಳ ನಂತರ ಮರಿಗಳಿಗೆ ಬಟ್ಟಲಿನಲ್ಲಿ ಹಾಲು ಹಾಕಿದರೆ ಕುಡಿಯುತ್ತವೆ. ಆದರೆ, ಪ್ರಾರಂಭದ ದಿನದಲ್ಲಿ ಒಂದೂವರೆ ತಿಂಗಳು ಸಾಕುವುದು ಅತ್ಯಂತ ಸವಾಲಿನ ಕೆಲಸ. 15-20 ನಿಮಿಷಗಳಿಗೊಮ್ಮೆ ಹಾಲು ನೀಡುತ್ತಿರಬೇಕು. ಈ ಕಾಯಕದಲ್ಲಿ ಆಸ್ಪತ್ರೆಯ ಎಲ್ಲ ಸಿಬ್ಬಂದಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ' ಎಂದು ಉದ್ಯಾನದ ವೈದ್ಯ ಡಾ.ಉಮಾಶಂಕರ ಹೇಳುತ್ತಾರೆ.

ಸಾವಿತ್ರಮ್ಮ ಕಂಡರೆ ಸಾಕು ಉದ್ಯಾನದ ಚಿರತೆ ಮರಿಗಳು ಮಕ್ಕಳಂತೆ ಓಡಿ ಬಂದು ಮುತ್ತಿ ಕೊಂಡು ಚಿನ್ನಾಟವಾಡುತ್ತ ಪ್ರೀತಿಯ ಮಳೆಗರೆಯುತ್ತವೆ. ಸಾವಿತ್ರಮ್ಮ ಕೂಡ ಅಷ್ಟೇ ಎಲ್ಲ ಮರಿಗಳನ್ನೂ ಮಕ್ಕಳಂತೆ ಮುದ್ದಾಡುತ್ತಾರೆ. ಆಗ ಅವರ ಕಣ್ಣಲ್ಲಿ ಕಾಣುವ ಸಾರ್ಥಕ ಭಾವ, ಮೊಗದಲ್ಲಿ ಮೂಡುವ ಮಂದ ಹಾಸವನ್ನು ಸಹೋದ್ಯೋಗಿಗಳು ಕಣ್ತುಂಬಿಕೊಳ್ಳುತ್ತಾರೆ.



ಸಾವಿತ್ರಮ್ಮ ಅವರನ್ನು ಕಂಡೊಡನೆ ಓಡಿ ಬಂದು ಮುತ್ತಿಕೊಂಡ ಅನಾಥ ಚಿರತೆ ಮರಿಗಳು

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ — ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕ್ಯೂಆರ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು - 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾದಗಿರಿ: 45.04 ಡಿಗ್ರಿ ಸೆ.

ಪ್ರಜಾವಾಣಿ ವಾರ್ತೆ

ಯಾದಗಿರಿ/ಕಲಬುರಗಿ: ಪ್ರಸಕ್ತ ಬೇಸಿಗೆಯಲ್ಲಿ ಅತಿ ಹೆಚ್ಚಿನ ತಾಪಮಾನ 45.04 ಡಿಗ್ರಿ ಸೆಲ್ಸಿಯಸ್ ಶುಕ್ರವಾರ ಯಾದಗಿರಿ ಹೋಬಳಿ ವ್ಯಾಪ್ತಿಯಲ್ಲಿ ದಾಖಲಾಗಿದೆ.

ಉತ್ತರ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ರಾಜ್ಯದ ಸಾಮಾನ್ಯ ಉಷ್ಣಾಂಶಕ್ಕಿಂತ 1.6 ರಿಂದ 3.0 ಡಿಗ್ರಿ ಸೆಲ್ಸಿಯಸ್‌ವರೆಗೆ ಅಧಿಕ ತಾಪಮಾನ ಇದೆ. ಕಲಬುರಗಿ, ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ 43 ರಿಂದ 43.9 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಕರ್ನಾಟಕ ರಾಜ್ಯ ವಿಪತ್ತು ಮೇಲ್ವಿಚಾರಣಾ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಅನ್ವಯ ರಾಯಚೂರಿನ 23, ಕಲಬುರಗಿಯ 11, ಯಾದಗಿರಿಯ 9, ಬಳ್ಳಾರಿಯ 4, ಕೊಪ್ಪಳ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ತಲಾ 3 ಹಾಗೂ ಗದಗ ಒಂದು ಪ್ರದೇಶದಲ್ಲಿ ಅಧಿಕ ತಾಪಮಾನ ದಾಖಲಾಗಿದೆ. ಮುಂದಿನ 5 ದಿನ ಇದೇ ರೀತಿ ವಾತಾವರಣ ಇರಲಿದೆ.

'ಉತ್ತರ ಭಾರತದಿಂದ ಯಥೇಚ್ಛವಾಗಿ ಬಿಸಿಗಾಳಿ ಬೀಸುತ್ತಿದೆ. ಮುಂದಿನ ಕೆಲ ವಾರಗಳಲ್ಲಿ ಮುಂಗಾರು ಮಾರುತ ಪ್ರವೇಶ ಆಗಲಿದೆ. ಬೇಸಿಗೆಯ ಬಿಸಿಲು ಮಳೆಗಾಲಕ್ಕೆ ಹೊರಳುವುದರಿಂದ ವಾತಾವರಣದಲ್ಲಿ ಉಷ್ಣಾಂಶದ ಪ್ರಮಾಣ ಅಧಿಕವಾಗುತ್ತದೆ' ಎಂದು ಹವಾಮಾನ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

'ಅಧಿಕ ಉಷ್ಣಾಂಶದಿಂದ ಬಳಲುವವರ ಆರೋಗ್ಯ ರಕ್ಷಣೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ. ಗ್ರಾಮೀಣ ಭಾಗದಲ್ಲಿ ತಿಳವಳಿಕೆ ಮೂಡಿಸಲಾಗಿದೆ. ಬಿಸಿಲಿನಿಂದ ಪ್ರಜ್ಞೆ ಹೋದವರನ್ನು ತಂಪಾದ ನೀರು ಕುಡಿಸಿ, ಮೈಮೇಲೆ ನೀರಿನಲ್ಲಿ ಒದ್ದೆ ಮಾಡಿದ ಬಟ್ಟೆ ಹಾಕುವಂತೆ ತಿಳಿ ಹೇಳಲಾಗಿದೆ' ಎಂದು ಕಲಬುರಗಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಅಂಬಾರಾಯ ರುದ್ರವಾಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಇಂದು ರಾಜ್ಯದ ಕೆಲವೆಡೆ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ ಮತ್ತು ದಕ್ಷಿಣ ಒಳನಾಡಿನ ಕೆಲವೆಡೆ ಶನಿವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ, ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ರಾಮನಗರ, ಹಾಸನ, ಚಿಕ್ಕಮಗಳೂರು ಜಿಲ್ಲೆಯ ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡು, ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಇಲಾಖೆ ಹೇಳಿದೆ.

ಗರಿಷ್ಠ ಉಷ್ಣಾಂಶವು ಒಳನಾಡಿನ ಹಲವು ಕಡೆ ಸಾಮಾನ್ಯಕ್ಕಿಂತ 2–3 ಡಿಗ್ರಿ ಸೆಲ್ಸಿಯಸ್, ಕರಾವಳಿಯ ಕೆಲವು ಕಡೆ ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ. ಬೆಂಗಳೂರು ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರುತ್ತದೆ. ಸಂಜೆ ಅಥವಾ ರಾತ್ರಿಯ ಅವಧಿಯಲ್ಲಿ ಸಾಧಾರಣ ಮಳೆಯಾಗಬಹುದು ಎಂದು ಇಲಾಖೆ ತಿಳಿಸಿದೆ.

ಇದೇ 22ರವರೆಗೂ ಉತ್ತರ ಒಳನಾಡು ಸೇರಿ ರಾಜ್ಯದ ಬಹುತೇಕ ಕಡೆ ಒಣಹವೆ ಇರಲಿದೆ. 23ರ ನಂತರ ರಾಜ್ಯದಾದ್ಯಂತ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ.

ಬೆಂಕಿ ಹಚ್ಚಿ ಮಹಿಳೆ ಕೊಂದವನಿಗೆ ಗಲ್ಲು

ವಿಜಯಪುರ: ಮಕ್ಕಳೆದುರೇ ಪೆಟ್ರೋಲ್ ಉಗ್ಗಿ, ಬೆಂಕಿ ಹಚ್ಚಿ ಕೊಲೆ ಮಾಡಿದವನಿಗೆ ಇಲ್ಲಿನ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಸತೀಶ ಎಲ್.ಪಿ. ಅವರು ಶುಕ್ರವಾರ ಗಲ್ಲು ಶಿಕ್ಷೆ ವಿಧಿಸಿದ್ದಾರೆ. ಮೃತಳ ಕುಟುಂಬಕ್ಕೆ ₹ 5 ಲಕ್ಷ ಪರಿಹಾರ ನೀಡಬೇಕೆಂದೂ ಹೇಳಿದೆ.

ಸಿಂದಗಿ ತಾಲ್ಲೂಕಿನ ಕೊಕಟನೂರ ಗ್ರಾಮದ ಅಕ್ಬರ್ ಅಲಿಯಾಸ್ ಅಕ್ಬರ್ ಬಾಷಾ ಗಾಲೀಬಸಾಬ್ ಬಾಗವಾನ ಗಲ್ಲು ಶಿಕ್ಷೆಗೊಳಗಾದವ. 2018ರ ಜ. 27 ರಂದು ಮನೆ ಮುಂದೆ ಮಕ್ಕಳೊಂದಿಗೆ ಕುಳಿತಿದ್ದ ಶಮಶಾದ್ ಅವರ ಮೇಲೆ ಏಕಾಏಕಿ ಪೆಟ್ರೋಲ್ ಸುರಿದು, ಬೆಂಕಿ ಹಚ್ಚಿ ಪರಾರಿಯಾಗಿದ್ದ. ಫೆ.15 ರಂದು ಮಹಿಳೆ ಮೃತಪಟ್ಟರು.

ವಿದ್ಯಾರ್ಥಿಗಳ ಅಭಿಪ್ರಾಯ

ಉನ್ನತ ಶಿಕ್ಷಣಕ್ಕೂ ನೆರವು ನೀಡಲಿ

ಸುದ್ದಿ ಜೊತೆಗೆ ಸ್ವಾರಸ್ಯಕರ ಸಂಗತಿಗಳನ್ನು ಜನರಿಗೆ ಮನ ಮುಟ್ಟುವಂತೆ ತಲುಪಿಸುವ 'ಪ್ರಜಾವಾಣಿ' ಬಡ ವಿದ್ಯಾರ್ಥಿಗಳಿಗೆ ನೆರವಿನ ಹಸ್ತ ಚಾಚುವ ಮೂಲಕ ನಿಜವಾದ ಸಮಾಜ ಸೇವೆ ಮಾಡುತ್ತಿದೆ. ಆ ಸೇವೆಯ ಭಾಗ್ಯ ನನಗೂ ಸಿಕ್ಕಿದ್ದು, ಪ್ರಜಾವಾಣಿಗೆ ಋಣಿಯಾಗಿದ್ದೇನೆ. ಪ್ರಸ್ತುತ ರಾಣೆಬೆನ್ನೂರಿನ ದೇವಿಕಾ ಕಾಲೇಜಿನಲ್ಲಿ ಸೈನ್ಸ್ ವಿಭಾಗದಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದೇನೆ. ವೈದ್ಯನಾಗುವ ಕನಸಿದೆ. ಈ ಪತ್ರಿಕೆ ಸಹಾಯ ಉನ್ನತ ಶಿಕ್ಷಣ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಸ್ತರಿಸಿದರೆ ನನ್ನಂತಹ ಬಡವರಿಗೆ ಅನುಕೂಲವಾಗಲಿದೆ.

ತರುಣ್ ಮೃತ್ಯುಂಜಯ ಕರ್ಜಗಿ, ತುಮ್ಮಿನಕಟ್ಟಿ, ರಾಣೆಬೆನ್ನೂರು

ಧೈರ್ಯ, ಸ್ಥೈರ್ಯ ಹೆಚ್ಚಿಸಿದ ಶಿಷ್ಯವೇತನ

ಮುಂದಿನ ಅಭ್ಯಾಸಕ್ಕೆ ಅನುಕೂಲವಾಗಲಿ ಎಂದು ಎಲ್ಲ ಶಿಷ್ಯ ವೇತನವನ್ನು ಸಂಗ್ರಹಿಸಿ ಇಟ್ಟುಕೊಳ್ಳಲಾಗಿದೆ. ದಾವಣಗೆರೆ ಸಿದ್ದೇಶ್ವರ ಕಾಲೇಜಿನಲ್ಲಿ ಸೈನ್ಸ್ ಓದುತ್ತಿದ್ದೇನೆ. ಮೆಡಿಕಲ್ ಸೀಟ್ ಪಡೆಯುವ ಗುರಿಯಿದೆ. ಹೆಮ್ಮೆಯ 'ಪ್ರಜಾವಾಣಿ'ಯಿಂದ ಅಗತ್ಯ ನೆರವು ಸಿಕ್ಕಿದೆ. ತಂದೆಯಿಲ್ಲದ ನನಗೆ ತಾಯಿಯೇ ಎಲ್ಲ. ಇಂತಹ ಹೆಸರಾಂತ ಪತ್ರಿಕೆ ನೀಡುತ್ತಿರುವ ಸಹಾಯ ನನ್ನಂತಹ ಬಡ ವಿದ್ಯಾರ್ಥಿಗಳಿಗೆ ಧೈರ್ಯ, ಸ್ಥೈರ್ಯ ಹೆಚ್ಚಿಸಿದೆ.

ಸ್ಫೂರ್ತಿ ಶಿವಕುಮಾರ ಸಂಕಣ್ಣನವರ, ಬಾಳಂಬೀಡ, ಹಿರೇಕೆರೂರು ತಾಲ್ಲೂಕು

ಪಿಯು ಮರುಮೌಲ್ಯಮಾಪನ: 'ಇಂದು' ಕಾಲೇಜಿನ ಕುಷ ರಾಜ್ಯಕ್ಕೆ ಪ್ರಥಮ

ಪ್ರಜಾವಾಣಿ ವಾರ್ತೆ

ಕುಷನಾಯ್ಕ

ಕೊಟ್ಟೂರು / ವಿಜಯನಗರ: ಪಟ್ಟಣದ 'ಇಂದು' ಕಾಲೇಜಿನ ದ್ವಿತೀಯ ಪಿಯು ಕಲಾ ವಿಭಾಗದ ಇಬ್ಬರು ವಿದ್ಯಾರ್ಥಿಗಳು ಮರುಮೌಲ್ಯಮಾಪನದಲ್ಲಿ ಹೆಚ್ಚುವರಿ ಅಂಕ ಪಡೆಯುವ ಮೂಲಕ ರಾಜ್ಯಕ್ಕೇ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದಿದ್ದಾರೆ. ಇದರೊಂದಿಗೆ ಕಾಲೇಜು ಸತತ ಎಂಟನೇ ವರ್ಷ ಪ್ರಥಮ ಸ್ಥಾನ ಪಡೆದ ಹೆಗ್ಗಳಿಕೆಗೆ ಪಾತ್ರವಾಗಿದೆ.

ದ್ವಿತೀಯ ಸ್ಥಾನ ಪಡೆದಿದ್ದ ಜಿ.ಎಲ್. ಕುಷ ನಾಯ್ಕ ಮರು ಮೌಲ್ಯಮಾಪನದಲ್ಲಿ ಎರಡು ಅಂಕಗಳು ಹೆಚ್ಚು ಪಡೆದು ಒಟ್ಟು 594 ಅಂಕಗಳೊಂದಿಗೆ ಮೊದಲ ಸ್ಥಾನ ಪಡೆದಿದ್ದಾರೆ (ಫಲಿತಾಂಶ ಪ್ರಕಟವಾದಾಗ 592 ಇತ್ತು). ಮೊದಲು ಪ್ರಕಟವಾದ ಫಲಿತಾಂಶದಲ್ಲಿ ಪ್ರಥಮ ಸ್ಥಾನ ಪಡೆದಿದ್ದ ಬೆಂಗಳೂರು ಜಯನಗರದ ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜಿನ ತಬಸ್ಸುಮ್ ಶೇಖ್ (593 ಅಂಕಗಳು) ಈಗ ದ್ವಿತೀಯ ಸ್ಥಾನಕ್ಕೆ ಸರಿದಿದ್ದಾರೆ.

ತೇಜಸ್ವಿನಿ, ರೆಹಮಾನ್ 3ನೇ ಸ್ಥಾನ

ತೇಜಸ್ವಿನಿ ಬಿ.



ಅಬ್ದುಲ್ ರೆಹಮಾನ್

ಮಾಗಡಿ/ದೊಡ್ಡಬಳ್ಳಾಪುರ: ಮಾಗಡಿಯ ಬಿಜಿಎಸ್ ಪಿ.ಯು ಕಾಲೇಜಿನ ವಿದ್ಯಾರ್ಥಿನಿ ತೇಜಸ್ವಿನಿ ಬಿ ಹಾಗೂ ದೊಡ್ಡಬಳ್ಳಾಪುರದ ದೇವರಾಜ್ ಅರಸು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಅಬ್ದುಲ್ ರೆಹಮಾನ್ ಅವರು ಮರು ಮೌಲ್ಯಮಾಪನದಲ್ಲಿ ಹೆಚ್ಚುವರಿಯಾಗಿ ಅಂಕಗಳನ್ನು ಪಡೆದು ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

ತೇಜಸ್ವಿನಿ ಬಿ. ಹೆಚ್ಚುವರಿಯಾಗಿ ಐದು ಅಂಕ ಪಡೆದು ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿದ್ದಾರೆ. ಮೊದಲು ಪ್ರಕಟವಾದ ಫಲಿತಾಂಶದಲ್ಲಿ 600ಕ್ಕೆ 590 ಅಂಕ ಪಡೆದು ರಾಜ್ಯಕ್ಕೆ ಎಂಟನೇ ಸ್ಥಾನ ಗಳಿಸಿದ್ದರು. ಈಗ 595 ಅಂಕಗಳೊಂದಿಗೆ (ಶೇ 99.16) ರಾಜ್ಯಕ್ಕೆ ಮೂರನೇ ಸ್ಥಾನ ಗಳಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಐವರು ವಿದ್ಯಾರ್ಥಿಗಳೊಂದಿಗೆ ಅವರು ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

ವಿದ್ಯಾರ್ಥಿ ಅಬ್ದುಲ್ ರೆಹಮಾನ್ 595 ಅಂಕ ಪಡೆದು ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನ ಗಳಿಸಿದ್ದಾರೆ. ಮೊದಲು 589 ಅಂಕ ಪಡೆದು ರಾಜ್ಯಕ್ಕೆ 9ನೇ ಸ್ಥಾನ ಪಡೆದಿದ್ದ ಅವರು, ಮರು ಮೌಲ್ಯಮಾಪನದಲ್ಲಿ ಹೆಚ್ಚುವರಿಯಾಗಿ 6 ಅಂಕ ಗಳಿಸುವ ಮೂಲಕ ಒಟ್ಟು 595 ಅಂಕಗಳೊಂದಿಗೆ ಮೂರನೇ ಸ್ಥಾನ ಗಳಿಸಿದ್ದಾರೆ.

ಈ ಹಿಂದೆ ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿದ್ದ ಇದೇ ಕಾಲೇಜಿನ ಕೆ.ಕೃಷ್ಣ ಮರುಮೌಲ್ಯಮಾಪನದಲ್ಲಿ ಸಮಾಜ ವಿಜ್ಞಾನ ವಿಷಯದಲ್ಲಿ ಎರಡು ಅಂಕಗಳು ಹೆಚ್ಚು ಪಡೆದು ಒಟ್ಟು 593 ಅಂಕಗಳನ್ನು ಗಳಿಸಿ ತಬಸ್ಸುಮ್ ಶೇಖ್ ಜೊತೆ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಅಂಕಿ-ಅಂಶಗಳು — ವೃತ್ತಿಪರ ಕೋರ್ಸ್: ಇಂದು, ನಾಳೆ ಸಿಇಟಿ

2.60 ಲಕ್ಷ ಹೆಸರು ನೋಂದಾಯಿಸಿಕೊಂಡವರು

592 ರಾಜ್ಯದ ಪರೀಕ್ಷಾ ಕೇಂದ್ರಗಳು

121 ಬೆಂಗಳೂರಿನ ಕೇಂದ್ರಗಳು

ಪರೀಕ್ಷಾ ಸಮಯ: 10.30 ರಿಂದ ಮಧ್ಯಾಹ್ನ 3.50

ವಿಷಯಗಳು
- ಜೀವ ವಿಜ್ಞಾನ
- ಗಣಿತ
- ಭೌತ ವಿಜ್ಞಾನ,
- ರಸಾಯನ ವಿಜ್ಞಾನ

ಯಾವುದಕ್ಕೆ ಅವಕಾಶ ಇಲ್ಲ?
- ಕೈಗಡಿಯಾರ
- ಟ್ಯಾಬ್ಲೆಟ್, ಮೊಬೈಲ್, ಕ್ಯಾಲ್ಕುಲೇಟರ್, ಬ್ಲೂಟೂಥ್
- ಉದ್ದ ತೋಳಿನ ಉಡುಪು
- ಶೂ

ಯಾವುದಕ್ಕೆ ಅವಕಾಶ ಇದೆ?
- ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನು
- ಪ್ರವೇಶ ಪತ್ರದ ಜತೆಗೆ ಭಾವಚಿತ್ರ ಇರುವ ಒಂದು ಗುರುತುಪತ್ರ (ಆಧಾರ್, ಪ್ಯಾನ್ ಇತ್ಯಾದಿ)
- ಪರೀಕ್ಷೆ ಆರಂಭಕ್ಕೂ ಎರಡು ಗಂಟೆ ಮೊದಲು ಕೇಂದ್ರದಲ್ಲಿರಬೇಕು.

ತಾಜ್ ಬಳಿ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ಮುದ್ದೇಬಿಹಾಳ ದಂಪತಿ

ಪ್ರಜಾವಾಣಿ ವಾರ್ತೆ

ವಿಜಯಪುರ: ಆಗ್ರಾದ ತಾಜ್‌ಮಹಲ್ ಬಳಿ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಕುಂಟೋಜಿ ಗ್ರಾಮದ ಮರೆಪ್ಪ ತಳವಾರ ಹಾಗೂ ಶಾಂತಾ ತಳವಾರ ದಂಪತಿ ತಮ್ಮ 50ನೇ ವಿವಾಹ ವಾರ್ಷಿಕೋತ್ಸವವನ್ನು ಗುರುವಾರ ಆಚರಿಸಿಕೊಂಡರು.

ವಿವಾಹ ವಾರ್ಷಿಕೋತ್ಸವವನ್ನು ತಾಜ್‌ಮಹಲ್ ಬಳಿ ಆಚರಿಸಿಕೊಳ್ಳಲು 74 ವರ್ಷದ ಮರೆಪ್ಪ ಹಾಗೂ 67 ವರ್ಷದ ಶಾಂತಾ ಬಯಸಿದ್ದರು. ಅವರ ಬಯಕೆ ಈಡೇರಿಸಲು ಮಕ್ಕಳಾದ ಪರಶುರಾಮ, ಬಸವರಾಜ ಅವರನ್ನು ಆಗ್ರಾಕ್ಕೆ ಕರೆದೊಯ್ದರು. ನಂತರ ಅಲ್ಲಿನ ಪಂಚತಾರಾ ವಿಲಾಸಿ ಹೋಟೆಲ್‌ನಲ್ಲಿ ಕೇಕ್ ಕತ್ತರಿಸಿ, ಸಂಭ್ರಮಿಸಿದರು.

ದಂಪತಿಗೆ 6 ಜನ ಪುತ್ರಿಯರು, ಇಬ್ಬರು ಪುತ್ರರಿದ್ದಾರೆ. 21 ಜನ ಮೊಮ್ಮಕ್ಕಳು, ಇಬ್ಬರು ಸೊಸೆಯರು, ಇಬ್ಬರು ಮರಿ ಮೊಮ್ಮಕ್ಕಳು ಇದ್ದಾರೆ.

ತಾಜ್‌ಮಹಲ್ ಎದುರು ಮರೆಪ್ಪ, ಶಾಂತಾ ದಂಪತಿ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡರು

ಪಿಎಂಎವೈ: ಮನೆ ಕಟ್ಟದೆ ₹2.65 ಕೋಟಿ ದುರ್ಬಳಕೆ

ಕಲಬುರಗಿ: ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆಯಡಿ (ಪಿಎಂವೈ-ಯು) ಮಂಜೂರಾದ ಮನೆಗಳನ್ನು ನಿರ್ಮಿಸಿಕೊಳ್ಳದೇ ₹ 2.65 ಕೋಟಿ ಅನುದಾನ ದುರ್ಬಳಕೆಯಾದ ಬಗ್ಗೆ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ವಸತಿ ಇಲಾಖೆ ಅಧಿಕಾರಿಗಳ ತಂಡ ತನಿಖೆ ನಡೆಸಲು ಅಫಜಲಪುರಕ್ಕೆ ಭೇಟಿ ನೀಡಿದೆ.

'2019-20 ಅವಧಿಯಲ್ಲಿ ಅಫಜಲಪುರದ 266 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು. 200 ಫಲಾನುಭವಿಗಳಿಗೆ ಮನೆ ನಿರ್ಮಾಣಕ್ಕೆ ಒಂದೂವರೆ ವರ್ಷದ ಅವಧಿಯಲ್ಲಿ ₹2.65 ಕೋಟಿ ಅನುದಾನ ಪಾವತಿ ಆಗಿತ್ತು. ಭುವನ್ ಆ್ಯಪ್‌ನಲ್ಲಿ ನಮೂದಿಸಿದ್ದ ವಸತಿ ಪ್ರದೇಶಕ್ಕೆ ತೆರಳಿ ಪರಿಶೀಲಿಸಿದಾಗ, ಅಲ್ಲಿ ಮನೆಗಳು ನಿರ್ಮಾಣ ಆಗದಿರುವುದು ಕಂಡು ಬಂತು' ಎಂದು ತನಿಖಾ ತಂಡದ ಅಧಿಕಾರಿಯೊಬ್ಬರು ತಿಳಿಸಿದರು.

'ದಾಖಲೆಪತ್ರಗಳಲ್ಲಿ ಮಾತ್ರ ಮನೆ ನಿರ್ಮಾಣವಾಗಿದೆ. ಫಲಾನುಭವಿಗಳಿಗೆ ಸುಳ್ಳು ಹೇಳಿ, ಹಣ ಬರುವುದೆಂದು ನಂಬಿಸಿ ಆಧಾರ್ ಕಾರ್ಡ್‌ನಂತಹ ದಾಖಲೆಪತ್ರಗಳನ್ನು ಮಧ್ಯವರ್ತಿಗಳು ಪಡೆದಿದ್ದಾರೆ. ಬಳಿಕ ಬೇರೆಯವರ ಮನೆ ತೋರಿಸಿ ಹಣ ಎತ್ತಿದ್ದಾರೆ.ಈ ಬಗ್ಗೆ ಎರಡು ದಿನಗಳಿಂದ ವಿಚಾರಣೆ ನಡೆಸಿದ್ದೇವೆ. ಬಹುತೇಕ ಫಲಾನುಭವಿಗಳಿಗೆ ಮನೆ ಮಂಜೂರಾಗಿದ್ದು, ಅನುದಾನ ಬಂದಿದ್ದು ಗೊತ್ತಿಲ್ಲ. ಯಾರಿಗೆ ದಾಖಲಾತಿಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿಲ್ಲ' ಎಂದರು.

ಪದಬಂಧ 5324

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕತ್ತಲು ಇಲ್ಲಿ ಆವರಿಸಿದೆ (4)
3.ಅಶ್ವಯುಜ ಮಾಸದ ಒಂಬತ್ತು ರಾತ್ರಿಗಳು (4)
5.ವಾರ ಮೊದಲಿದ್ದಾಗಲೇ ಒಡೆತನ (3)
6.ಉಪಕಾರದ ವಿರುದ್ಧ ಪದ (4)
8.ಬಿಸಿಲುಕುದುರೆ ಇಲ್ಲಿ ಕಾಣುತ್ತಿದೆ (4)
10.ಇದು ಬೇರೆಯವರ ಹಣ (4)
12.ಸವೆದು ಹೋದುದು (4)
13.ವರ ಪಡೆದಿರುವ ಅಮಾತ್ಯ! (3)
16.ಮಾಣಿಕ್ಯ ಇಲ್ಲಿದೆ (4)
17.ತೀಡೀ ತೀಡಿ ಮಾಡಿದ ಸುಧಾರಣೆ! (4)

ಮೇಲಿಂದ ಕೆಳಕ್ಕೆ

1.ಅಂಬುಧಿಯಲ್ಲಿರುವ ಬಾಣ (2)
2.ಭಾನುವಾರವನ್ನು ಹೀಗೂ ಹೇಳುವರು (4)
3.ಅದೇ ತಾನೆ ಅರಳಿದ ಹೂವು (4)
4.ಮಗಳಿಲ್ಲಿ ಉಲ್ಟಾ ಪಲ್ಟಾ ನಿಂತಿದ್ದಾಳಲ್ಲಾ? (2)
7.ಕೊನೆಗೆ ಬೆಲೆಯಿದ್ದಗ ಕಾಣಿಸಿದ ಮಡಿಕೆ (3)
9.ಕದವನ್ನು ಭದ್ರಪಡಿಸಲು ಹಾಕಿದ ಅಗಳಿ (3)
11.ದೇವಾಲಯದದ ಸಭಾಮಂಟಪ (4)
12.ಈಕೆ ವಿದ್ಯಾಧಿದೇವತೆ (4)
14.ಮಂಡೂಕವಿರುವ ಬಾವಿ (2)
15.ನಾಡಾಡಿಯ ಧಮನಿ (2)

1			2	■	3			4
	■	■		■		■	■	
■	■	■	5			■	■	■
6	7			■	8		9	
■		■	■	■	■	■		■
10			11	■	12			
■	■	■	13			■	■	■
14	■	■		■		■	■	15
16				■	17			

5323ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ನಾಟಕ 3.ಶತಪದ
5.ನಸುಕು 6.ತಿಲೋದಕ
8.ನನಸು 10.ಸಭಿಕ
11.ಕುಚೇಷ್ಟೆ 12.ಮಮತೆ
14.ನಸುನಗು
17.ವರಾರ
18.ಕೆನೆಹಾಲು 19.ಕಡುಗಲಿ

ಮೇಲಿಂದ ಕೆಳಕ್ಕೆ:
1.ಕಸೂತಿ 2.ಕನಕ
3.ಶಕುನ 4.ದಟ್ಟ
7.ಲೋಕಾಭಿರಾಮ
9.ಸುಪ್ತಚೇತನ
13.ತೇವಲು 14.ನರಕ
15.ಗುದ್ದಲಿ 16.ಸೆಕೆ

ಸುಡೊಕು 5710

5		6		7		3		8
	8		2		4		1	7
7		1		5		4		9
	9		5				7	
1				4				3
	6				8		5	
9		5			6	2		1
				3			8	
6		8	4			9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5709 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮೇ 20, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುದ್ಧ ಪ್ರತಿಪದ್ ಗಂ.21-31 ನಕ್ಷತ್ರ: ಕೃತ್ತಿಕಾ ಗಂ.08-03, ಯೋಗ: ಅತಿಗಂಡ ಗಂ.17-18
ಕರಣ: ಕಿಸ್ತುಂಘ್ನ ಗಂ.09-24, ವೃಷಭ ಮಾಸದ 05 ನೇ ದಿನ, ಮಳೆನಕ್ಷತ್ರ: ಕೃತ್ತಿಕ 3.
ರಾಹುಕಾಲ : ಬೆಳಿಗ್ಗೆ 09-00 – 10-30 ಸೂರ್ಯೋದಯ : 06-07 ಸೂರ್ಯಾಸ್ತ : 06-47
ಮುಸ್ಲಿಂ ದಿನಾಂಕ : 29 ಶವ್ವಾಲ್, ಅದೃಷ್ಟ ಸಂಖ್ಯೆ : 8, 5

ಮೇಷ: ಕುಟುಂಬದವರ ಜೊತೆ ನಡೆಯುತ್ತಿದ್ದ ಮುಸುಕಿನ ಗುದ್ದಾಟವನ್ನು ಮಾತನಾಡಿ ಬಗೆಹರಿಸಿಕೊಳ್ಳುವಿರಿ. ದೇಹ ಪ್ರಕೃತಿಗೆ ಸರಿ ಹೊಂದದಂತಹ ಆಹಾರವನ್ನು ಸ್ವೀಕರಿಸಿದ ಕಾರಣವಾಗಿ ಅನಾರೋಗ್ಯ ಉಂಟಾಗುವುದು.

ವೃಷಭ: ಮಕ್ಕಳ ವಿಚಾರವಾಗಿ ಇದ್ದ ನಿಮ್ಮ ಸಮಸ್ಯೆಗಳು ಶೀಘ್ರ ಪರಿಹಾರವಾಗುವ ಲಕ್ಷಣಗಳು ತೋರಿಬರುತ್ತವೆ. ವಿದ್ಯುತ್ ಉಪಕರಣ ಸರಿಯಾದ ರೀತಿ ಬಳಸದೇ ಇರುವುದರಿಂದ ಅಪಾಯ ಉಂಟಾಗಬಹುದು.

ಮಿಥುನ: ಜವಾಬ್ದಾರಿಗಳನ್ನು ಇತರರ ಮೇಲೆ ದಾಟಿಸುವಂತಹ ಪ್ರಯತ್ನಗಳನ್ನು ಮಾಡಲು ಹೋಗದಿರಿ. ಕೋಪದಿಂದ ಪರಿಹಾರವಾಗದ ಕುಟುಂಬ ಸಮಸ್ಯೆಗಳು ಮೃದುವಾದ ಮಾತಿನಿಂದ ಪರಿಹಾರವಾಗುತ್ತದೆ.

ಕರ್ಕಾಟಕ: ನಿನ್ನೆ ಇದ್ದ ವಸ್ತುಗಳು ಇಂದು ಕಾಣೆಯಾಗುವುದು ನಿರ್ದಿಷ್ಟವಾಗಿ ಒಬ್ಬ ವ್ಯಕ್ತಿಯ ಮೇಲೆ ಅನುಮಾನವನ್ನು ತರಿಸುತ್ತದೆ. ಅತಿಯಾದ ಆಲಸ್ಯ, ಬೇಜವಾಬ್ದಾರಿತನ ನಿಮ್ಮ ಅಭಿವೃದ್ಧಿಯನ್ನು ಕುಂಠಿತವಾಗಿ ಮಾಡುತ್ತದೆ.

ಸಿಂಹ: ವಂಶದ ಕುಡಿಯು ನೀವು ಬಯಸಿದ ರೀತಿಯಲ್ಲಿಯೇ ಉತ್ತಮ ಜೀವನವನ್ನು ನಡೆಸುತ್ತಿರುವುದನ್ನು ಜನರು ಹೊಗಳುವುದು ಕೇಳಿ ಅತೀವ ಆನಂದವನ್ನು ಹೊಂದುವಿರಿ. ಕೈಗಳ ಸ್ವಚ್ಛತೆಯ ಮೇಲೆ ಗಮನ ಹರಿಸಿ.

ಕನ್ಯಾ: ಸೂಕ್ಷ್ಮ ಮನಸ್ಕರಾಗಿರುವ ನಿಮಗೆ ಇತರರು ನಿಮ್ಮ ಬಗ್ಗೆ ಹೇಳಬಹುದಾದ ಮಾತುಗಳನ್ನು ಸ್ವೀಕರಿಸುವಂತಹಾ ಸಾಮರ್ಥ್ಯ ಇಲ್ಲವಾಗುವುದು. ಮದುವೆಯ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ದುಡುಕುವುದು ಬೇಡ.

ತುಲಾ: ದಿನದ ಕೆಲಸಗಳನ್ನೇ ವಿಶೇಷವಾಗಿ ಮಾಡುವ ರೀತಿಯನ್ನು ಕಂಡುಕೊಳ್ಳುವಿರಿ. ಮುಖ್ಯವಾದ ವ್ಯಕ್ತಿಯ ಬಳಿ ಮಾತನಾಡುವಾಗ ಪೂರ್ವ ತಯಾರಿಯನ್ನು ಮಾಡಿಕೊಳ್ಳುವುದು ಅತ್ಯಂತ ಪ್ರಮುಖವಾಗುವುದು.

ವೃಶ್ಚಿಕ: ಹೊಸದನ್ನು ಸಾಧಿಸುವ ಪ್ರಚೋದನೆ ನಿಮ್ಮನ್ನು ಸೆಳೆಯಲಿದೆ ಅದರಿಂದಾಗಿ ಈಗ ನಡೆಯುತ್ತಿರುವ ಕೆಲಸ ಕಾರ್ಯಗಳು ನಿಲ್ಲುವಂತಾಗಬಹುದು. ಅನಿರೀಕ್ಷಿತವಾಗಿ ಧನಲಾಭವಾಗಲಿದೆ.

ಧನು: ಧಾರ್ಮಿಕ ಕೆಲಸಗಳಿಗಾಗಿ ಖರ್ಚುಗಳಿದ್ದರೂ ದೈವಬಲದಿಂದ ಎಲ್ಲಾ ವ್ಯವಹಾರಗಳಲ್ಲಿ ಉತ್ತಮ ಧನಾದಾಯವನ್ನು ಹೊಂದುವಿರಿ. ರಾಜಕೀಯದವರಿಂದ ಸಾಮಾಜಿಕವಾದ ಕಾರ್ಯ ಸಾಧಿಸಿಕೊಳ್ಳುವಲ್ಲಿ ಮುಖ್ಯವಾಗಿರಲಿದೆ.

ಮಕರ: ಮೇಲಧಿಕಾರಿಗಳು ಹಾಗೂ ಹಿರಿಯರಿಂದ ನೀವು ಬಯಸಿದ ಉಪಕಾರವನ್ನು ಪಡೆಯಬಹುದು. ಬಟ್ಟೆ ವ್ಯಾಪಾರಿಗಳಿಗೆ ಲಾಭವಿರುವುದು. ಇಂದಿನ ಪ್ರಾರಂಭಿಕ ವಿಫಲತೆಯ ಬಗ್ಗೆ ನೀವು ನಿರಾಶೆಗೊಳ್ಳಬಾರದು.

ಕುಂಭ: ಸಾಮಾಜಿಕ ಜೀವನದಲ್ಲಿ ಮತ್ತು ಭಾವನಾತ್ಮಕ ಸಂಬಂಧಗಳಲ್ಲಿ ಉತ್ತಮ ಪ್ರಗತಿ ಹೊಂದುವಿರಿ. ವೃತ್ತಿ ವಿಷಯದಲ್ಲಿ ಏಳು-ಬೀಳುಗಳು ಬಹು ಸಹಜ ಎಂದು ಕಿರಿಯರಿಗೂ ತಿಳಿಸುವಂತಹ ಕೆಲಸ ಮಾಡುವಿರಿ.

ಮೀನ: ಮೂರನೇ ವ್ಯಕ್ತಿಯ ಮಾತುಗಳನ್ನು ಕೇಳಿಕೊಂಡು ಸಂಬಂಧಿಗಳಲ್ಲಿ ಇಲ್ಲಸಲ್ಲದ ವಿಚಾರಗಳಿಗೆ ಜಗಳವನ್ನು ತೆಗೆಯದಿರಿ. ಸಹೋದರ ಅಥವಾ ಸಹೋದರಿಯರ ಆರೋಗ್ಯ ವಿಚಾರವಾಗಿ ಹಣ , ಸಮಯ ಕೊಡುವಿರಿ.

ಕಂಠೀರವ ಕ್ರೀಡಾಂಗಣದಲ್ಲಿ ಭಾರಿ ಸಿದ್ಧತೆ: ಲಕ್ಷಕ್ಕೂ ಹೆಚ್ಚು ಜನ ಪಾಲ್ಗೊಳ್ಳುವ ಸಾಧ್ಯತೆ

ಸಂಪುಟದ ಪದಗ್ರಹಣ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಂಪುಟದ ಇತರ ಸದಸ್ಯರ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭಾರಿ ಸಿದ್ಧತೆ ನಡೆದಿದೆ.

ವಿಧಾನಸಭಾ ಚುನಾವಣೆಯಲ್ಲಿ 135 ಸ್ಥಾನಗಳೊಂದಿಗೆ ಸ್ಪಷ್ಟ ಬಹುಮತ ಪಡೆದಿರುವ ಕಾಂಗ್ರೆಸ್, ನೂತನ ಸಂಪುಟದ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ವಿಜಯೋತ್ಸವದ ಮಾದರಿಯಲ್ಲಿ ನಡೆಸಲು ಮುಂದಾಗಿದೆ. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಎಂದು ಅಂದಾಜಿಸಲಾಗಿದೆ.

ಸಿದ್ದರಾಮಯ್ಯ ಅವರು 2013ರಲ್ಲಿ ಮುಖ್ಯಮಂತ್ರಿ ಆದಾಗಲೂ ಕಂಠೀರವ ಕ್ರೀಡಾಂಗಣದಲ್ಲೇ ಪ್ರಮಾಣವಚನ ಸ್ವೀಕರಿಸಿದ್ದರು. ಆಗಲೂ ಭಾರಿ ಜನಸ್ತೋಮ ಕಾರ್ಯಕ್ರಮಕ್ಕೆ ಸೇರಿತ್ತು. ಈ ಬಾರಿ ಬಹುತೇಕ ಪೂರ್ಣ ಸಂಪುಟದೊಂದಿಗೆ ಅದೇ ಸ್ಥಳದಲ್ಲಿ ಪ್ರಮಾಣವಚನ ಸ್ವೀಕರಿಸುತ್ತಿದ್ದಾರೆ.

ನೂತನ ಮುಖ್ಯಮಂತ್ರಿ ಹಾಗೂ ಸಂಪುಟ ಸದಸ್ಯರ ಪ್ರಮಾಣವಚನ ಸಮಾರಂಭ ನಡೆಯಲಿರುವ ಬೆಂಗಳೂರಿನ ಕಂಠೀರವ ಕ್ರೀಡಾಂಗಣದ ಸುತ್ತಮುತ್ತ ಹಾಕಿರುವ ಫ್ಲೆಕ್ಸ್‌ಗಳು – ಪ್ರಜಾವಾಣಿ ಚಿತ್ರ

ಅದ್ದೂರಿ ಸಿದ್ಧತೆ: ಸಮಾರಂಭಕ್ಕಾಗಿ ಕಂಠೀರವ ಕ್ರೀಡಾಂಗಣವನ್ನು ಅದ್ದೂರಿಯಾಗಿ ಸಿಂಗರಿಸಲಾಗಿದೆ. ಕ್ರೀಡಾಂಗಣದಲ್ಲಿ ಮೂರು ವೇದಿಕೆಗಳನ್ನು ನಿರ್ಮಿಸಿದ್ದು, ಮಧ್ಯದಲ್ಲಿರುವ ಪ್ರಧಾನ ವೇದಿಕೆಯಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಚಿವರ ಪ್ರಮಾಣವಚನ ಸ್ವೀಕಾರ ನಡೆಯಲಿದೆ. ಇಕ್ಕೆಲಗಳಲ್ಲಿರುವ ವೇದಿಕೆಗಳನ್ನು ಅತಿಗಣ್ಯ ಅತಿಥಿಗಳು ಮತ್ತು ನೂತನ ಸಚಿವರು ಕುಳಿತುಕೊಳ್ಳಲಿದ್ದಾರೆ.

ವೇದಿಕೆಯ ಹಿಂಭಾಗವನ್ನು ಕೇಸರಿ, ಬಿಳಿ, ಹಸಿರು ಬಣ್ಣದ ವಸ್ತ್ರಗಳಿಂದ ಅಲಂಕರಿಸಲಾಗಿದೆ. ವೇದಿಕೆಯ ಮುಂಭಾಗದಲ್ಲಿ ಹಲವು ಸಾವಿರ ಕುರ್ಚಿಗಳನ್ನು ಇರಿಸಲಾಗಿದೆ. ಕ್ರೀಡಾಂಗಣ ಪ್ರವೇಶಿಸುವ ಎಲ್ಲ ಮಾರ್ಗಗಳಲ್ಲೂ ಹೂ, ಫ್ಲೆಕ್ಸ್ ಬಳಸಿ ಅಲಂಕರಿಸಲಾಗಿದೆ.

ಕ್ರೀಡಾಂಗಣದ ಒಳಭಾಗದ ಅಲ್ಲಲ್ಲಿ ಕಾರ್ಯಕ್ರಮ ವೀಕ್ಷಣೆಗೆ ಬೃಹತ್ ಎಲ್ಇಡಿ ಪರದೆಗಳನ್ನು ಅಳವಡಿಸಲಾಗಿದೆ. ಕ್ರೀಡಾಂಗಣವನ್ನು ಸಂಪರ್ಕಿಸುವ ಮಾರ್ಗಗಳಲ್ಲೂ ಎಲ್ಇಡಿ ಪರದೆ ಅಳವಡಿಸಲು ಸಿದ್ಧತೆ ನಡೆದಿದೆ.

ನಿಯೋಜಿತ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ಬೆಳಿಗ್ಗೆ ಕಂಠೀರವ ಕ್ರೀಡಾಂಗಣಕ್ಕೆ ಭೇಟಿನೀಡಿ ಸಿದ್ಧತೆಗಳನ್ನು ಪರಿಶೀಲಿಸಿದರು. ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಮತ್ತು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರು ಸಿದ್ಧತೆಗಳ ಕುರಿತು ಮಾಹಿತಿ ನೀಡಿದರು. ವಿಧಾನ ಪರಿಷತ್ ಸದಸ್ಯ ಕೆ. ಗೋವಿಂದ ರಾಜು ಇದ್ದರು.

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಸಂಭಾವ್ಯ ಸಚಿವರ ಪಟ್ಟಿ

ಜಿ.ಪರಮೇಶ್ವರ	ಜಮೀರ್ ಅಹ್ಮದ್ ಖಾನ್/ ಎನ್.ಎ. ಹ್ಯಾರಿಸ್	ಶಿವಾನಂದ ಪಾಟೀಲ/ ವಿನಯ ಕುಲಕರ್ಣಿ
ಕೆ.ಎಚ್.ಮುನಿಯಪ್ಪ	ಸತೀಶ ಜಾರಕಿಹೊಳಿ	ಟಿ.ಡಿ.ರಾಜೇಗೌಡ/ ಕೆ.ಎಂ. ಶಿವಲಿಂಗೇಗೌಡ
ಬಿ.ಕೆ.ಹರಿಪ್ರಸಾದ್	ಎಚ್.ಸಿ.ಮಹದೇವಪ್ಪ	ಬಿ.ಕೆ. ಸಂಗಮೇಶ್ವರ/ ಮಧು ಬಂಗಾರಪ್ಪ
ಎಂ.ಬಿ.ಪಾಟೀಲ	ಶರಣ ಪ್ರಕಾಶ ಪಾಟೀಲ	ಆರ್.ಬಿ. ತಿಮ್ಮಾಪುರ
ರಾಮಲಿಂಗಾ ರೆಡ್ಡಿ	ಅಜಯ್ ಸಿಂಗ್	ಎಸ್.ಎಸ್.ಮಲ್ಲಿಕಾರ್ಜುನ
ಆರ್.ವಿ.ದೇಶಪಾಂಡೆ	ಜಗದೀಶ ಶೆಟ್ಟರ್/ ಲಕ್ಷ್ಮಣ ಸವದಿ	ಬಿ.ನಾಗೇಂದ್ರ/ ಇ.ತುಕಾರಾಮ್
ಕೆ.ಜೆ.ಜಾರ್ಜ್	ಲಕ್ಷ್ಮಿ ಹೆಬ್ಬಾಳಕರ	ಚಲುವರಾಯಸ್ವಾಮಿ
ಎಚ್.ಕೆ.ಪಾಟೀಲ	ಪ್ರಿಯಾಂಕ್ ಖರ್ಗೆ	ರಾಘವೇಂದ್ರ ಹಿಟ್ನಾಳ/ಎಚ್.ವೈ.ಮೇಟಿ
ಕೃಷ್ಣ ಬೈರೇಗೌಡ	ಸಂತೋಷ್ ಲಾಡ್	
ಯು.ಟಿ.ಖಾದರ್/ ಸಲೀಂ ಅಹ್ಮದ್		

25 ಸಚಿವರು ಇಂದು ಪ್ರಮಾಣ?

ಒಂದನೇ ಪುಟದಿಂದ...

ತಮ್ಮ ಬಣದಿಂದ ಸಂಪುಟಕ್ಕೆ ಸೇರಬೇಕಾದ ಸಚಿವರ ಪಟ್ಟಿಯನ್ನು ವೇಣುಗೋಪಾಲ್‌ಗೆ ನೀಡಿದರು. ನಂತರ ಸಿದ್ದರಾಮಯ್ಯ ಅವರೊಂದಿಗೆ ವೇಣುಗೋಪಾಲ್ ಸಮಾಲೋಚಿಸಿದರು. ಬಳಿಕ ಮೂವರು ನಾಯಕರು ಜತೆಗೆ ಸಭೆ ನಡೆಸಿದರು. ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಪ್ರತ್ಯೇಕ ಸಭೆ ನಡೆಸಿ ಪಟ್ಟಿಗೆ ಅಂತಿಮ ರೂಪ ನೀಡುವ ಕೆಲಸ ಮಾಡಿದರು.

ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರನ್ನು ಭೇಟಿ ಮಾಡಿದ ಉಭಯ ನಾಯಕರು, ಶನಿವಾರ ನಡೆಯುವ ಪ್ರಮಾಣವಚನ ಸಮಾರಂಭಕ್ಕೆ ಆಹ್ವಾನಿಸಿದರು. ಇದೇ ಸಂದರ್ಭದಲ್ಲಿ ಸಂಭಾವ್ಯ ಸಚಿವರ ಪಟ್ಟಿಯನ್ನು ರಾಹುಲ್ ಅವರಿಗೆ ಉಭಯ ನಾಯಕರು ನೀಡಿದರು. ಜಾತಿವಾರು, ಸಾಮಾಜಿಕ ನ್ಯಾಯ ಹಾಗೂ ಪ್ರಾದೇಶಿಕವಾರು ಮಾನದಂಡಗಳನ್ನು ಅನುಸರಿಸಿ ಪಟ್ಟಿಯನ್ನು ಅಂತಿಮಗೊಳಿಸುವಂತೆ ರಾಹುಲ್ ಅವರು ಕಿವಿಮಾತು ಹೇಳಿದರು. ಯುವಕರಿಗೆ ಹಾಗೂ ಮಹಿಳೆಯರಿಗೆ ಸಂಪುಟದಲ್ಲಿ ಆದ್ಯತೆ ನೀಡುವಂತೆ ಸಲಹೆ ನೀಡಿದರು ಎಂದು ಮೂಲಗಳು ಹೇಳಿವೆ.

ರಾತ್ರಿ 9 ಗಂಟೆ ವೇಳೆಗೆ ವೇಣುಗೋಪಾಲ್ ನಿವಾಸದಲ್ಲಿ ಮತ್ತೊಂದು ಸುತ್ತಿನ ಸಭೆ ನಡೆಯಿತು. ಈ ಸಭೆಯಲ್ಲಿ ಪಟ್ಟಿಗೆ ಅಂತಿಮ ರೂಪ ನೀಡಲಾಯಿತು. ಬಳಿಕ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ನಾಯಕರು, ಪಟ್ಟಿಗೆ ಅನುಮೋದನೆ ಪಡೆದರು.

ಲಿಂಗಾಯತ ಸಮುದಾಯದಿಂದ 39, ಒಕ್ಕಲಿಗ ಸಮುದಾಯದಿಂದ 21, ದಲಿತ ಸಮುದಾಯದಿಂದ 18, ವಾಲ್ಮೀಕಿ ಸಮುದಾಯದಿಂದ 14 ಶಾಸಕರು ಆಯ್ಕೆಯಾಗಿದೆ. ಬೆಂಗಳೂರಿನಿಂದ ಐವರು ಹಾಗೂ ಬೆಳಗಾವಿಯಿಂದ ಮೂವರು ಶಾಸಕರು ಸಂಪುಟಕ್ಕೆ ಸೇರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸೋನಿಯಾ, ರಾಹುಲ್, ಪ್ರಿಯಾಂಕಾ ಸೇರಿ ಗಣ್ಯರ ದಂಡು

ಎಐಸಿಸಿ ಮಾಜಿ ಅಧ್ಯಕ್ಷರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಸೇರಿದಂತೆ ಹಲವು ಗಣ್ಯರು ಪ್ರಮಾಣವಚನ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೆಲ್, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಪುದುಚೇರಿ ಮುಖ್ಯಮಂತ್ರಿ ಎನ್. ರಂಗಸ್ವಾಮಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಆಹ್ವಾನ ನೀಡಲಾಗಿದೆ.

ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್, ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳಾದ ಫಾರೂಕ್ ಅಬ್ದುಲ್ಲಾ, ಮೆಹಬೂಬಾ ಮುಫ್ತಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ, ಜೆಡಿಯು ಅಧ್ಯಕ್ಷ ಲಲ್ಲನ್ ಸಿಂಗ್, ಎಂಡಿಎಂಕೆ ಅಧ್ಯಕ್ಷ ವೈಕೋ, ಆರ್‌ಎಸ್‌ಪಿ ಅಧ್ಯಕ್ಷ ಎನ್. ಕೆ. ಪ್ರೇಮಚಂದ್ರನ್, ಸಿಪಿಎಂಎಲ್ ಪ್ರಧಾನ ಕಾರ್ಯದರ್ಶಿ ದೀಪಾಂಕರ್ ಭಟ್ಟಾಚಾರ್ಯ, ವಿಸಿಕೆ ಅಧ್ಯಕ್ಷ ತೋಳ್ ತಿರುಮಾವಳನ್, ಆರ್‌ಎಲ್‌ಡಿ ಅಧ್ಯಕ್ಷ ಜಯಂತ್ ಚೌಧರಿ, ಕೇರಳ ಕಾಂಗ್ರೆಸ್ ಅಧ್ಯಕ್ಷ ಜೋಸ್ ಕೆ. ಮಾಣಿ ಮತ್ತು ಐಯುಎಂಎಲ್ ಅಧ್ಯಕ್ಷ ಸಾದಿಕ್ ಅಲಿ ತಂಙಳ್ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ನಿಯೋಜಿತ ಮುಖ್ಯಮಂತ್ರಿಯವರ ಆಪ್ತರು ತಿಳಿಸಿದ್ದಾರೆ.

ಬಿಜೆಪಿ, ಜೆಡಿಎಸ್ ನಾಯಕರಿಗೂ ಡಿಕೆಶಿ ಆಹ್ವಾನ

‘ನೂತನ ಸಂಪುಟ ಸದಸ್ಯರ ಪ್ರಮಾಣವಚನ ಸಮಾರಂಭಕ್ಕೆ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೂ ಆಹ್ವಾನ ನೀಡುತ್ತೇವೆ. ಅವರು ಅನ್ಯತಾ ಭಾವಿಸದೇ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು’ ಎಂದು ನಿಯೋಜಿತ ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

- ಎಎಪಿ, ಬಿಎಸ್‌ಪಿ, ಬಿಆರ್‌ಎಸ್, ವೈಎಸ್‌ಆರ್ ಕಾಂಗ್ರೆಸ್, ಬಿಜೆಡಿ ಪಕ್ಷಗಳಿಗೆ ಕಾಂಗ್ರೆಸ್ ಪಕ್ಷವು ಕರೆಯೋಲೆ ನೀಡಿಲ್ಲ
- ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಕಾಂಗ್ರೆಸ್‌ನಿಂದ ಅಧಿಕೃತ ಆಮಂತ್ರಣ ನೀಡಲಾಗಿದೆ. ಆದರೆ, ಸಮಾರಂಭಕ್ಕೆ ಟಿಎಂಸಿ ಪಕ್ಷದ ಸಂಸದೆ, ಲೋಕಸಭೆಯ ಉಪ ನಾಯಕಿ ಕಾಕೋಲಿ ಘೋಷ್ ದಸ್ತಿದಾರ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದಾರೆ
- ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಆಮಂತ್ರಣ ನೀಡದಿರುವ ಕಾಂಗ್ರೆಸ್ ಧೋರಣೆಯನ್ನು ಆಡಳಿತಾರೂಢ ಎಲ್‌ಡಿಎಫ್ ಪಕ್ಷ ಖಂಡಿಸಿದೆ

ಸಿಇಟಿಯಂದೇ ಪ್ರಮಾಣ ಬೇಕಿತ್ತಾ: ಸಂತೋಷ್

ಬೆಂಗಳೂರು: ‘ನಾಳೆ (ಶನಿವಾರ) ಸಿಇಟಿ ಪರೀಕ್ಷೆ ನಡೆಯಲಿದ್ದು, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಪ್ರಮಾಣ ವಚನ ಕಾರ್ಯಕ್ರಮದಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ. ಪ್ರಮಾಣ ವಚನ ಕಾರ್ಯಕ್ರಮವನ್ನು ಒಂದೆರಡು ದಿನ ಮುಂದೂಡಬಹುದಲ್ಲವೇ’ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಪ್ರಶ್ನಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ‘ನಿಯೋಜಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಟ್ ಪರೀಕ್ಷೆ ದಿನ ಪ್ರಧಾನಿ ಮೋದಿ ರೋಡ್ ಶೋ ಮಾಡುವುದನ್ನು ಆಕ್ಷೇಪಿಸಿ ಟ್ವೀಟ್ ಮಾಡಿದ್ದರು. ನೀಟ್ ಪರೀಕ್ಷಾರ್ಥಿಗಳು ಮತ್ತು ಬೆಂಗಳೂರಿನ ಜನರ ವಿರೋಧವನ್ನು ಧಿಕ್ಕರಿಸಿ ಮೋದಿ ನಡೆಸಲಿರುವ ರೋಡ್ ಶೋ ಬೇಜವಾಬ್ದಾರಿತನದ ನಡೆ. ವಿದ್ಯಾರ್ಥಿಗಳಿಗೆ ಆಗುವ ತೊಂದರೆಗೆ ಯಾರು ಹೊಣೆ ಎಂದೂ ಪ್ರಶ್ನಿಸಿದ್ದರು’ ಎಂದು ನೆನಪಿಸಿದ್ದಾರೆ.

‘ಈಗ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರಿಗೆ ಏನಾಗಿದೆ. ಸಮಾರಂಭವನ್ನು ಮುಂದೂಡಿದರೆ ವಿದ್ಯಾರ್ಥಿಗಳಿಗೆ ಆಗುವ ತೊಂದರೆ ತಪ್ಪುತ್ತದೆ’ ಎಂದಿದ್ದಾರೆ.

ಅಧಿಕಾರಕ್ಕಾಗಿ ಲಿಂಗಾಯತ ಹೆಸರನ್ನು ಬಳಸಿಕೊಂಡ ಕಾಂಗ್ರೆಸ್ ನಾಯಕರು, ಈಗ ಲಿಂಗಾಯತರಿಗೆ ಸಿಎಂ ಅಥವಾ ಡಿಸಿಎಂ ನೀಡಿ ಎಂಬ ಮಾತು ಕೇಳಿ ಬಂದಾಗ ಮೌನವಾಗಿದ್ದಾರೆ

ಬಿ.ವೈ.ವಿಜಯೇಂದ್ರ, ಶಾಸಕ

ಸಿದ್ದರಾಮಯ್ಯ ಆಹ್ವಾನ: ರೈಲಿನಲ್ಲಿ ದರ್ಶನ್ ಪ್ರಯಾಣ

ಪ್ರಜಾವಾಣಿ ವಾರ್ತೆ

ಪಾಂಡವಪುರ: ಭಾವಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಹ್ವಾನದ ಮೇರೆಗೆ ಮೇಲುಕೋಟೆ ಕ್ಷೇತ್ರದ ಕಾಂಗ್ರೆಸ್ ಬೆಂಬಲಿತ ಸರ್ವೋದಯ ಪಕ್ಷದ ವಿಜೇತ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಬೆಂಗಳೂರಿಗೆ ಶುಕ್ರವಾರ ರೈಲಿನಲ್ಲಿ ಪ್ರಯಾಣಿಸಿದರು.

ಮೇಲುಕೋಟೆ ಕ್ಷೇತ್ರದ ಹಲವು ಗ್ರಾಮಗಳಿಗೆ ತೆರಳಿ ಮತದಾರರಿಗೆ ಕೃತಜ್ಞತೆ ಹೇಳುವ ಕಾರ್ಯಕ್ರಮದಲ್ಲಿದ್ದ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ಸಿದ್ದರಾಮಯ್ಯ ಕರೆ ಮಾಡಿ ಬೆಂಗಳೂರಿಗೆ ಬರುವಂತೆ ಸೂಚಿಸಿದರು. ಎರಡನೇ ದರ್ಜೆಯ ಬೋಗಿಯಲ್ಲಿ ದರ್ಶನ್ ಹೊರಟರು ಎಂಬ ಮಾಹಿತಿ ಲಭಿಸಿದೆ.

ಹಲ್ಲೆ ಆರೋಪ: ‘ಸತ್ಯವನ್ನು ಎಲ್ಲಿ ತಲುಪಿಸಬೇಕೋ ಅಲ್ಲಿಗೆ ತಲುಪಿಸುತ್ತೇನೆ’ ಎಂದ ಯತ್ನಾಳ

ಡಿವೈಎಸ್‌ಪಿ, ಎಸ್‌ಐ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಯತ್ನಾಳರಿಂದ ₹1 ಲಕ್ಷ ನೆರವು
- ರಾಜಕೀಯ ಪಕ್ಷಗಳಿಂದ ಆರೋಪ–ಪ್ರತ್ಯಾರೋಪ

ಮಂಗಳೂರು: ಪುತ್ತೂರಿನಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಸಂಸದ ಡಿ.ವಿ. ಸದಾನಂದಗೌಡ ಅವರ ಚಿತ್ರವಿದ್ದ ಬ್ಯಾನರ್ ಅಳವಡಿಸಿ ಅದಕ್ಕೆ ಚಪ್ಪಲಿ ಹಾರ ಹಾಕಿದ ಆರೋಪಿಗಳ ಮೇಲೆ ಹಲ್ಲೆ ನಡೆಸಿದ ಪ್ರಕರಣ ದಿನಕ್ಕೊಂದು ತಿರುವು ಪಡೆಯುತ್ತಿದೆ.

ಈ ಪ್ರಕರಣ ಸಂಬಂಧ ಪುತ್ತೂರು ನಗರಠಾಣೆಯಲ್ಲಿ ವಿಚಾರಣೆ ನಡೆಸಿದ ಪೊಲೀಸರು, ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ, ನರಿಮೊಗ್ರುವಿನ ಅವಿನಾಶ್ ನೀಡಿದ ದೂರಿನ ಮೇಲೆ ಪುತ್ತೂರು ಡಿವೈಎಸ್ಪಿ ವೀರಯ್ಯ ಹಿರೇಮಠ, ಪುತ್ತೂರು ಗ್ರಾಮಾಂತರ ಠಾಣೆ ಪಿಎಸ್ಐ ಶ್ರೀನಾಥ ರೆಡ್ಡಿ, ಕಾನ್‌ಸ್ಟೆಬಲ್ ಹರ್ಷಿತ್ ವಿರುದ್ಧ ಐಪಿಸಿ 323, 324, 506 ಕಲಂ ಅನ್ವಯ ಪ್ರಕರಣ ದಾಖಲಾಗಿದೆ. ಪ್ರಕರಣದ ತನಿಖೆಯನ್ನು ಬಂಟ್ವಾಳ ಡಿವೈಎಸ್ಪಿ ಅವರಿಗೆ ವಹಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ವಿಕ್ರಂ ಅಮಟೆ ತಿಳಿಸಿದ್ದಾರೆ.

ಯತ್ನಾಳ ಭೇಟಿ: ಹಲ್ಲೆಗೊಳಗಾದ ಅವಿನಾಶ್ ಮತ್ತು ಗುರುಪ್ರಸಾದ್ ಪುತ್ತೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಶುಕ್ರವಾರ ಆಸ್ಪತ್ರೆಗೆ ಭೇಟಿ ನೀಡಿದ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಗ್ಯ ವಿಚಾರಿಸಿದರು. ಪುತ್ತೂರು ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿರುವ ಅರುಣ್ ಕುಮಾರ್ ಪುತ್ತಿಲ ಅವರು, ‘ ಸ್ವಾರ್ಥಕ್ಕೋಸ್ಕರ ಬಿಜೆಪಿ ಕಾರ್ಯಕರ್ತರನ್ನು ಬಲಿ ಕೊಡುವ ಕಾರ್ಯ ಇಲ್ಲಿ ನಡೆಯುತ್ತಿದೆ’ ಎಂದು ಈ ವೇಳೆ ಹೇಳಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಯತ್ನಾಳ, ‘ಹಲ್ಲೆಗೊಳಗಾದವರಿಗೆ ಸೂಕ್ತ ಪರಿಹಾರವನ್ನು ಸರ್ಕಾರ ನೀಡಬೇಕು. ನಾನು ಇವರ ಚಿಕಿತ್ಸೆಗೆ ವೈಯಕ್ತಿಕವಾಗಿ ₹ 1ಲಕ್ಷ ನೆರವು ನೀಡುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಟೀಕೆ–ಟಿಪ್ಪಣಿ ಸಹಜ. ದೂರು ಬಂದರೆ ತನಿಖೆ ನಡೆಸಬೇಕೇ ವಿನಾ ಈ ರೀತಿ ಹೊಡೆಯುವ ಅಧಿಕಾರ ಪೊಲೀಸರಿಗೆ ಇಲ್ಲ. ಯಾರು ಈ ಕೃತ್ಯ ಮಾಡಿಸಿದ್ದಾರೆ ಎಂಬುದು ತನಿಖೆಯಾಗಬೇಕು. ಕೆಳಹಂತದ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದ್ದು, ಡಿವೈಎಸ್ಪಿ ಅವರನ್ನು ಕೂಡ ಅಮಾನತುಗೊಳಿಸಬೇಕು’ ಎಂದರು.

‘ಸತ್ಯವನ್ನು ಎಲ್ಲಿ ತಲುಪಿಸಬೇಕೋ ಅಲ್ಲಿಗೆ ತಲುಪಿಸುತ್ತೇನೆ. ನಿಮ್ಮ ಮನಸ್ಸಿನಲ್ಲಿ ಏನಿದೆಯೋ ಅದಕ್ಕೆ ತಕ್ಕ ನಿರ್ಣಯವನ್ನು ಕೆಲವೇ ದಿನಗಳಲ್ಲಿ ಪಕ್ಷ ಕೈಗೊಳ್ಳುತ್ತದೆ’ ಎಂದು ಬಿಜೆಪಿ ಕಾರ್ಯಕರ್ತರನ್ನುದ್ದೇಶಿಸಿ ಯತ್ನಾಳ ಮಾರ್ಮಿಕವಾಗಿ ಹೇಳಿದರು.

‘ಪುತ್ತೂರು ಡಿವೈಎಸ್ಪಿ ಅವರು ಗನ್ ತೋರಿಸಿ, ನೀವು ಒಪ್ಪಿಕೊಳ್ಳಬೇಕು ಎಂದು ಬೆದರಿಸಿ ಲಾಠಿಯಿಂದ ಹೊಡೆದಿದ್ದಾರೆ. ಉಳಿದ ಪೊಲೀಸರು ಕೆನ್ನೆಗೆ ಮತ್ತು ಹೊಟ್ಟೆಯ ಭಾಗಕ್ಕೆ ಹೊಡೆದಿದ್ದಾರೆ. ರಾತ್ರಿ 10 ಗಂಟೆಗೆ ಕರೆದುಕೊಂಡು ಹೋಗಿದ್ದು, ಒಂದು ತಾಸು ಹೊಡೆದಿದ್ದು, ಅರುಣ್‌ಕುಮಾರ್ ಪುತ್ತಿಲ ಬರದೆ ಇದ್ದರೆ, ಬೆಳಗಿನ ತನಕವೂ ಹೊಡೆಯುತ್ತಿದ್ದರು. ಲಾಕ್‌ಅಪ್ ಡೆತ್ ಆಗುವ ಸಾಧ್ಯತೆ ಇತ್ತು’ ಎಂದು ಚಿಕಿತ್ಸೆ ಪಡೆಯುತ್ತಿರುವ ಅವಿನಾಶ್ ಬಿ ಹೇಳಿದರು.

ಮಾನವ ಹಕ್ಕು ಆಯೋಗಕ್ಕೆ ದೂರು: ಈ ಹಲ್ಲೆ ಪ್ರಕರಣದ ಸಂಬಂಧ ಉಳ್ಳಾಲದ ಅಜಿತ್ ಕುಮಾರ್ ಎಂಬುವವರು ರಾಜ್ಯ ಮಾನವ ಹಕ್ಕು ಆಯೋಗಕ್ಕೆ ಗುರುವಾರ ದೂರು ಸಲ್ಲಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನಾ ವಿಭಾಗ, ಪಶ್ಚಿಮ ವಲಯ, ಜಂಟಿ ಆಯುಕ್ತರು (ಪಶ್ಚಿಮ) ಕಛೇರಿ ಆವರಣ, 2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560020.

ಸಂಖ್ಯೆ: ಕಾಅ/ಯೋಪ/ಟೆಂಡರ್/15/2023–24/ಕರೆ–2 ದಿನಾಂಕ: 19–05–2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ – ಪಶ್ಚಿಮ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಳಿಗಾಗಿ ಸುಪ್ರಸಿದ್ಧರಾದ ಸೇವೆ ಪೂರೈಕೆದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)
1	ಹೊರಗುತ್ತಿಗೆ ಆಧಾರದಲ್ಲಿ ಪಶ್ಚಿಮ ವಲಯದ ಬಿಬಿಎಂಪಿ ಶಾಲೆಗಳು ಮತ್ತು ಕಾಲೇಜುಗಳಿಗೆ ಶಿಕ್ಷಕರನ್ನು ಪೂರೈಸುವುದು. (2ನೇ ಕರೆ)	10,00,40,000/-	10,00,400/-

ಕ್ರ. ಸಂ.	ಶಾಲೆಗಳು ಮತ್ತು ಕಾಲೇಜುಗಳ ಹೆಸರು	ಶಾಲೆಗಳು ಮತ್ತು ಕಾಲೇಜುಗಳು (ಸಂಖ್ಯೆಗಳಲ್ಲಿ)	ಕಾರ್ಯನಿರತ ಶಿಕ್ಷಕರು/ ಉಪನ್ಯಾಸಕರು (ಸಂಖ್ಯೆಗಳಲ್ಲಿ)	ಅವಧಿ
1	ನರ್ಸರಿ ಶಾಲೆಗಳು	34	37	11 ತಿಂಗಳು
2	ಪ್ರಾಥಮಿಕ ಶಾಲೆಗಳು	7	48	
3	ಪ್ರೌಢ ಶಾಲೆಗಳು	13	119	
4	ಪಿಯು ಕಾಲೇಜುಗಳು	9	76	
5	ಪದವಿ ಕಾಲೇಜುಗಳು	3	38	
6	ಸ್ನಾತಕೋತ್ತರ ಕಾಲೇಜುಗಳು	2	8	
	ಒಟ್ಟು	68	326	

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಿನಾಂಕ: 22–05–2022 ರಿಂದ ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: www.eproc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ವಿಚಾರಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **12–06–2023ರಂದು ಸಂಜೆ 4.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: **15–06–2023ರಂದು ಸಂಜೆ 4.00 ಗಂಟೆಗೆ.** 4) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: **19–06–2023 ರಂದು ಸಂಜೆ 4.00 ಗಂಟೆವರೆಗೆ.** 5) ಇ–ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **21–06–2023ರಂದು ಸಂಜೆ 4.30 ಗಂಟೆಗೆ (ಸಾಧ್ಯವಾದಲ್ಲಿ).** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಪಶ್ಚಿಮ ವಲಯ, ಬಿಬಿಎಂಪಿ.

KARNATAKA • **Bengaluru:** Aqua World – 9844553633; Vinayaka Agencies – 9448053609; Mahaveer Electric CO – 9844418345; Abhirami B2B Trading – 9972873609; Bangalore Electrical Distributors – 9886422916; Saini World – 9845930567; Suresh Electric co – 9845108940 • **Kumta:** Jayashree Inc – 8746991111 • **Dharwad** – Mark Marketing Corporation – 9845213354 • **Shimoga:** G R Enterprises – 9845260454; Shivam Enterprises – 934303770 • **Bijapur:** Raaj Electronics – 7795183163 • **Belgaum:** Enerzi Innotek Solutions pvt ltd – 9886772784 • **Mysore:** Shree Mahaveer Distributors – 9845353626 • **Kodagu:** Classic Auto Spares – 9632230007 • **Hospet:** Sunrise Refrigeration services - 9845911554

ಆಗ ಹೀಗೆಯೇ ನಡೆಯುತ್ತಿತ್ತು ಭಾಗೀರಥಿ ಮುರುಳ್ಯ ಅವರ ಜೀವನ

ಬಡತನ ಜೀವನಪ್ರೀತಿಯನ್ನು ಎಂದಿಗೂ ಕಸಿಯಬಾರದು. ಛಲ, ಆತ್ಮವಿಶ್ವಾಸವನ್ನು ಕ್ರಮೇಣ ರೂಢಿಸಿಕೊಂಡು ಬದುಕು ಕಟ್ಟಿಕೊಳ್ಳುವುದಕ್ಕೆ ಬಡತನ ಅಡ್ಡಿಯಾಗುವುದಿಲ್ಲ. ಟೇಲರಿಂಗ್, ಹೈನುಗಾರಿಕೆಯಲ್ಲಿ ಹಲವು ಪ್ರಯೋಗಗಳನ್ನು ಮಾಡಿ ಯಶಸ್ವಿಯಾದ ಭಾಗೀರಥಿ ಮುರುಳ್ಯ ರಾಜಕೀಯ ರಣರಂಗದಲ್ಲೂ ಕರ್ಮಯೋಗದ ಸೂತ್ರವನ್ನು ಅನುಸರಿಸಲು ಹೊರಟಿದ್ದಾರೆ.

ಕರ್ಮಯೋಗಿಗೆ ಶಾಸಕಿಯ ಯೋಗ

ಸಂಧ್ಯಾ ಹೆಗಡೆ

ವಿಧಾನಸಭೆ ಚುನಾವಣೆ ಘೋಷಣೆಯ ವಾರದ ಮುಂಚಿನವರೆಗೂ ಗುಡ್ಡಕ್ಕೆ ಹೋಗಿ ಸೊಪ್ಪು, ಹುಲ್ಲಿನ ಹೊರೆ ತಲೆಮೇಲೆ ಹೊತ್ತು ಸುಡುಬಿಸಿಲಿನಲ್ಲಿ ಕಿಲೋಮೀಟರ್ ನಡೆದು ಬಂದು, ಕೊಟ್ಟಿಗೆಯಲ್ಲಿನ ಜಾನುವಾರುಗಳ ಆರೈಕೆ ಮಾಡುತ್ತಿದ್ದವರು ಇವರು.

ಅದೃಷ್ಟ ಮನೆ ಬಾಗಿಲಿಗೆ ಬಂದು ಕದ ತಟ್ಟುವುದೆಂದರೆ ಹೀಗೇ ಇರಬೇಕು. ಬಿಜೆಪಿ ಅಭ್ಯರ್ಥಿಗಳ ಪಟ್ಟಿಯಲ್ಲಿ ಇವರ ಹೆಸರು ಅಚ್ಚಾಗಿತ್ತು. ಆಗಲೇ ಅಘೋಷಿತ ಗೆಲುವೂ ಇವರ ಮಡಿಲಿಗೆ ಬಿದ್ದಿತ್ತು. ಕಾರ್ಯಕರ್ತರ ಪರಿಶ್ರಮದಿಂದ ಸುಮಾರು 30 ಸಾವಿರ ಮತಗಳ ಭರ್ಜರಿ ಅಂತರದಿಂದ ವಿಜಯಿಯಾದರು. ಇವರೇ ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ಪರಿಶಿಷ್ಟಜಾತಿ ಮೀಸಲು ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ.

ಇವರ ಬದುಕಿನ ಏಳು–ಬೀಳುಗಳನ್ನು ಅವರ ಮಾತಿನಲ್ಲೇ ಕೇಳಿದರೆ ಸೊಗಸು.

‘ಬಹುಶಃ ಆಗ ನಾನು ಐದನೇ ಕ್ಲಾಸಿರಬಹುದು, ಮನೆಯಲ್ಲಿ ಕಿತ್ತು ತಿನ್ನುವ ಬಡತನ, ಅಮ್ಮ–ಅಪ್ಪ ಇಬ್ಬರೂ ಕೂಲಿ ಕೆಲಸಕ್ಕೆ ಹೋಗುವವರು. ಅಮ್ಮ ಕೂಲಿ ಮುಗಿಸಿ ಬಂದ ಮೇಲೆ, ಬೀಡಿ ಕಟ್ಟುತ್ತಿದ್ದರು.

ಶಾಲೆಯಿಂದ ಮನೆಗೆ ಬಂದವಳೇ ಪಾಟಿಚೀಲ ಬದಿಗೆಸೆದು, ಮನೆಯ ಚಾಕರಿಯಲ್ಲಿ ತೊಡಗುತ್ತಿದೆ. ಅಮ್ಮ ಬರುವಷ್ಟರಲ್ಲಿ ಮನೆಯನ್ನು ಒಪ್ಪವಾಗಿಟ್ಟು ಅವರೊಂದಿಗೆ ಬೀಡಿ ಕಟ್ಟಲು ಕುಳಿತುಬಿಡುತ್ತಿದ್ದೆ. ಮರುದಿನ ಬೆಳಿಗ್ಗೆ ಮೂಲೆಯಲ್ಲಿ ಬಿದ್ದ ಪಾಟಿಚೀಲ ಹೆಗಲಿಗೇರಿಸಿಕೊಂಡು ಮತ್ತೆ ಶಾಲೆಗೆ ಓಡುವ ಧಾವಂತ. ಇದು ಬಾಲ್ಯದ ದಿನಚರಿಯಾಗಿತ್ತು.

ಶಾಲೆಯಲ್ಲಿ ಮಾಸ್ತರು ಹೇಳಿಕೊಟ್ಟ ಪಾಠ, ಅದು ಕಿವಿಯಲ್ಲಿ ಇಳಿದಿದ್ದಷ್ಟೇ ಪರೀಕ್ಷೆಯ ಸರಕು. ಎಸ್ಸೆಸ್ಸೆಲ್ಸಿವರೆಗೂ ಹೀಗೇ ಓದಿಕೊಂಡು ಬಂದಿದ್ದು. ಒಪ್ಪತ್ತಿನ ಊಟಕ್ಕೂ ತತ್ವಾರ ಇದ್ದಾಗ ಯಾರಿಗೆ ಬೇಕು, ಓದು–ಬರಹ ಅದೂ ಇದೂ ಅಂತ. ಮನೆಯಲ್ಲಿ ಯಾರೂ ಅಭ್ಯಾಸ ಮಾಡೆಂದು ಬೈಯುತ್ತಲೂ ಇರಲಿಲ್ಲ. ಅವರಿಗೆ ಕುಟುಂಬದ ಬಂಡಿ ಸಾಗಿದರೆ ಸಾಕಾಗಿತ್ತು. ಎಸ್ಸೆಸ್ಸೆಲ್ಸಿ ಮುಗಿಸಿ, ಓದಿನ ಹಂಬಲದಿಂದ ಪ್ರಥಮ ಪಿಯುಸಿಗೆ ಕಾಲೇಜು ಸೇರಿದೆ. ಬಡತನ ನನ್ನ ಓದಿನ ಕನಸನ್ನು ಕಸಿದುಕೊಂಡಿತು...’

ಹೀಗೆ ಬಾಲ್ಯದಿಂದ ಸವಾಲುಗಳನ್ನು ಸಹಜವೆಂಬಂತೆ ಸ್ವೀಕರಿಸಿದ ಭಾಗೀರಥಿ ಅವರು, ಬದುಕಿಗಾಗಿ ಹಲವಾರು ಪಾತ್ರಗಳನ್ನು ನಿರೂಪಿಸಿದವರು. ಅತಿಥಿ ಶಿಕ್ಷಕಿಯಾಗಿ ಕೆಲ ಸಮಯ ಕೆಲಸ ಮಾಡಿದರು. ಮನೆಯಲ್ಲಿ ಹಸುಗಳನ್ನು ಸಾಕಿ ಹಾಲನ್ನು ಡೇರಿಗೆ ಕೊಂಡೊಯ್ದು ಕೊಟ್ಟು ಹೈನುಗಾರ ಮಹಿಳೆಯಾಗಿ ಗುರುತಿಸಿಕೊಂಡರು. ಟೇಲರಿಂಗ್ ಅನ್ನು ವೃತ್ತಿಯಾಗಿ ಸ್ವೀಕರಿಸಿ, ಶಾಲಾ ಮಕ್ಕಳ ಸಮವಸ್ತ್ರ, ಸೀರೆಯ ಬ್ಲೌಸ್ ಹೀಗೆ ಹಲವಾರು ಬಗೆಯ ಬಟ್ಟೆ ಹೊಲಿದು ಟೇಲರ್ ಆಗಿ ಹೆಸರು ಮಾಡಿದರು. ಈಗಲೂ ಭಾಗೀರಥಿ ಹಾಗೂ ಅವರ ತಂಗಿ ಜಾನಕಿ ಹೊಲಿಗೆ ವೃತ್ತಿ ಮಾಡುತ್ತಾರೆ.

ಸುಳ್ಯ ತಾಲ್ಲೂಕಿನ ಮುರುಳ್ಯದ ಪರಿಶಿಷ್ಟ ಕಾಲೊನಿಯಲ್ಲಿರುವ ಆಶ್ರಯ ಮನೆಯಲ್ಲಿ ಸಹೋದರ–ಅತ್ತಿಗೆ, ತಂಗಿಯ ಜತೆಗೆ ಭಾಗೀರಥಿ ಅವರ ವಾಸ. ಈಗಲೂ ಇವರ ಮನೆಯಲ್ಲಿ ಐದು ಜಾನುವಾರುಗಳಿವೆ. ಹೈನುಗಾರಿಕೆ ನಿಮಗೆ ಇಷ್ಟವಾ ಎಂದು ಕೇಳಿದರೆ, ‘ಬದುಕಿಗೆ ಏನಾದರೂ ಬೇಕಲ್ಲವಾ’ ಎಂದು ಮುಗುಳ್ನಕ್ಕರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಭಾಗವಾದ ರಾಷ್ಟ್ರ ಸೇವಿಕಾ ಸಮಿತಿಯ ಪ್ರಾಥಮಿಕ ಶಿಕ್ಷಣ ಪಡೆದಿರುವ ಭಾಗೀರಥಿ, ಮಾಣಿಯಡ್ಕ ಶಿಶುಮಂದಿರದ ಸಂಚಾಲಕಿಯಾಗಿದ್ದರು. ನಂತರ ಸುಳ್ಯ ತಾಲ್ಲೂಕು ಪಂಚಾಯಿತಿ ಸದಸ್ಯೆಯಾಗಿ, ಜಾಲ್ಸೂರು ಜಿಲ್ಲಾ ಪಂಚಾಯಿತಿ ಕ್ಷೇತ್ರದ ಸದಸ್ಯೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಮುರುಳ್ಯ ಎಣ್ಮೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಹಾಲಿ ನಿರ್ದೇಶಕಿ.

ಆದಿದ್ರಾವಿಡ ಸಮುದಾಯಕ್ಕೆ ಸೇರಿದ ತಂದೆ ದಿ.ಗುರುವ ಮತ್ತು ತಾಯಿ ದಿ.ಕೊರಗು ಹಿಂದೆ ಸ್ಥಳೀಯ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ತಂಗಿ ಜಾನಕಿ ಅವರು ಮುರುಳ್ಯ ಗ್ರಾಮ ಪಂಚಾಯಿತಿ ಅಧ್ಯಕ್ಷೆ. ಸಂಘ ಪರಿವಾರದ ಪ್ರೋತ್ಸಾಹ, ಅಣ್ಣಂದಿರು, ಊರಿನವರೇ ಆದ ವಸಂತ ನಡುಬೈಲು ಅವರ ಮಾರ್ಗದರ್ಶನವನ್ನು ಭಾಗೀರಥಿ ನೆನಪಿಸಿಕೊಳ್ಳುತ್ತಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮನಿರ್ಭರ ಭಾರತದ ಯೋಜನೆಯಂತೆ, ಸ್ವ ಉದ್ಯೋಗ ನಡೆಸಲು ಪೂರಕವಾಗಿ ಹೊಲಿಗೆ, ಕಸೂತಿ, ಹೈನುಗಾರಿಕೆ ತರಬೇತಿ ಒದಗಿಸಿ, ಸ್ಪರ್ಧಾತ್ಮಕ ಜಗತ್ತಿಗೆ ನಮ್ಮೂರಿನ ಮಹಿಳೆಯರನ್ನು ಅಣಿಗೊಳಿಸಬೇಕಾಗಿದೆ. ಊರಿನಲ್ಲೇ ಇದ್ದು ಸ್ವಾವಲಂಬಿ ಜೀವನ ನಡೆಸುವ ಕಲೆ ಕಲಿಸಬೇಕಾಗಿದೆ. ಉದ್ಯೋಗಕ್ಕಾಗಿ ವಲಸೆ ತಪ್ಪಬೇಕಾಗಿದೆ. ಜತೆಗೆ, ಸ್ಪರ್ಧಾತ್ಮಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವ ತರಬೇತಿ ಕೇಂದ್ರವನ್ನು ಸುಳ್ಯದಲ್ಲಿ ಆರಂಭಿಸಬೇಕು..’ ಇದು ಭಾಗೀರಥಿ ಅವರ ಕನಸು.

ಕರೆಮ್ಮ ಜಿ ನಾಯಕ

ಮತಗಳನ್ನು ನೀಡಿ ಆಶೀರ್ವದಿಸಬೇಕಾದ ಜನರೇ ಉಡಿ ತುಂಬಿ, ಚುನಾವಣೆಯ ಖರ್ಚಿಗೂ ಹಣ ನೀಡಿದರು. ಹಣ, ತೋಳ್ಬಲದ ನಡುವೆಯೂ ಎಂಥ ಅಭ್ಯರ್ಥಿಗೆ ನೆರವಾಗಬೇಕು ಎಂಬುದರ ಬಗ್ಗೆ ಶ್ರೀಸಾಮಾನ್ಯರಿಗೆ ಸ್ಪಷ್ಟತೆಯಿತ್ತು.

ಸನ್ಮಾನ ಅವಮಾನವ ನುಂಗಿತ್ತ...

ನಾಗರಾಜ ಚಿನಗುಂಡಿ

‘ಕರೆಮ್ಮ....ನಿಮಗೆಲ್ಲರಿಗೂ ಅವರು ಶಾಸಕಿ. ಆದರೆ, ನಮ್ಮ ಪಾಲಿಗೆ ಮನೆಯ ಮಗಳು. ಬಡತನದಲ್ಲಿ ಬೆಳೆದಿದ್ದು, ಅನ್ಯಾಯದ ವಿರುದ್ಧ ಧ್ವನಿಯೆತ್ತಿದ್ದು, ಅವಮಾನ ನುಂಗಿ ಗಟ್ಟಿಯಾದ್ದು, ವಿಕೃತಿಗೆ ದಿಟ್ಟವಾಗಿ ಉತ್ತರಿಸಿದ್ದು, ಕಲ್ಲು ತೂರಾಟ ಲೆಕ್ಕಿಸದೇ ಮುನ್ನಡೆದದ್ದು, ನೋವನ್ನೇ ಉಸಿರಾಗಿಸಿಕೊಂಡು ಬದುಕು ಕಟ್ಟಿಕೊಂಡಿದ್ದು...ಎಲ್ಲವೂ ಕಣ್ಣೆದುರು ಇದೆ’.

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ 70 ವರ್ಷದ ದೇವಪ್ಪ ಹೀಗೆ ಮಾತನಾಡುವಾಗ ಕಂಗಳಲ್ಲಿ ನೀರು ಜಿನುಗುತಿತ್ತು. ಪಕ್ಕದಲ್ಲೇ ಕೊಟ್ರೇಶ ಕಣ್ಣೊರೆಸಿಕೊಂಡು ಹೂಂಗುಟ್ಟುತ್ತಿದ್ದರು. ಜಿಲ್ಲೆಯಲ್ಲಿ 30 ವರ್ಷದ ಬಳಿಕ ಮೊದಲ ಬಾರಿಗೆ ಶಾಸಕಿಯಾಗಿ ಆಯ್ಕೆಯಾದ ಕರೆಮ್ಮ ಅವರ ಹೆಸರು ಪ್ರಸ್ತಾಪಿಸಿದಾಗ, ಇಬ್ಬರೂ ನಿಧಾನವಾಗಿ ಜೀವನಗಾಥೆ ವಿವರಿಸಿದರು.

ದೇವದುರ್ಗ ತಾಲ್ಲೂಕಿನ ಚಿಂತಲಕುಂಟಾ ಎಂಬ ಕುಗ್ರಾಮದ ಕರೆಮ್ಮ ಓದಿದ್ದು ಪಿಯುಸಿ. 2015ರಲ್ಲಿ ಗ್ರಾಮ ಪಂಚಾಯಿತಿ ಸದಸ್ಯೆಯಾಗಿ ಆಯ್ಕೆಯಾದರು. ಹೋರಾಟದ ಮನೋಭಾವದೊಂದಿಗೆ ರಾಜಕೀಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದರು. ಆರಂಭದಲ್ಲಿ ಕಾಂಗ್ರೆಸ್ ಜೊತೆ ಗುರುತಿಸಿಕೊಂಡ ಅವರು ದೇವದುರ್ಗ ತಾಲ್ಲೂಕು ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆಯಾದರು.

ಹೆಚ್ಚು ದಿನ ಅಲ್ಲಿ ಉಳಿಯದ ಅವರು ಜೆಡಿಎಸ್ ಸೇರ್ಪಡೆಯಾಗಿ 2016ರ ವಿಧಾನಸಭಾ ಉಪಚುನಾವಣೆಯಲ್ಲಿ ಸ್ಪರ್ಧಿಸಿದರು. 9,256 ಮತಗಳನ್ನು ಪಡೆದು, ತಕ್ಕ ಪೈಪೋಟಿ ನೀಡಿದರು. ಆದರೆ, 2018ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಜೆಡಿಎಸ್‌ನಿಂದ ಟಿಕೆಟ್ ಸಿಗಲಿಲ್ಲ. ಆಗ ಪಕ್ಷೇತರರಾಗಿ ಸ್ಪರ್ಧಿಸಿದ ಅವರು 26 ಸಾವಿರ ಮತ ಗಳಿಸಿದರು. ಅವರ ‘ಪ್ರಭಾವ’ ಅರಿತ ಜೆಡಿಎಸ್ ವರಿಷ್ಠರು ಮುಂದಿನ ಚುನಾವಣೆಗೆ ಟಿಕೆಟ್ ಅವರಿಗೇನೆ ಮೀಸಲಿಟ್ಟು ಬಿಟ್ಟರು!

ಕರೆಮ್ಮ ಅವರು ಬರೀ ಚುನಾವಣೆಗಳಲ್ಲಿ ಸ್ಪರ್ಧಿಸುವ ‘ನಾಯಕಿ’ಯಾಗಿ ಉಳಿಯದೇ ‘ಜನಪರ’ ನಾಯಕಿಯಾಗಿ ರೂಪುಗೊಂಡರು. ಆರ್ಥಿಕ ಮತ್ತು ರಾಜಕೀಯವಾಗಿ ಬೆಂಬಲ ಇರದಿದ್ದರೂ ಹೋರಾಟದ ದಾರಿಯಲ್ಲಿ ಮುಂಚೂಣಿಗೆ ಬಂದರು. ಜನರನ್ನು ಭೇಟಿಯಾಗಿ ಅಹವಾಲು ಆಲಿಸಲು ಹೆಚ್ಚಿನ ಸಮಯ ಮೀಸಲಿಟ್ಟರು. ಈ ಹಾದಿಯಲ್ಲಿ ಹಲವು ಸವಾಲು, ಸಮಸ್ಯೆ, ಸಂಕಷ್ಟಗಳು ‘ಜೊತೆ’ಯಾದವು. ಅವೇ ಇನ್ನಷ್ಟು ಬಲ ತುಂಬಿದವು.

50ರ ಹರೆಯದಲ್ಲೂ ಉತ್ಸಾಹ ಕಳೆದುಕೊಳ್ಳದ ಅವರು ನಿರಾಸಕ್ತಿಗೆ ‘ಹತ್ತಿರ’ ಬಾರದಂತೆ ನೋಡಿಕೊಂಡರು. ಅಕ್ರಮ, ಅನ್ಯಾಯ, ವಂಚನೆ ವಿರುದ್ಧ ನಿರಂತರ ಸಮರ ಸಾರಿದ ಕರೆಮ್ಮ ‘ಜನರಿಗೆ ನೆರವಾಗಬೇಕು’ ಎಂಬ ಏಕಮೇವ ಗುರಿಯೊಂದಿಗೆ ಮುನ್ನಡೆದರು.

2023ರ ಚುನಾವಣೆಗೆ ಸಾಕಷ್ಟು ಪೂರ್ವ ಸಿದ್ಧತೆ ಮಾಡಿಕೊಂಡ ಅವರು ಜೆಡಿಎಸ್ ನಾಯಕರ ಸಲಹೆ, ಸೂಚನೆಗಳನ್ನು ಪಾಲಿಸಿದರು. ಗ್ರಾಮ ವಾಸ್ತವ್ಯದ ಮೂಲಕ ಗ್ರಾಮಸ್ಥರ ಅಳಲು ಆಲಿಸಿದರು.

ಚುನಾವಣೆಗೆ ಸ್ಪರ್ಧಿಸಿದ ಕರೆಮ್ಮ ಅವರನ್ನು ಜನರು ಬರೀ ಭರವಸೆ ಕೊಡುವ ನಾಯಕಿಯಾಗಿ ಕಾಣಿಸಲಿಲ್ಲ. ದಿಟ್ಟ ಹೋರಾಟಗಾರ್ತಿಯಾಗಿ ಕಾಣಸಿಕ್ಕರು. ಅಕ್ರಮ, ಅನ್ಯಾಯದ ವಿರುದ್ಧ ಹೋರಾಟಗಾರ್ತಿಯಾಗಿ ಧ್ವನಿಯೆತ್ತಿದ್ದು ಜನರಿಗೆ ‘ನ್ಯಾಯ’ದ ಆಶಾಭಾವ ಮೂಡಿಸಿತು.

‘ಮತಗಳನ್ನು ನೀಡಿ ಆಶೀರ್ವಾದಿಸಿ’ ಎಂದು ಕರೆಮ್ಮ ಕೋರಿದರೆ, ಜನರು ಮನೆಗೆ ಆಹ್ವಾನಿಸಿ ಉಡಿ ತುಂಬಿದರು. ಚುನಾವಣೆ ಖರ್ಚಿಗೆ ಅವರೇ ಹಣವನ್ನೂ ನೀಡಿದರು. ಗ್ರಾಮ ವಾಸ್ತವ್ಯಕ್ಕೆ ಹಬ್ಬದ ಸ್ವರೂಪ ನೀಡಿ ಮೆರವಣಿಗೆ ಆಯೋಜಿಸಿದರು. ‘ಇವರೇ ನಮ್ಮ ನಾಯಕಿ’ ಎಂದು ಹೆಮ್ಮೆಯಿಂದ ಹೇಳಿದರು. ಹೋರಾಟಕ್ಕೆ ಜೊತೆಯಾದರು. ಚುನಾವಣೆಯಲ್ಲಿ ಕರೆಮ್ಮ ಅವರು 99,544 ಮತಗಳನ್ನು ಗಳಿಸಿದರು. 34,256 ಮತಗಳ ಅಂತರದಿಂದ ಶಾಸಕಿಯಾಗಿ ಜಯ ಗಳಿಸಿದರು.

ಸರ್ಕಾರಿ ಉದ್ಯೋಗದಿಂದ ನಿವೃತ್ತರಾಗಿರುವ ಪತಿ, ಪುತ್ರ ಮತ್ತು ಪುತ್ರಿಯ ಜೊತೆಯಲ್ಲಿ ಸಂಸಾರ ನಿರ್ವಹಿಸುತ್ತಿರುವ ಕರೆಮ್ಮ ಅವರು ರಾಜಕೀಯ ಕ್ಷೇತ್ರದಲ್ಲಿ ಜನನಾಯಕಿಯಾಗಿ ಸಾಮಾಜಿಕ ಪರಿವರ್ತನೆ ತರಲು ಬಯಸಿದ್ದಾರೆ.

‘ಮಹಿಳೆಯರ ಸ್ವಾಭಿಮಾನ ಕಾಪಾಡುವೆ’

‘ಸಾಮಾನ್ಯ ಮಹಿಳೆಯಾಗಿ ಕ್ಷೇತ್ರದ ಜನರ ಕಷ್ಟ-ಸುಖ ಆಲಿಸಿದ್ದೇನೆ. ಜನರು ಎಲ್ಲಾ ಹಂತದಲ್ಲೂ ನೆರವಾಗಿ, ನನ್ನನ್ನು ಶಾಸಕಿಯಾಗಿ ಆಯ್ಕೆ ಮಾಡಿದ್ದಾರೆ. ಅವರ ನಂಬಿಕೆ ಉಳಿಸಿಕೊಂಡು, ಭ್ರಷ್ಟಾಚಾರ ಮುಕ್ತ ಕ್ಷೇತ್ರವಾಗಿ ಅಭಿವೃದ್ಧಿ ಪಡಿಸುವೆ. ಗ್ರಾಮ ಪಂಚಾಯಿತಿ ಮಟ್ಟದಿಂದ ವಿಧಾನಸಭೆ ಪ್ರವೇಶಿಸುತ್ತಿರುವುದಕ್ಕೆ ದೇವದುರ್ಗದ ಜನರೇ ಕಾರಣ. ಹಣದ ಶಕ್ತಿ, ತೋಳ್ಬಲದ ಶಕ್ತಿ ವಿರುದ್ಧ ಜನಶಕ್ತಿ ಗೆದ್ದಿದೆ. ಜನರ ಧ್ವನಿಯಾಗಿ, ದೇವದುರ್ಗದ ಮನೆಮಗಳಾಗಿ ಕೆಲಸ ಮಾಡುವೆ. ದೇವದುರ್ಗದ ಅಭಿವೃದ್ಧಿಗೆ ಅನುದಾನ ಬಂದರೂ ಈವರೆಗೆ ಮಹಿಳೆಯರಿಗೆ ಶೌಚಾಲಯ ನಿರ್ಮಿಸಲು ಸಾಧ್ಯವಾಗಿಲ್ಲ. ಮಹಿಳೆಯರ ಸ್ವಾಭಿಮಾನ ಕಾಪಾಡುವುದು ನನ್ನ ಆದ್ಯತೆ. ಪ್ರತಿ ಗ್ರಾಮಗಳಲ್ಲಿ ಸರಿಯಾದ ಮಹಿಳಾ ಶೌಚಾಲಯ ಮಾಡಿ ಕೊಡುವೆ. ಮಹಿಳೆಯರ ಸ್ವಾವಲಂಬನೆಗಾಗಿ ಇರುವ ಸರ್ಕಾರದ ಯೋಜನೆ ತಲುಪಿಸುವೆ. ಮಹಿಳೆಯಾಗಿ ಮಹಿಳೆಯರ ಗೌರವ ಹೆಚ್ಚಿಸುವ ಕೆಲಸ ಮಾಡುವೆ.

ಕರೆಮ್ಮ ಜಿ.ನಾಯಕ, ಶಾಸಕಿ, ದೇವದುರ್ಗ

ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ 9 ಮಹಿಳೆಯರು ಗೆದ್ದು, ಶಾಸಕಿಯರಾಗಿದ್ದಾರೆ. ಮಹಿಳೆಯರಿಗೆ ತಮ್ಮ ಸಾಮರ್ಥ್ಯವನ್ನು ಪದೇ ಪದೇ ನಿರೂಪಿಸುವಂಥ ಸವಾಲು ಎಲ್ಲ ಕ್ಷೇತ್ರಗಳಲ್ಲಿಯೂ ಇದೆ. ಇದಕ್ಕೆ ರಾಜಕೀಯ ಕ್ಷೇತ್ರವೂ ಹೊರತಲ್ಲ. ಸ್ವಸಾಮರ್ಥ್ಯ, ಆತ್ಮಬಲವೊಂದಿದ್ದರೆ ಎಂಥ ಸಾಧನೆಯ ಮೆಟ್ಟಿಲನ್ನಾದರೂ ಹತ್ತಬಹುದು ಎಂಬುದಕ್ಕೆ ಭಾಗೀರಥಿ, ಕರೆಮ್ಮ ಅವರ ರಾಜಕೀಯ ಬದುಕು ನಿದರ್ಶನ.

ಮುಂದಿನ ಸಂಚಿಕೆಯಲ್ಲಿ ಉಳಿದ ಶಾಸಕಿಯರ ಬದುಕಿನ ಪರಿಚಯ

ಮಾವಿನ ಹಣ್ಣಿನಲ್ಲಿ ಹಲಬಗೆ ಖಾದ್ಯ

ನಳಪಾಕ

ಈಗ ಮಾವಿನ ಹಣ್ಣಿನ ಸಮಯ, ಮಾವಿನ ಹಣ್ಣಿನಲ್ಲಿ ವಿವಿಧ ರೀತಿಯ ಖಾದ್ಯಗಳನ್ನು ತಯಾರಿಸಿ ರುಚಿ ನೋಡಬಹುದು. ಅಂಥ ಕೆಲವು ರೆಸಿಪಿಗಳನ್ನು **ಪ್ರಭಾ ಶಾಸ್ತ್ರಿ** ಇಲ್ಲಿ ಪರಿಚಯಿಸಿದ್ದಾರೆ.

ಮಾವಿನ ಹಣ್ಣಿನ ಹೋಳಿಗೆ

ಬೇಕಾಗುವ ಸಾಮಗ್ರಿ: ಮಾವಿನ ಹಣ್ಣಿನ ಪಲ್ಪ್-1ಕಪ್, ಒಣಕೊಬ್ಬರಿ ತುರಿ-1ಕಪ್, ಬೆಲ್ಲ-1/4 ಕಪ್, ಏಲಕ್ಕಿ ಪುಡಿ ಸ್ವಲ್ಪ, ಚಿಟಿಕೆ ಉಪ್ಪು, ಪೇಣಿ ರವೆ-1/2 ಕಪ್, ಗೋಧಿಹಿಟ್ಟು-1/2ಕಪ್, ಅರಿಸಿನ ಸ್ವಲ್ಪ, ಎಣ್ಣೆ-2 ಚಮಚ, ಉಪ್ಪು ಸ್ವಲ್ಪ.

ಮಾಡುವ ವಿಧಾನ: ಕೊಬ್ಬರಿಯನ್ನು ನುಣ್ಣಗೆ ಪುಡಿಮಾಡಿಕೊಂಡು ಅದಕ್ಕೆ ಮಾವಿನ ಹಣ್ಣಿನ ಪಲ್ಪ್ ಅನ್ನು ಒಂದು ಸುತ್ತು ರುಬ್ಬಿಹಾಕಿ ಬೆಲ್ಲ ಚಿಟಿಕೆ ಉಪ್ಪು, ಏಲಕ್ಕಿ ಪುಡಿ ಹಾಕಿ ಒಲೆಯ ಮೇಲೆ ಇಟ್ಟು 1ಚಮಚ ನೀರು ಹಾಕಿ ಮಗುಚಿ ಗಟ್ಟಿಯಾದಾಗ ಇಳಿಸಿ. ಹೂರಣ ರೆಡಿ.

ಗೋಧಿಹಿಟ್ಟು, ಪೇಣಿ ರವೆ, ಉಪ್ಪು, ಅರಿಸಿನ ಎಲ್ಲವನ್ನು ಹಾಕಿ ಸ್ವಲ್ಪ ನೀರು ಹಾಕಿ ಕಲೆಸಿ ಚಪಾತಿ ಹಿಟ್ಟಿನ ಹದಕ್ಕೆ ಇರಲಿ. ಎಣ್ಣೆ ಹಾಕಿ ನಾದಿ 2 ಗಂಟೆ ಮುಚ್ಚಿಡಿ. ಕಣಕ ರೆಡಿ.

ಕಣಕವನ್ನು ಸ್ವಲ್ಪ ತೆಗೆದುಕೊಂಡು ಕೈಯಲ್ಲಿ ಅಗಲಮಾಡಿ ಹೂರಣದ ಉಂಡೆ ಇಟ್ಟು ಮುಚ್ಚಿ ಹೋಳಿಗೆ ಶೀಟ್‌ನಲ್ಲಿ ಲಟ್ಟಿಸಿ ಕಾದ ತವಾದ ಮೇಲೆ ಹಾಕಿ ಸಣ್ಣ ಉರಿಯಲ್ಲಿ ಬೇಯಿಸಿ ತೆಗೆಯಿರಿ. ಮಾವಿನ ಹಣ್ಣಿನ ದೋಸೆ ತಿನ್ನಲು ರೆಡಿ.

ಮಾವಿನ ಹಣ್ಣಿನ ದೋಸೆ

ಬೇಕಾಗುವ ಸಾಮಗ್ರಿ: ಅಕ್ಕಿ-1ಕಪ್, ಮಾವಿನ ಹಣ್ಣಿನ ಪಲ್ಪ್-1ಕಪ್, ಬೆಲ್ಲ-2ಚಮಚ, ಉಪ್ಪು-1/4ಚಮಚ, ತುಪ್ಪ-2 ಚಮಚ

ಮಾಡುವ ವಿಧಾನ: ಅಕ್ಕಿಯನ್ನು 2ಗಂಟೆ ನೆನಸಿಕೊಳ್ಳಬೇಕು. ನೆನಸಿದ ಅಕ್ಕಿಗೆ ಮಾವಿನ ಹಣ್ಣಿನ ಪಲ್ಪ್, ಬೆಲ್ಲ, ಉಪ್ಪು ಹಾಕಿ ನುಣ್ಣಗೆ ರುಬ್ಬಿ ತೆಗೆದು ದೋಸೆ ಹಿಟ್ಟಿನ ಹದಕ್ಕೆ ಮಾಡಿಕೊಳ್ಳಬೇಕು. ಕಾದ ತವಾದ ಮೇಲೆ ತುಪ್ಪ ಸವರಿ. ಅದರ ಮೇಲೆ ದೋಸೆ ಹುಯ್ದು ಮುಚ್ಚಿಡಿ. ಮಧ್ಯಮ ಉರಿಯಲ್ಲಿ ಬೇಯಿಸಿ ತೆಗೆಯಿರಿ. ಮಾವಿನ ಹಣ್ಣಿನ ದೋಸೆ ರೆಡಿ.

ಮಾವಿನ ಹಣ್ಣಿನ ಬರ್ಫಿ

ಬೇಕಾಗುವ ಸಾಮಗ್ರಿ: ಮಾವಿನ ಹಣ್ಣಿನ ಪಲ್ಪ್-1ಕಪ್, ಸಕ್ಕರೆ-1ಕಪ್, ತೆಂಗಿನ ತುರಿ-1ಕಪ್, ತುಪ್ಪ-2ಚಮಚ, ಏಲಕ್ಕಿ ಪುಡಿ ಸ್ವಲ್ಪ, ಚಿಟಿಕೆ ಉಪ್ಪು.

ಮಾಡುವ ವಿಧಾನ: ತೆಂಗಿನ ತುರಿಯನ್ನು ನುಣ್ಣಗೆ ರುಬ್ಬಿ ಅದಕ್ಕೆ ಮಾವಿನ ಹಣ್ಣಿನ ಪಲ್ಪ್ ಹಾಕಿ. ಒಂದು ಸುತ್ತು ರುಬ್ಬಿಕೊಂಡು ದಪ್ಪ ತಳದ ಪಾತ್ರೆಗೆ ಹಾಕಿ. ತುಪ್ಪ ಹಾಕಿ ಏಲಕ್ಕಿ ಪುಡಿ, ಚಿಟಿಕೆ ಉಪ್ಪು ಹಾಕಿ ಒಲೆಯ ಮೇಲೆ ಇಟ್ಟು ಮಗುಚಿ ತಳ ಬಿಟ್ಟು ಬರುವಾಗ ಇನ್ನು ಒಂದು ಸುತ್ತು ಮಗುಚಿ ತುಪ್ಪ ಸವರಿದ ತಟ್ಟೆಗೆ ಹಾಕಿ. ಸ್ವಲ್ಪ ತಣ್ಣಗಾದ ಮೇಲೆ ಕಟ್ ಮಾಡಿ. ಬರ್ಫಿ ತಿನ್ನಲು ರೆಡಿ.

ಮಾವಿನ ಹಣ್ಣಿನ ಕುಲ್ಫಿ

ಬೇಕಾಗುವ ಸಾಮಗ್ರಿ:- ಮಾವಿನ ಹಣ್ಣಿನ ಪಲ್ಪ್-1 ಕಪ್, ಕೆನೆಭರಿತ ಹಾಲು-2 ಕಪ್, ಏಲಕ್ಕಿ ಪುಡಿ ಸ್ವಲ್ಪ, ಸಕ್ಕರೆ-2 ಚಮಚ

ಮಾಡುವ ವಿಧಾನ: 2 ಕಪ್ ಹಾಲನ್ನು ಕುದಿಸಲು ಇಟ್ಟು ಸಕ್ಕರೆ ಹಾಕಿ ಮಗುಚುತ್ತಾ ಇರಿ. ಅದು 1 ಕಪ್‌ಗೆ ಬಂದ ನಂತರ ಇಳಿಸಿ. ತಣ್ಣಗಾದ ಮೇಲೆ ಮಾವಿನ ಹಣ್ಣಿನ ಪಲ್ಪ್, ಏಲಕ್ಕಿ ಪುಡಿ ಹಾಕಿ ಚನ್ನಾಗಿ ಬೀಟ್ ಮಾಡಿ ಕಪ್‌ಗೆ ಹಾಕಿ ಪ್ಲಾಸ್ಟಿಕ್ ಕಟ್ಟಿ ಮೇಲೆ ತೂತುಮಾಡಿ ಮರದ ಚಮಚ ಚುಚ್ಚಿ ಫ್ರಿಜರ್ ನಲ್ಲಿ 2 ಗಂಟೆ ಇಟ್ಟು ತೆಗೆಯಿರಿ. ತೆಗೆದ ಕುಲ್ಫಿ ಕಪ್ ಅನ್ನು ತಣ್ಣೀರಿನಲ್ಲಿ ಒಂದು ನಿಮಿಷ ಇಟ್ಟು ಕಪ್ ನಿಂದ ತೆಗೆಯಿರಿ. ಕುಲ್ಫಿ ರೆಡಿ.

ಮಾವಿನ ಹಣ್ಣಿನ ಕೇಸರಿಬಾತ್

ಬೇಕಾಗುವ ಸಾಮಗ್ರಿ: ಮಾವಿನ ಹಣ್ಣಿನ ಪಲ್ಪ್-1 ಕಪ್, ರವೆ-1ಕಪ್, ಸಕ್ಕರೆ-3/4ಕಪ್, ತುಪ್ಪ-1/2ಕಪ್, ನೀರು 2 1/2ಕಪ್, ಉಪ್ಪು ಚಿಟಿಕೆ, ಏಲಕ್ಕಿ ಪುಡಿ-1/4ಚಮಚ, ಕೇಸರಿದಳ ಸ್ವಲ್ಪ, ಗೊಡಂಬಿ, ದ್ರಾಕ್ಷಿ ಸ್ವಲ್ಪ.

ಮಾಡುವ ವಿಧಾನ: ದಪ್ಪ ತಳದ ಪಾತ್ರೆ ಓಲೆಯ ಮೇಲೆ ಇಟ್ಟು 1ಚಮಚ ತುಪ್ಪಹಾಕಿ. ನಂತರ ರವೆ ಹಾಕಿ ಸ್ವಲ್ಪ ಬಣ್ಣ ಬದಲಾಗುವವರೆಗೆ ಹುರಿಯಿರಿ. ರವೆ ತೆಗೆದು ಇಟ್ಟುಕೊಳ್ಳಿ. ಅದೇ ಪಾತ್ರೆಗೆ 1 ಚಮಚ ತುಪ್ಪಹಾಕಿ ಮಾವಿನ ಹಣ್ಣಿನ ಪಲ್ಪ್ ಹಾಕಿ 2 ಸುತ್ತು ಹುರಿಯಿರಿ. ನಂತರ ಅದಕ್ಕೆ ನೀರು ಹಾಕಿ ಸ್ವಲ್ಪ ಉಪ್ಪು ಹಾಕಿ ಕುದಿಬಂದ ನಂತರ ಹುರಿದ ರವೆಯನ್ನು ಸ್ವಲ್ಪ ಸ್ವಲ್ಪವೇ ಹಾಕುತ್ತಾ ಮಗುಚುತ್ತಾ ಇರಿ. ಗಂಟು ಆಗದಂತೆ ಮಗುಚಿ ಮುಚ್ಚಿಟ್ಟು ಬೇಯಿಸಿ. ನಂತರ ಸಕ್ಕರೆ ಹಾಕಿ ಮಗುಚಿ. ಕೇಸರಿ, ಎಲಕ್ಕಿಪುಡಿ ಹಾಕಿ ಮಗುಚಿ. ಗೋಡಂಬಿ, ದ್ರಾಕ್ಷಿ ತುಪ್ಪದಲ್ಲಿ ಹುರಿದು ಸೇರಿಸಿ. ಉಳಿದ ತುಪ್ಪಹಾಕಿ ಮಗುಚಿ ಇಳಿಸಿ, ರುಚಿಕರವಾದ ಕೇಸರಿಬಾತ್ ರೆಡಿ.

ಸ್ಪಂದನ

ಡಾ. ವೀಣಾ ಎಸ್. ಭಟ್

ಎರಡು ಮಕ್ಕಳ ನಡುವೆ ಕನಿಷ್ಠ ಅಂತರವಿರಲಿ

● ಮಗು ಹುಟ್ಟಿ ಐದು ತಿಂಗಳಾಗಿದೆ. ಒಂದು ಬಾರಿ ಮಾತ್ರ ಮುಟ್ಟು ಆಗಿದೆ. ಎರಡು ತಿಂಗಳಿಂದ ಮುಟ್ಟಾಗಿಲ್ಲ. ಪ್ರೆಗ್ನೆನ್ಸಿ ಚೆಕ್ ಕಿಟ್‌ನಿಂದ ಪರೀಕ್ಷೆ ಮಾಡಿಕೊಂಡಾಗ ನೆಗೆಟಿವ್ ಬಂದಿತ್ತು. 15 ದಿನಗಳ ನಂತರ ಪರೀಕ್ಷೆ ಮಾಡಿದಾಗ ಪಾಸಿಟಿವ್ ಬಂದಿದೆ. ಈಗ ಏನು ಮಾಡುವುದು ಡಾಕ್ಟ್ರೇ?

ಹೇಮಾ, ಊರು ತಿಳಿಸಿಲ್ಲ

ಹೇಮಾರವರೇ ನೀವೀಗ ಮಗುವಿಗೆ 5 ತಿಂಗಳಿರುವಾಗಲೇ ಮತ್ತೆ ಗರ್ಭಿಣಿಯಾಗಿದ್ದೀರ. ಎರಡು ಮಗುವಿನ ನಡುವೆ ಕನಿಷ್ಠ 2 ವರ್ಷಗಳಾದರೂ ಅಂತರವಿದ್ದರೆ ಒಳ್ಳೆಯದು. ಮಗುವಿಗೆ ಸಮರ್ಥವಾಗಿ ಎದೆಹಾಲುಣಿಸಿ, ಜೊತೆಗೆ ಪೂರಕ ಆಹಾರ ಕೊಡುತ್ತಾ ಆ ಮಗುವನ್ನು ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕವಾಗಿ ಸದೃಢಗೊಳಿಸಲು ಅಂತರ ಇರುವುದು ಅಗತ್ಯ. ಈಗಲೇ ಇನ್ನೊಂದು ಮಗುವನ್ನು ಹಡೆದು, ಸಾಕಿ-ಸಲಹಲು ಕಷ್ಟ ಎನಿಸಿದರೆ ವೈದ್ಯರನ್ನು ಕಂಡು ವೈದ್ಯಕೀಯ ಗರ್ಭಪಾತ ಮಾಡಿಸಿಕೊಳ್ಳಿ. ಏನಾದರೂ ಆಗಲಿ ಸಾಕಿ–ಸಲಹುತ್ತೇನೆ ಎಂದೆನಿಸಿದರೆ ಮುಂದುವರೆಸಲೂಬಹುದು. ನಿರ್ಣಯ ನಿಮ್ಮದು. ಯೋಚಿಸಿ, ನಿರ್ಧರಿಸಿ.

ಎದೆಹಾಲುಣಿಸುವಾಗ, ಮಾಸಿಕ ಮುಟ್ಟು ಬರದೇ ಇದ್ದಲ್ಲಿ ಲೈಂಗಿಕವಾಗಿ ಸಕ್ರಿಯವಾಗಿದ್ದರೂ ಮತ್ತೆ ಗರ್ಭಧರಿಸಲು ಸಾಧ್ಯವಿಲ್ಲ ಎಂಬ ತಪ್ಪು ತಿಳಿವಳಿಕೆ ಹಲವರಲ್ಲಿ ಇದೆ. ಎದೆಹಾಲುಣಿಸುವಿಕೆ ಸಮಯದಲ್ಲಿ ಮತ್ತೆ ಗರ್ಭಧಾರಣೆಯಾಗುವ ಸಂಭವ ಕಡಿಮೆ ಇದ್ದರೂ ಹೆರಿಗೆಯಾಗಿ ಆರೆಂಟುವಾರಗಳ ನಂತರ ಮಾಸಿಕ ಋತುಚಕ್ರ ಬರದೇ ಗರ್ಭಧಾರಣೆಯಾಗುವ ಸಂಭವ ಇದ್ದೇ ಇದೆ. ನಿಮ್ಮ ವಿಷಯದಲ್ಲೂ ಹೀಗೇ ಆಗಿದೆ. ಮುಟ್ಟು ಬರದೇ ಅಂಡೋತ್ಪತ್ತಿ ಆಗಿ ಗರ್ಭಧಾರಣೆಯಾಗಿದೆ. ಹಾಗಾಗಿ ಎದೆಹಾಲುಣಿಸುವ ಸಂದರ್ಭಗಳಲ್ಲಿ ಎಲ್ಲಾ ದಂಪತಿಗಳು ಸಂತಾನನಿಯಂತ್ರಣ ಕ್ರಮಗಳನ್ನು ಅನುಸರಿಸಲೇಬೇಕು. ಪುರುಷರು ಕಾಂಡೋಮ್ ಬಳಸಬಹುದು, ಇಲ್ಲದಿದ್ದಲ್ಲಿ ಮಹಿಳೆಯರು ಪ್ರೊಜೆಸ್ಟ್ರಾನ್ ಹಾರ್ಮೋನ್ ಮಾತ್ರವಿರುವ ಸಂತಾನ ನಿಯಂತ್ರಣ ಮಾತ್ರೆಗಳನ್ನು ನಿಯಮಿತವಾಗಿ ಬಳಸುವುದು, ಪ್ರೊಜೆಸ್ಟ್ರಾನ್ ಹಾರ್ಮೋನ್ ಡಿಪೋಇಂಜೆಕ್ಷನ್ ಮೂರುತಿಂಗಳಿಗೊಮ್ಮೆ ಹಾಕಿಸಿಕೊಳ್ಳುವುದು ಮಾಡಬಹುದು. ಸಹಜ ಅಥವಾ ಸಿಸೇರಿಯನ್ ಆದ ತಕ್ಷಣವೇ ಕಾಪರ್ಟಿಯನ್ನು ಗರ್ಭಕೋಶದೊಳಗೆ ಅಳವಡಿಸುವ ವಿಧಾನವೂ ಇದೆ.

● ಮುಟ್ಟಿನ ದಿನಗಳಲ್ಲಿ ಲೈಂಗಿಕಕ್ರಿಯೆ ನಡೆಸಬಹುದೇ? ಇದರಿಂದ ಏನಾದರೂ ತೊಂದರೆಯಾಗುತ್ತದಾ?

ಹೆಸರು, ಊರು ತಿಳಿಸಿಲ್ಲ

ಮುಟ್ಟಿನ ಬಗ್ಗೆ ಪುರುಷರು ಹಾಗೂ ಸ್ತ್ರೀಯರಲ್ಲಿ ತಪ್ಪು ಕಲ್ಪನೆಗಳಿವೆ. ಇದರಿಂದ ಲೈಂಗಿಕ ಚಟುವಟಿಕೆಗೆ ತೊಡಕಾಗಬಲ್ಲದೇ ಹೊರತು ಈ ಸಮಯದಲ್ಲಿ ಲೈಂಗಿಕಕ್ರಿಯೆಯಿಂದ ಯಾವ ತೊಂದರೆಯೂ ಇಲ್ಲ. ಮುಟ್ಟು ಎನ್ನುವುದು ವೈಜ್ಞಾನಿಕ ಪ್ರಕ್ರಿಯೆ. ಈ ಸಮಯದಲ್ಲಾಗುವ ರಕ್ತಸ್ರಾವದಿಂದ ಕಸಿವಿಸಿ ಅನ್ನಿಸಿದರೆ ಪುರುಷರು ಈ ಸಮಯದಲ್ಲಿ ನಿರೋಧ್ ಬಳಸಬಹುದು, ಮಹಿಳೆಯರು ಟ್ಯಾಂಪೂನ್ ಕೂಡಾ ಬಳಸಬಹುದು. ಇಲ್ಲದಿದ್ದಲ್ಲೂ ರಕ್ತಸ್ರಾವವೇ ಲುಬ್ರಿಕೆಂಟ್ ತರಹವೇ ಲೈಂಗಿಕಕ್ರಿಯೆಗೆ ಸಹಾಯವಾಗಬಹುದು. ಋತುಚಕ್ರಕ್ಕೆ ಅನುಸಾರ ಹೆಣ್ಣಿನಲ್ಲಿ ಲೈಂಗಿಕ ಭಾವನೆಗಳಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಋತುಚಕ್ರದ ಮಧ್ಯದಲ್ಲಿ ಅಂಡಾಣು ಬಿಡುಗಡೆಯ ಸಂದರ್ಭದಲ್ಲಿ ಜೀವವಿಕಾಸದ ಸೂತ್ರಕ್ಕೆ ಹೊಂದುಕೊಳ್ಳುವುದಕ್ಕಾಗಿ ಹೆಣ್ಣಿನಲ್ಲಿ ಲೈಂಗಿಕ ಭಾವನೆ ಹೆಚ್ಚಾಗುತ್ತದೆ. ಮುಟ್ಟುಬರುವ ಮುನ್ನಾದಿನಗಳಲ್ಲಿ ಹಾರ್ಮೋನುಗಳ ಪ್ರಮಾಣ ಒಮ್ಮೇಲೆ ಕುಸಿಯುವುದರಿಂದ ಲೈಂಗಿಕ ಆಸಕ್ತಿ ಕುಂದಬಹುದು. ಮುಟ್ಟಿನ ಆರಂಭದಿಂದ ಮೂರನೇ ದಿನಕ್ಕೆ ಈಸ್ಟ್ರೋಜನ್ ಹಾಗೂ ಟೆಸ್ಟೋಸ್ಟಿರಾನ್ ಮಟ್ಟ ಹೆಚ್ಚುವುದರಿಂದ ಜೊತೆಗೆ ಈ ಸಂದರ್ಭದಲ್ಲಿ ಅನಗತ್ಯ ಗರ್ಭಧಾರಣೆಯ ಭಯವಿಲ್ಲದೇ ಇರುವುದು, ಮಹಿಳೆಯರಲ್ಲಿ ಈ ಸಂದರ್ಭದಲ್ಲಿ ಲೈಂಗಿಕ ಬಯಕೆ ಹೆಚ್ಚಾಗಬಹುದು. ಕೆಲವರಲ್ಲಿ ಈ ಸಂದರ್ಭದಲ್ಲಿ ಭಾವಪ್ರಾಪ್ತಿ ಹೆಚ್ಚೆನ್ನುತ್ತಾರೆ ಹಾಗಾಗಿ ಈ ಬಗ್ಗೆ ನಿಮಗೆ ಯಾವುದೇ ಸಂದೇಹ ಬೇಡ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN-U04010KA2002SGC030438

ಟೆಂಡರ್ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

ಬೆಸ್ಕಾಂ ವಿಚಾರಣೆಯ ಸಂಖ್ಯೆ: ಬೆಸ್ಕಾಂ/ಪ್ರವ್ಯ-ಡಾಸ್/ಸಿಸಿಆರ್‌ವಿ/23-24/03 ದಿನಾಂಕ: 19.05.2023 ಅಡಿಯಲ್ಲಿ ಒಂದು ವರ್ಷದ ಅವಧಿಗೆ ಡಿಎಎಸ್, ಬೆವಿಕಂ ನ ಎರಡು ನಿಯಂತ್ರಣಾ ಕೇಂದ್ರಗಳಿಗೆ (ಹೆಚ್.ಎಸ್.ಆರ್ ಲೇಔಟ್ ಮತ್ತು ರಾಜಾಜಿನಗರ) ಅಗತ್ಯವಿರುವ ಬಾಡಿಗೆ ವಾಹನ ಸೇವೆಗಳನ್ನು (24x7) ಪಡೆಯಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬಿಡ್ ದಾಖಲೆಗಳನ್ನು ದಿನಾಂಕ: 20.05.2023 ಮಧ್ಯಾಹ್ನ 16.00 ಗಂಟೆಯಿಂದ https://eproc.karnataka.gov.in ವೆಬ್‌ಸೈಟ್ ಮೂಲಕ ಪಡೆಯಬಹುದು. ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: +91 80 46010000, +91 80 22631200 ಅಥವಾ ಇ-ಮೇಲ್: support@ihelpdesk.com

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912

ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/-
ಪ್ರಧಾನ ವ್ಯವಸ್ಥಾಪಕರು (ಡಾಸ್),
ಬೆವಿಕಂ.

ಕರ್ನಾಟಕ ಲೋಕಸೇವಾ ಆಯೋಗ

''ಉದ್ಯೋಗ ಸೌಧ'', ಬೆಂಗಳೂರು - 560 001

ಸಂಖ್ಯೆ: ಪಿಎಸ್‌ಸಿ792ಆರ್‌ಟಿಬಿ(2)/2023-24/631 ದಿನಾಂಕ: 19.05.2023

ಪತ್ರಿಕಾ ಪ್ರಕಟಣೆ

ಆಯೋಗದ ಅಧಿಸೂಚನೆ ಸಂಖ್ಯೆ: ಆರ್(2)1084/17-18/ಪಿಎಸ್‌ಸಿ, ದಿನಾಂಕ: **23.06.2017**ರಲ್ಲಿ ಅಧಿಸೂಚಿಸಲಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿನ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿನ **'ಸಮಾಜ ವಿಜ್ಞಾನ ಶಿಕ್ಷಕರು'(ಆಂಗ್ಲ ಮಾಧ್ಯಮ)** 239 (154+85ಹೈ.ಕ) ಹುದ್ದೆಗಳ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಬೇಕಿರುತ್ತದೆ. ಸದರಿ ಹುದ್ದೆಗಳ ನೇಮಕಾತಿಯಲ್ಲಿ ಅಭ್ಯರ್ಥಿಗಳು ಪದವಿಯನ್ನು ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದು ಕಡ್ಡಾಯವಾಗಿರುವುದರಿಂದ ಸದರಿ ಇಲಾಖೆಯ 239 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ಮುಖ್ಯಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಲು ಬಹು ಸಂಖ್ಯೆಯಲ್ಲಿ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆಯನ್ನು ನಡೆಸಿದ್ದರೂ ಸಹ 227 ಹುದ್ದೆಗಳನ್ನು ಮಾತ್ರ ಅಂತಿಮ ಆಯ್ಕೆಪಟ್ಟಿಯಲ್ಲಿ ಭರ್ತಿ ಮಾಡಲು ಸಾಧ್ಯವಾಗಿರುತ್ತದೆ. ಪ್ರಸ್ತುತ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಬೇಕಾದ ಹಿನ್ನಲೆಯಲ್ಲಿ **ಪದವಿಯನ್ನು ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವಂತಹ ಅಭ್ಯರ್ಥಿಗಳ ದಾಖಲೆಗಳನ್ನು ಮಾತ್ರ ಪಡೆಯಬೇಕಿರುವುದರಿಂದ** ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಿ ಮೂಲ ದಾಖಲೆಗಳ ಪರಿಶೀಲನೆಯಾಗದ ಕೆಳ ಜೇಷ್ಠತೆಯ ಎಲ್ಲ ಅಭ್ಯರ್ಥಿಗಳ ಹೆಸರು ಮತ್ತು ನೊಂದಣಿ ಸಂಖ್ಯೆಗಳುಳ್ಳ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ದಿನಾಂಕ: **18.05.2023ರಂದು** ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿರುತ್ತದೆ. **ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳಲ್ಲಿ ಕಡ್ಡಾಯವಾಗಿ ಪದವಿಯನ್ನು ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವಂತಹ ಅಭ್ಯರ್ಥಿಗಳು ಮಾತ್ರ** ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: **24.07.2017ಕ್ಕೆ** ಸಿಂಧುವಾಗಿರುವಂತೆ ಪದವಿಯನ್ನು ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಪ್ರಮಾಣ ಪತ್ರದೊಂದಿಗೆ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವಂತೆ ವಿದ್ಯಾರ್ಹತೆ ಮತ್ತು ಇತರೆ ಮೀಸಲಾತಿ ಪ್ರಮಾಣಪತ್ರಗಳನ್ನು ದ್ವಿಪ್ರತಿಗಳಲ್ಲಿ ಸ್ವಯಂ ದೃಢೀಕರಿಸಿ ಇತ್ತೀಚಿನ 2 ಭಾವಚಿತ್ರಗಳೊಂದಿಗೆ ನೀವೇ ಅಭ್ಯರ್ಥಿಯೆಂಬ ಬಗ್ಗೆ ಆನ್‌ಲೈನ್ ಅರ್ಜಿ/ಪ್ರವೇಶ ಪತ್ರದೊಂದಿಗೆ ಖುದ್ದಾಗಿ ದಿನಾಂಕ: **01.06.2023 ರಿಂದ ದಿನಾಂಕ: 10.06.2023** ರೊಳಗಾಗಿ ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು ಇಲ್ಲಿಗೆ ಸಲ್ಲಿಸಲು ಈ ಮೂಲಕ ಸೂಚಿಸಿದೆ.

ದಾಖಲೆಗಳನ್ನು ಸಲ್ಲಿಸುವಂತೆ ಅಭ್ಯರ್ಥಿಗಳಿಗೆ ಆಯೋಗದಿಂದ ವೈಯಕ್ತಿಕವಾಗಿ ಹಿಂಬರಹ/ಇಮೇಲ್/ಸಂದೇಶ ಕಳುಹಿಸುವುದಿಲ್ಲ. ನಿಗದಿತ ದಿನಾಂಕದೊಳಗೆ ಅಭ್ಯರ್ಥಿಗಳಿಂದ ಸ್ವೀಕೃತವಾಗುವ ದಾಖಲೆಗಳನ್ನು ಮಾತ್ರ ಪರಿಗಣಿಸಲಾಗುವುದು ಮತ್ತು ದಾಖಲೆಗಳನ್ನು ಸಲ್ಲಿಸದ ಅಭ್ಯರ್ಥಿಗಳನ್ನು ಮುಂದಿನ ಆಯ್ಕೆ ಪ್ರಕ್ರಿಯೆ ಇಂದ ಕೈಬಿಡಲಾಗುವುದೆಂದು ಈ ಮೂಲಕ ತಿಳಿಸಿದೆ.

ಸಹಿ/-(ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1, ಗಾಂಧಿನಗರ, ಬೆಂಗಳೂರು-09.

ಸಂಖ್ಯೆ: ಪಿಆರ್‌ಓ/ಸಾರ್ವಜನಿಕ ಪ್ರಕಟಣೆ/2022-23 ದಿನಾಂಕ: 19-05-2023

ಸೂಚನೆ

ಕರ್ನಾಟಕ ವೃತ್ತಿ ತೆರಿಗೆ ಕಾಯ್ದೆ-1976ರಡಿ ನೋಂದಣಿಗೆ ಅರ್ಹರಿರುವ ಹಾಗೂ ನೋಂದಣಿ ಪಡೆದ ವೃತ್ತಿಗಳ, ಕಸಬುಗಳ, ಅಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ವೃತ್ತಿ ತೆರಿಗೆಯನ್ನು ಪಾವತಿಸಲು **ದಿನಾಂಕ: 31.05.2023 ಮುಂದೂಡಿದ ಕೊನೆಯ ದಿನಾಂಕವಾಗಿದ್ದು, ನಿಗದಿತ ದಿನಾಂಕದೊಳಗೆ ವಾರ್ಷಿಕ ವೃತ್ತಿ ತೆರಿಗೆಯನ್ನು ಪಾವತಿಸಲು** ಈ ಮೂಲಕ ಮಾಹಿತಿ ನೀಡಲಾಗಿದೆ.

ಸಹಿ/-
ವಾಣಿಜ್ಯ ತೆರಿಗೆಗಳ ಆಯುಕ್ತರು,
ಕರ್ನಾಟಕ, ಬೆಂಗಳೂರು.

ವಾಸಾಸಂಇ/ವಾಪ್ರ/76/ಎಂಎಎ/2023-24

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

ದರ ಪಟ್ಟಿ (ದರ ಅನುಮೋದನೆಗಾಗಿ) ಟೆಂಡರ್ ಪ್ರಕಟಣೆ

ಕುಲಸಚಿವರು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿ ಉದ್ದೇಶಿತ **"Construction of School Building SB-2 (Annex) and Construction of Entrance Portal in the KSRDPR University, Gadag"** ಕಾಮಗಾರಿಗಳ ಅಂದಾಜು ಪತ್ರಿಕೆಯಲ್ಲಿ ಪರಿಗಣಿಸಲಾದ Non-SR ಅಂಶಗಳಿಗೆ ದರಪಟ್ಟಿ ತಯಾರಿಸಲು Quotation ಆಹ್ವಾನಿಸಲಾಗಿದೆ. (1) Non-SR ಅಂಶಗಳ ಪಟ್ಟಿಯನ್ನು ವಿಶ್ವವಿದ್ಯಾಲಯದ ಸೂಚನಾ ಫಲಕದಲ್ಲಿ ಭಿತ್ತರಿಸಲಾಗುತ್ತದೆ (2) ದರ ಪಟ್ಟಿಯು ಲಭ್ಯವಾಗುವ ದಿನಾಂಕ : **20-05-2023** (3) ದರ ಪಟ್ಟಿ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ : **20-05-2023** (4) ದರ ಪಟ್ಟಿ ಸಲ್ಲಿಸುವ ಕೊನೆಯ ದಿನಾಂಕ : **29-05-2023**

ಸೂಚನೆ : ಉಲ್ಲೇಖಿಸಿದ ದರಗಳು ಜಿಎಸ್‌ಟಿಯನ್ನು ಹೊರತುಪಡಿಸಿರಬೇಕು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಿ ಮತ್ತು KSRDPR ವಿಶ್ವವಿದ್ಯಾಲಯ, GIMS ಹತ್ತಿರ ನಾಗಾವಿ, ಗದಗ

ವಾಸಾಸಂಇ/ಗದಗ/ಕೆ.ಎಸ್.ಎಂ.ಸಿ.ಎ/06/2023-24 ಸಹಿ/- ಕುಲಸಚಿವರು

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

(An Autonomous Institute of Govt. Of
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699/231599

ಸಂಖ್ಯೆ:ಹಿಮ್ಸ್/ಟಿ.ಎಸ್(3)/ಉಮ/38/2022-23 ದಿನಾಂಕ:17.05.2023

ಇ-ಟೆಂಡರ್ ಪ್ರಕಟಣೆ

2023-24ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಸೆಲ್ಲಾರ್‌ನಲ್ಲಿರುವ ಉಪಹಾರ ಮಂದಿರ ಹಾಗೂ ವೈದ್ಯಕೀಯ ಕಾಲೇಜು ಕಟ್ಟಡದ ಸೆಲ್ಲಾರ್‌ನಲ್ಲಿರುವ ಉಪಹಾರ ಮಂದಿರಗಳನ್ನು ಮಾಸಿಕ ಬಾಡಿಗೆಯಲ್ಲಿ ನಡೆಸಲು ಮೂರು ವರ್ಷದ ಅವಧಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ E-Procurement Portal ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಪ್ರತಿ ಉಪಹಾರ ಮಂದಿರಗಳಿಗೆ ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ: 10,000 ಇ-ಟೆಂಡರ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ:03.06.2023 ಪ್ರೀ- ಬಿಡ್ ಮೀಟಿಂಗ್ ದಿನಾಂಕ: 25.05.2023 ತಾಂತ್ರಿಕ ಬಿಡ್ ದಿನಾಂಕ: 05.06.2023 ಆರ್ಥಿಕ ಬಿಡ್ ದಿನಾಂಕ: "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" 1.ಟೆಂಡರಿನ ಷರತ್ತು ಮತ್ತಿತರ ವಿವರಗಳನ್ನು ದಿನಾಂಕ:20.05.2023 ರಿಂದ ವೆಬ್‌ಸೈಟ್ www.eproc.karnatka.gov.in ನಿಂದ ಪಡೆದು ಕೊಳ್ಳಬಹುದು. 2.ಈ ಸಂಬಂಧದ ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ. (ರಜಾ ದಿನಗಳನ್ನು ಹೊರತು ಪಡಿಸಿ) ಟೆಂಡರ್‌ದಾರರು ಇ-ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಮತ್ತು ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ನಲ್ಲಿ Download ಮಾಡಿಕೊಳ್ಳಬಹುದು.

ಸಹಿ/- ಮುಖ್ಯ ಆಡಳಿತಾಧಿಕಾರಿಗಳು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/17/ಕೆಎಸ್‌ಎಂಸಿಎ/18/2023-24

Bharat Petroleum | IndianOil | हिन्दुस्तान पेट्रोलियम HP

ಜಾಹೀರಾತು/ಮರು ಜಾಹೀರಾತಿಗಾಗಿ ಸ್ಥಳಗಳ ಪಟ್ಟಿ

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಕರ್ನಾಟಕದಲ್ಲಿ ಉಲ್ಲೇಖಿಸಲಾದ ವಿವಿಧ ರಾಜ್ಯಗಳ ಅಭ್ಯರ್ಥಿಗಳ ವರ್ಗಗಳಲ್ಲಿ ಎಲ್‌ಪಿಜಿ ವಿತರಕರನ್ನು ನೇಮಿಸಲು ಪ್ರಸ್ತಾಪಿಸಿದೆ.

ಕ್ರ. ಸಂ.	ಆಯಿಲ್ ಕಂಪೆನಿ	ಸ್ಥಳ (ಗ್ರಾಮ)	ಗ್ರಾಮ ಪಂಚಾಯತ್	ಉಪ ವಿಭಾಗ	ಬ್ಲಾಕ್	ಜಿಲ್ಲೆ	ವರ್ಗ	ಮಾರುಕಟ್ಟೆಯ ಪ್ರಕಾರ / ಎಲ್‌ಪಿಜಿ ವಿತರಕತ್ವ ನಗರ / ರೂರ್ಬನ್ / ಗ್ರಾಮೀಣ ವಿತರಕ	ಭದ್ರತಾ ಠೇವಣಿ (ಮೊತ್ತ ಲಕ್ಷಗಳಲ್ಲಿ)	ಮಾರುಕಟ್ಟೆ ಯೋಜನೆ
1	ಐಒಸಿ	ಹೊನ್ನೆತಾಳು	ಹೊನ್ನೆತಾಳು	ಆಗುಂಬೆ	ತೀರ್ಥಹಳ್ಳಿ	ಶಿವಮೊಗ್ಗ	ಮುಕ್ತ	ಡಿಕೆವಿ	4	2017-18
2	ಐಒಸಿ	ಬೀಚಗಾನಹಳ್ಳಿ	ಬೀಚಗಾನಹಳ್ಳಿ	N/A	ಗೌರಿಬಿದನೂರು	ಚಿಕ್ಕಬಳ್ಳಾಪುರ	ಮುಕ್ತ	ಗ್ರಾಮೀಣ	4	2017-18
3	ಐಒಸಿ	ಕೋಣನಕೇರಿ	ಕೋಣನಕೇರಿ	ಶಿಗ್ಗಾಂವ	ಶಿಗ್ಗಾಂವ	ಹಾವೇರಿ	ಮುಕ್ತ	ಡಿಕೆವಿ	4	2017-18
4	ಐಒಸಿ	ಕದ್ರಾ	ಕದ್ರಾ	ಕಾರವಾರ	ಕಾರವಾರ	ಉತ್ತರ ಕನ್ನಡ	ಮುಕ್ತ	ಡಿಕೆವಿ	4	2017-18
5	ಐಒಸಿ	ಹುನ್ನರಗಿ	ಹುನ್ನರಗಿ	N/A	ಚಿಕ್ಕೋಡಿ	ಬೆಳಗಾವಿ	ಎಸ್ಸಿ	ಗ್ರಾಮೀಣ	2	2017-18
6	ಹೆಚ್‌ಪಿಸಿ	ಅಸಗೋಡು	ಅಸಗೋಡು	ಕೊಪ್ಪ	ಕೊಪ್ಪ	ಚಿಕ್ಕಮಗಳೂರು	ಮುಕ್ತ	ಡಿಕೆವಿ	4	2017-18
7	ಹೆಚ್‌ಪಿಸಿ	ದೊಡ್ಡಸಗೆರೆ	ದೊಡ್ಡಸಗೆರೆ	ಕೊರಟಗೆರೆ	ಕೊರಟಗೆರೆ	ತುಮಕೂರು	ಮುಕ್ತ(ಮ)	ಗ್ರಾಮೀಣ	4	2022-23
8	ಬಿಪಿಸಿ	ಮಂಡ್ಯ ಬೊಮ್ಮನಾಯಕನಹಳ್ಳಿ	ಮಂಡ್ಯ ಬೊಮ್ಮನಾಯಕನಹಳ್ಳಿ	N/A	ಚನಪಟ್ಟಣ	ರಾಮನಗರ	ಎಸ್ಸಿ	ಗ್ರಾಮೀಣ	2	2017-18
9	ಬಿಪಿಸಿ	ನೆರಿಯಾ	ನೆರಿಯಾ	ಬೆಳ್ತಂಗಡಿ	ಬೆಳ್ತಂಗಡಿ	ದಕ್ಷಿಣ ಕನ್ನಡ	ಮುಕ್ತ	ಡಿಕೆವಿ	4	2017-18
10	ಬಿಪಿಸಿ	ಧಾರವಾಡ	ಧಾರವಾಡ	N/A	ಧಾರವಾಡ	ಧಾರವಾಡ	ಮುಕ್ತ	ನಗರ	5	ಮುಕ್ತಾಯದ ವಿರುದ್ಧ
11	ಬಿಪಿಸಿ	ನಗರಬಸ್ತಿಕೇರಿ	ನಗರಬಸ್ತಿಕೇರಿ	ಹೊನ್ನಾವರ	ಹೊನ್ನಾವರ	ಉತ್ತರ ಕನ್ನಡ	ಓಬಿಸಿ	ಡಿಕೆವಿ	3	2017-18
12	ಬಿಪಿಸಿ	ತೋವಿನಕೆರೆ	ತೋವಿನಕೆರೆ	ಕೊರಟಗೆರೆ	ಕೊರಟಗೆರೆ	ತುಮಕೂರು	ಓಬಿಸಿ	ಡಿಕೆವಿ	3	2022-23
13	ಬಿಪಿಸಿ	ಚಿಂತಾಮಣಿ	ಚಿಂತಾಮಣಿ	N/A	ಚಿಂತಾಮಣಿ	ಚಿಕ್ಕಬಳ್ಳಾಪುರ	ಮುಕ್ತ	ಗ್ರಾಮೀಣ	4	2013-14
14	ಬಿಪಿಸಿ	ಕಬ್ಬನ್‌ಪೇಟೆ	ಕಬ್ಬನ್‌ಪೇಟೆ	N/A	ಬೆಂಗಳೂರು ನಗರ	ಬೆಂಗಳೂರು ನಗರ	ಮುಕ್ತ	ನಗರ	5	2012-13

** ನಾಮಕರಣವನ್ನು ಈ ಕೆಳಗಿನಂತೆ ಬಳಸಲಾಗಿದೆ:- ಮುಕ್ತ - ಮುಕ್ತ ವರ್ಗ; ಎಸ್ಸಿ - ಪರಿಶಿಷ್ಟ ಜಾತಿ; ಓಬಿಸಿ - ಇತರೆ ಹಿಂದುಳಿದ ವರ್ಗಗಳ ವರ್ಗ; ಮುಕ್ತ(ಮ) - ಮಹಿಳಾ ವರ್ಗವು ಮುಕ್ತ ವರ್ಗಕ್ಕೆ ಸೇರಿದ ಮಹಿಳೆಯರನ್ನು ಒಳಗೊಂಡಿದೆ

1. ಎಲ್‌ಪಿಜಿ ವಿತರಕರ ಆಯ್ಕೆಗೆ ಅರ್ಹತಾ ಮಾನದಂಡಗಳ ವಿವರವಾದ ಮಾರ್ಗಸೂಚಿಗಳು, ಎಲ್‌ಪಿಜಿ ಗೋಡೌನ್‌ಗೆ ಮೂಲಸೌಕರ್ಯ ಅಗತ್ಯತೆಗಳು / ಎಲ್‌ಪಿಜಿ ಗೋಡೌನ್‌ಗೆ ಭೂಮಿ, ಶೋರೂಮ್‌ಗೆ ಭೂಮಿ / ರೆಡಿಮೇಡ್ ಶೋರೂಮ್‌ಗೆ ಭೂಮಿ, ಸಿಲಿಂಡರ್‌ಗಳನ್ನು ಮನೆಗೆ ತಲುಪಿಸಲು ಮೂಲಸೌಕರ್ಯ. ಆಯ್ಕೆ ಪ್ರಕ್ರಿಯೆಯ ವಿವರಗಳು ಮತ್ತು ಆಯ್ಕೆ ಪ್ರಕ್ರಿಯೆಯ ವಿವರಗಳನ್ನು ಎಲ್‌ಪಿಜಿ ವಿತರಕರ ಆಯ್ಕೆಗಾಗಿ ಬ್ರೋಷರ್‌ನಲ್ಲಿ ನೀಡಲಾಗಿದೆ, ಇದನ್ನುಯಾವುದೇ ತೈಲ ಕಂಪನಿಯ ವೆಬ್ ಸೈಟ್ **www.iocl.com, www.bharatpetroleum.in, www.hindustanpetroleum.com** ನಲ್ಲಿ ಡೌನ್ ಲೋಡ್ ಮಾಡಬಹುದು. ಬ್ರೋಷರ್ ಅನ್ನು ವೆಬ್‌ಸೈಟ್ www.lpgvitarakchayan.in ನಿಂದ ಡೌನ್‌ಲೋಡ್ ಮಾಡಬಹುದು.
2. ಅರ್ಹತಾ ಮಾನದಂಡಗಳನ್ನು ಪೂರೈಸುವ ಮತ್ತು ನಗರ ವಿತರಕ, ರುರ್ಬನ್ ವಿತರಕ, ಗ್ರಾಮೀಣ ವಿತರಕ ಅಥವಾ ದುರ್ಗಮ ಕ್ಷೇತ್ರ ವಿತರಕ (ಅನ್ವಯವಾಗುವಂತೆ) ಆಯ್ಕೆಗೆ ಅರ್ಜಿ ಸಲ್ಲಿಸಲು ಬಯಸುವ ಎಲ್ಲಾ ವ್ಯಕ್ತಿಗಳು **www.lpgvitarakchayan.in** ವೆಬ್‌ಸೈಟ್‌ಗೆ ಲಾಗ್ ಇನ್ ಆಗಬೇಕು ಮತ್ತು ವೆಬ್‌ಸೈಟ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಒಮ್ಮೆ ನೋಂದಾಯಿಸಿದ ನಂತರ, ಅವರು ಲಾಗಿನ್ ಆಗಬೇಕು, ಎಲ್ಲಾ ವಿಷಯಗಳಲ್ಲಿ ಅಗತ್ಯ ವಿವರಗಳನ್ನು ಭರ್ತಿ ಮಾಡಬೇಕು ಮತ್ತು **ಜಾಹೀರಾತಿನ ದಿನಾಂಕ : 19-06-2023 17:00** ಗಂಟೆಗಳ ಒಳಗೆ ಅಥವಾ ಮೊದಲು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ನಮೂನೆಯನ್ನು ಸಲ್ಲಿಸುವ ಮೊದಲು, ಅಭ್ಯರ್ಥಿಗಳು ತಮ್ಮ ಪಾಸ್‌ಪೋರ್ಟ್ ಗಾತ್ರದ ಛಾಯಾಚಿತ್ರ ಮತ್ತು ಅವರ ಸಹಿಯ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಪ್ರತ್ಯೇಕ ಫೈಲ್‌ಗಳಲ್ಲಿ ಅಪ್‌ಲೋಡ್ ಮಾಡಬೇಕಾಗುತ್ತದೆ ಮತ್ತು ವೆಬ್‌ಸೈಟ್: **www.lpgvitarakchayan.in**. ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಇಂಟರ್ನೆಟ್ ಬ್ಯಾಂಕಿಂಗ್ / ಡೆಬಿಟ್ ಕಾರ್ಡ್ / ಕ್ರೆಡಿಟ್ ಕಾರ್ಡ್ ಸೌಲಭ್ಯದ ಮೂಲಕ ಅರ್ಜಿ ಸಲ್ಲಿಸಬೇಕು. ನಗರ ವಿತರಕ, ರುರ್ಬನ್ ವಿತರಕ, ಗ್ರಾಮೀಣ ವಿತರಕ ಅಥವಾ ದುರ್ಗಮ ಕ್ಷೇತ್ರ ವಿತರಕರಿಗೆ ಅನ್ವಯವಾಗುವ ಮರುಪಾವತಿಸಲಾಗದ ಅರ್ಜಿ ಶುಲ್ಕವನ್ನು ಕೆಳಗಿನ ಕೋಷ್ಟಕ 1 ಮತ್ತು 2 ರಲ್ಲಿ ನೀಡಲಾಗಿದೆ.

ಕೋಷ್ಟಕ 1 ನಗರ ವಿತರಕರಿಗಾಗಿ ಮರುಪಾವತಿಸಲಾಗದ ಅರ್ಜಿ ಶುಲ್ಕ

ವರ್ಗ	ಮರುಪಾವತಿಸಲಾಗದ ಅರ್ಜಿ ಶುಲ್ಕ
ಮುಕ್ತ	ರೂ. 10,000 (ಹತ್ತು ಸಾವಿರ ರೂಪಾಯಿಗಳು ಮಾತ್ರ) **

** ಜಾಹೀರಾತು / ಅಧಿಸೂಚನೆಯಲ್ಲಿ ಉಲ್ಲೇಖಿಸಲಾದ ನಗರ ವಿತರಕ ಮತ್ತು ರುರ್ಬನ್ ವಿತರಕ ಸ್ಥಳಗಳ ಅಡಿಯಲ್ಲಿ ಮುಕ್ತ ವರ್ಗಕ್ಕೆ ಅರ್ಜಿ ಸಲ್ಲಿಸುವ ಎಸ್ಸಿ/ಎಸ್ಟಿ ಅಭ್ಯರ್ಥಿಗಳಿಗೆ ಮರುಪಾವತಿಸಲಾಗದ ಅರ್ಜಿ ಶುಲ್ಕ ರೂ. 3,000 (ಮೂರು ಸಾವಿರ ರೂಪಾಯಿಗಳು ಮಾತ್ರ). ಅವರು ಅರ್ಜಿ ಸಂಖ್ಯೆ ಮತ್ತು ಸಂಬಂಧಿತ ಎಸ್ಸಿ/ಎಸ್ಟಿ ಪ್ರಮಾಣಪತ್ರದ ಪ್ರಮಾಣಪತ್ರ ಸಂಖ್ಯೆಯನ್ನು ಒದಗಿಸಬೇಕು ಅದನ್ನು ಪರಿಶೀಲಿಸಲಾಗುತ್ತದೆ. ಆನ್‌ಲೈನ್‌ನಲ್ಲಿ ಭಾರತ ಸರ್ಕಾರದ ದಾಖಲೆಗಳಲ್ಲಿ ಲಭ್ಯವಿರುವ ಡೇಟಾದೊಂದಿಗೆ ವಿವರಗಳು ಹೊಂದಿಕೆಯಾಗುತ್ತಿಲ್ಲ ಎಂದು ನಂತರ ಕಂಡುಬಂದರೆ, ಅರ್ಜಿಯನ್ನು ತಿರಸ್ಕರಿಸಲಾಗುವುದು. ಓಬಿಸಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಆದರೆ "ಮುಕ್ತ" ವರ್ಗದ ಸ್ಥಳಗಳಿಗೆ ಅರ್ಜಿ ಸಲ್ಲಿಸುವವರು "ಮುಕ್ತ" ಅಭ್ಯರ್ಥಿಗಳಿಗೆ ಅನ್ವಯವಾಗುವ ಅರ್ಜಿ ಶುಲ್ಕವನ್ನು ಸಲ್ಲಿಸಬೇಕು

ಕೋಷ್ಟಕ 2 ಗ್ರಾಮೀಣ ವಿತರಕ ಸ್ಥಳಗಳು ಮತ್ತು ದುರ್ಗಮ ಕ್ಷೇತ್ರ ವಿತರಕ ಸ್ಥಳಗಳಿಗಾಗಿ ಮರುಪಾವತಿಸಲಾಗದ ಅರ್ಜಿ

ವರ್ಗ	ಮರುಪಾವತಿಸಲಾಗದ ಅರ್ಜಿ ಶುಲ್ಕ
ಮುಕ್ತ	ರೂ. 8,000 (ಎಂಟು ಸಾವಿರ ರೂಪಾಯಿಗಳು ಮಾತ್ರ) **
ಓಬಿಸಿ	ರೂ. 4,000 (ನಾಲ್ಕು ಸಾವಿರ ಮಾತ್ರ)
ಎಸ್ಸಿ/ಎಸ್ಟಿ	ರೂ. 2,500 (ಎರಡು ಸಾವಿರದ ಐನೂರು ರೂಪಾಯಿಗಳು ಮಾತ್ರ)

**ಮುಕ್ತ ವರ್ಗದ ಗ್ರಾಮೀಣ ವಿತರಕ ಸ್ಥಳಗಳು ಮತ್ತು ದುರ್ಗಮ ಕ್ಷೇತ್ರ ವಿತರಕ ಸ್ಥಳಗಳಿಗೆ ಅರ್ಜಿ ಸಲ್ಲಿಸುವ ಎಸ್ಸಿ/ಎಸ್ಟಿ ಅಭ್ಯರ್ಥಿಗಳು ಮರುಪಾವತಿಸಲಾಗದ ಅರ್ಜಿ ಶುಲ್ಕ ರೂ. 2,500 (ರೂಪಾಯಿ ಎರಡು ಸಾವಿರದ ಐನೂರು ಮಾತ್ರ). ಆದಾಗ್ಯೂ, ಓಬಿಸಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಆದರೆ "ಮುಕ್ತ" ವರ್ಗದ ಸ್ಥಳಗಳಿಗೆ ಅರ್ಜಿ ಸಲ್ಲಿಸುವವರು "ಮುಕ್ತ" ಅಭ್ಯರ್ಥಿಗಳಿಗೆ ಅನ್ವಯವಾಗುವ ಅರ್ಜಿ ಶುಲ್ಕವನ್ನು ಸಲ್ಲಿಸಬೇಕು.

3. ಹೆಚ್ಚಿನ ವಿವರಗಳಿಗಾಗಿ ಬ್ರೋಷರ್ ಅನ್ನು ಪರಿಶೀಲಿಸಲು ಅಭ್ಯರ್ಥಿಗಳನ್ನು ಕೋರಲಾಗಿದೆ. ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಆನ್‌ಲೈನ್ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಮೊದಲು www.lpgvitarakchayan.in ಪೋರ್ಟಲ್‌ನಲ್ಲಿ ಲಭ್ಯವಿರುವ 'ಅರ್ಜಿದಾರರ LPG ವಿತರಕ ಬಳಕೆದಾರರ ಕೈಪಿಡಿ'ಯನ್ನು ಎಚ್ಚರಿಕೆಯಿಂದ ಓದಲು ಅಭ್ಯರ್ಥಿಗಳನ್ನು ವಿನಂತಿಸಲಾಗಿದೆ.
4. ಆನ್‌ಲೈನ್ ಅರ್ಜಿಯನ್ನು ಸಲ್ಲಿಸಿದ ನಂತರ, ವಿನಂತಿಸಿದ ಹೊರತು ಯಾವುದೇ ಡಾಕ್ಯುಮೆಂಟ್ ಅನ್ನು ಭೌತಿಕ ರೂಪದಲ್ಲಿ ಅಥವಾ ಅರ್ಜಿ ನಮೂನೆಯ ಪ್ರಿಂಟ್‌ಔಟ್‌ನಲ್ಲಿ ಯಾವುದೇ ಕಚೇರಿಗೆ ಸಲ್ಲಿಸುವ ಅಗತ್ಯವಿಲ್ಲ. ನಂತರ, ಡ್ರಾದಲ್ಲಿ ಅಭ್ಯರ್ಥಿಯನ್ನು ಆಯ್ಕೆ ಮಾಡಿದರೆ, ಆಯ್ಕೆಯಾದ ಅಭ್ಯರ್ಥಿಯು ಪರಿಶೀಲನೆಯ ಸಮಯದಲ್ಲಿ ನಿಗದಿತ ಅರ್ಹತಾ ಪ್ರಮಾಣಪತ್ರವನ್ನು (ಗಳನ್ನು) ಹಾಜರುಪಡಿಸಬೇಕಾಗುತ್ತದೆ. ಡಿಫೆನ್ಸ್ ಪರ್ಸನಲ್ ವಿಭಾಗದ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ರುಜುವಾತುಗಳ ಕ್ಷೇತ್ರ ಪರಿಶೀಲನೆಯ ಸಮಯದಲ್ಲಿ ಡೈರೆಕ್ಟರೇಟ್ ಜನರಲ್ ಆಫ್ ರಿಸೆಟಲ್‌ಮೆಂಟ್ (ಡಿಜಿಆರ್) ನಿಂದ ಮೂಲ ಅರ್ಹತಾ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ. ವಿವರಗಳಿಗಾಗಿ ದಯವಿಟ್ಟು ಬ್ರೋಷರ್‌ಅನ್ನು ನೋಡಿ.
5. ಸಾಮಾನ್ಯ
   a. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್, ಅಥವಾ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಈ ಜಾಹೀರಾತನ್ನು ರದ್ದುಗೊಳಿಸುವ/ಹಿಂತೆಗೆದು ಕೊಳ್ಳುವ/ತಿದ್ದುಪಡಿ ಮಾಡುವ ಅಥವಾ ಯಾವುದೇ ಕಾರಣವನ್ನು ನೀಡದೆ ತನ್ನ ಸ್ವಂತ ವಿವೇಚನೆಯಿಂದ ಅರ್ಜಿ ನಮೂನೆಗಳ ಸಲ್ಲಿಕೆಯ ಅಂತಿಮ ದಿನಾಂಕವನ್ನು ವಿಸ್ತರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.
   b. ಅರ್ಜಿದಾರರು ಒಂದು ಸ್ಥಳಕ್ಕಾಗಿ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಬೇಕು. ಒಬ್ಬ ವ್ಯಕ್ತಿಯಿಂದ ಸ್ಥಳಕ್ಕಾಗಿ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದರೆ, ಗಣಕೀಕೃತ ಡ್ರಾದಲ್ಲಿ ಲೆಕ್ಕ ಹಾಕುವ ಉದ್ದೇಶಕ್ಕಾಗಿ ಅಂತಹ ಅರ್ಜಿಗಳನ್ನು ಒಟ್ಟಿಗೆ ಸೇರಿಸಲಾಗುತ್ತದೆ ಮತ್ತು ಒಂದು ಅಪ್ಲಿಕೇಶನ್‌ನಂತೆ ಪರಿಗಣಿಸಲಾಗುತ್ತದೆ. ಅಂತಹ ಸಂದರ್ಭಗಳಲ್ಲಿ, ಎಲ್ಲಾ ಇತರ ಅರ್ಜಿಗಳ ವಿರುದ್ಧ ಸ್ವೀಕರಿಸಿದ ಅರ್ಜಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
   c. ಆದಾಗ್ಯೂ, ಅರ್ಜಿದಾರರು ವಿವಿಧ ಸ್ಥಳಗಳಿಗೆ ಅರ್ಜಿ ಸಲ್ಲಿಸಬಹುದು. ಪ್ರತಿ ಸ್ಥಳಕ್ಕೂ ಪ್ರತ್ಯೇಕ ಆನ್‌ಲೈನ್ ಅರ್ಜಿ ನಮೂನೆಗಳನ್ನು ಸಲ್ಲಿಸುವ ಮೂಲಕ ಅರ್ಜಿಯನ್ನು ಸಲ್ಲಿಸಬೇಕು, ಜೊತೆಗೆ ಪ್ರತಿ ಸಂದರ್ಭದಲ್ಲಿಯೂ ಅನ್ವಯವಾಗುವ ಮರುಪಾವತಿಸಲಾಗದ ಅರ್ಜಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ.
   d. ಅಭ್ಯರ್ಥಿಯು ಅರ್ಜಿಯ ಅನುಸಾರವಾಗಿ ಸಲ್ಲಿಸಿದ ಅರ್ಜಿಯಲ್ಲಿ ಅಥವಾ ದಾಖಲೆಗಳಲ್ಲಿ ಮಾಡಿದ ಯಾವುದೇ ಹೇಳಿಕೆ/ಘೋಷಣೆ, ಯಾವುದೇ ಹಂತದಲ್ಲಿ, ಅರ್ಹತೆಯನ್ನು ನಿಗ್ರಹಿಸಿರುವುದು/ತಪ್ಪಾಗಿ ನಿರೂಪಿಸಿರುವುದು/ತಪ್ಪು ಎಂದು ಕಂಡುಬಂದರೆ, ಅರ್ಜಿದಾರರು ಹೊಣೆಗಾರರಾಗಿರುತ್ತಾರೆ ಯಾವುದೇ ಕಾರಣವನ್ನು ನೀಡದೆ ತಿರಸ್ಕರಿಸಲಾಗುತ್ತದೆ ಮತ್ತು ಅರ್ಜಿದಾರರನ್ನು ಎಲ್‌ಪಿಜಿ ವಿತರಕರಾಗಿ ನೇಮಿಸಿದ್ದರೆ, ವಿತರಕರ ವಿತರಕತ್ವವನ್ನು ಕೊನೆಗೊಳಿಸಲಾಗುತ್ತದೆ ಮತ್ತು ಮರುಪಾವತಿಸಲಾಗದ ಅರ್ಜಿ ಶುಲ್ಕ / ಸಂಬಂಧಿತ ಆಯಿಲ್ ಮಾರ್ಕೆಟಿಂಗ್ ಕಂಪನಿಗೆ ಪಾವತಿಸಿದ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅಭ್ಯರ್ಥಿ / ವಿತರಕರು ಆಯಾ ತೈಲ ಮಾರುಕಟ್ಟೆ ಕಂಪನಿಯ ವಿರುದ್ಧ ಯಾವುದೇ ಕ್ಲೈಮ್ ಹೊಂದಿರುವುದಿಲ್ಲ.
   e. ಇದು ನಿರೀಕ್ಷಿತ ಅಭ್ಯರ್ಥಿಗಳಿಂದ ಅರ್ಜಿಯನ್ನು ಪಡೆಯುವ ಜಾಹೀರಾತು/ಅಧಿಸೂಚನೆ ಮಾತ್ರ ಮತ್ತು ಎಲ್‌ಪಿಜಿ ವಿತರಕತ್ವಕ್ಕೆ ಕೊಡುಗೆಯಲ್ಲ.
   f. ಎಲ್ಲಾ ಪತ್ರವ್ಯವಹಾರಗಳನ್ನು www.lpgvitarakchayan.in ಪೋರ್ಟಲ್ ಮೂಲಕ ಅಭ್ಯರ್ಥಿಯ ನೋಂದಾಯಿತ ಇಮೇಲ್ ಐಡಿ ಅಥವಾ ನೋಂದಾಯಿತ ಫೋನ್ ಸಂಖ್ಯೆಗೆ ಇಮೇಲ್ ಮತ್ತು / ಅಥವಾ ಎಸ್‌ಎಂಎಸ್ ಮೂಲಕ ಮಾಡಲಾಗುತ್ತದೆ.
   g. ಇದು ಸಂಪೂರ್ಣವಾಗಿ ವ್ಯಾಪಾರದ ಪ್ರತಿಪಾದನೆಯಾಗಿದೆ ಮತ್ತು ಆಯಾ ತೈಲ ಕಂಪನಿಯಲ್ಲಿ ಉದ್ಯೋಗಕ್ಕಾಗಿ ಅರ್ಜಿಯಲ್ಲ ಮತ್ತು ಸಾಮಾನ್ಯ ವ್ಯಾಪಾರ ಅಪಾಯಗಳನ್ನು ಹೊಂದಿದೆ ಮತ್ತು ಯಾವುದೇ ಖಚಿತವಾದ ಆದಾಯ ಅಥವಾ ಲಾಭವನ್ನು ಖಾತರಿಪಡಿಸುವುದಿಲ್ಲ.
   h. ಇಂಗ್ಲಿಷ್‌ನಲ್ಲಿ ಪ್ರಕಟವಾದ ಜಾಹೀರಾತಿನಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ, ಯಾವುದಾದರೂ, ಸ್ಥಳೀಯ ಭಾಷೆಗೆ ಹೋಲಿಸಿದರೆ, ಸ್ಥಳೀಯ ಭಾಷೆಯಲ್ಲಿ ಸೂಚಿಸಲಾದ ನಿರ್ದೇಶನಗಳು/ಮಾಹಿತಿಯು ಮೇಲುಗೈ ಸಾಧಿಸುತ್ತದೆ.
   i. ವೆಬ್‌ಸೈಟ್ www.lpgvitarakchayan.in vis-à-vis' ಈ ಜಾಹೀರಾತು / ಅಧಿಸೂಚನೆಯಲ್ಲಿ ಕಂಡುಬರುವ ವಿವರಗಳಲ್ಲಿ ವ್ಯತ್ಯಾಸವಿದ್ದಲ್ಲಿ, ಪ್ರಕಟಿತ ಜಾಹೀರಾತು / ಅಧಿಸೂಚನೆಯಲ್ಲಿ ಕಂಡುಬರುವ ವಿವರಗಳು ಮೇಲುಗೈ ಸಾಧಿಸುತ್ತವೆ.
   j. ಅರ್ಜಿದಾರರ ಬ್ಯಾಂಕ್ ಖಾತೆ / ಡೆಬಿಟ್ ಕಾರ್ಡ್ / ಕ್ರೆಡಿಟ್ ಕಾರ್ಡ್ ಖಾತೆಯಿಂದ ಕಡಿತಗೊಳಿಸಲಾದ ಮೊತ್ತ, ಸಂಬಂಧಪಟ್ಟ ತೈಲ ಕಂಪನಿಯ ಆಯಾ ಬ್ಯಾಂಕ್ ಖಾತೆಗೆ ವರ್ಗವಣೆಯಾಗದಿದ್ದಲ್ಲಿ, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್, ಅಥವಾ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಜವಾಬ್ದಾರರಾಗಿರುವುದಿಲ್ಲ.
   k. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್, ಅಥವಾ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್, ಅರ್ಜಿದಾರರು ಅವರ/ಅವಳ ಬ್ಯಾಂಕ್ ಖಾತೆ/ ಡೆಬಿಟ್ ಕಾರ್ಡ್ ಖಾತೆ/ಕ್ರೆಡಿಟ್ ಕಾರ್ಡ್‌ನಿಂದ ಅರ್ಜಿಗಾಗಿ ಆನ್‌ಲೈನ್‌ನಲ್ಲಿ ಪಾವತಿಸಿದ ಯಾವುದೇ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲು ಜವಾಬ್ದಾರರಾಗಿರುವುದಿಲ್ಲ.

❦ ಸುಭಾಷಿತ ❦

ನನ್ನ ಹಾಗೆ ನೀನೂ ಬದುಕು ಎಂದು ಸಲಹೆ ನೀಡಬಹುದೇ ವಿನಾ, ನಾನು ಹೇಗಾದರೂ ಬದುಕುತ್ತೇನೆ, ನೀನು ಹೀಗೇ ಬದುಕು ಎಂದು ಹೇಳುವುದು ಸರಿಯಲ್ಲ.

–ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಜನಕಲ್ಯಾಣ ಆದ್ಯತೆಯಾಗಲಿ ಭ್ರಷ್ಟಾಚಾರ ಕೊನೆಯಾಗಲಿ

ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕರು ನಿರೀಕ್ಷಿಸಿದ ರೀತಿಯ ಭಾರಿ ಬಹುಮತವನ್ನು ರಾಜ್ಯದ ಜನರು ನೀಡಿದ್ದಾರೆ. ಜನಾದೇಶಕ್ಕೆ ತಕ್ಕಂತೆ ಜನಪರವಾದ ಆಡಳಿತ ನೀಡುವ ಗುರುತರ ಹೊಣೆಗಾರಿಕೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಸಿದ್ದರಾಮಯ್ಯ ಅವರ ಮುಂದಿರುವ ಬಹುದೊಡ್ಡ ಸವಾಲಾಗಿದೆ. ಆಡಳಿತದ ಅಪಾರ ಅನುಭವ, ನೊಂದವರು, ಹಸಿದವರ ಬಗೆಗೆ ಕರುಣೆ ಹಾಗೂ ಸಂಪನ್ಮೂಲವನ್ನು ಹೇಗೆ ಖರ್ಚು ಮಾಡಬೇಕೆಂಬ ಸ್ಪಷ್ಟ ತಿಳಿವಳಿಕೆ ಇರುವ ಸಿದ್ದರಾಮಯ್ಯ ಅವರಿಗೆ ಸರ್ಕಾರವನ್ನು ನಡೆಸುವುದು ಕಷ್ಟವಾಗಲಾರದು. ಬರಲಿರುವ ಲೋಕಸಭೆ ಚುನಾವಣೆ, ಜನರ ನಿರೀಕ್ಷೆಗಳನ್ನು ಈಡೇರಿಸಲೇಬೇಕಾದ ಅನಿವಾರ್ಯ, 135 ಶಾಸಕರ ಅಪೇಕ್ಷೆಗಳನ್ನು ತಣಿಸುವುದರ ಜತೆಗೆ, ಸಂಭಾವ್ಯ ಪೈಪೋಟಿಯನ್ನು ಸಹನೀಯಗೊಳಿಸಿಕೊಂಡು ಸರ್ಕಾರವನ್ನು ಮುನ್ನಡೆಸುವುದು ಕತ್ತಿಯಂಚಿನ ನಡಿಗೆ. ಬಿಜೆಪಿ ಆಡಳಿತ ನೋಡಿ ರೋಸಿಹೋಗಿದ್ದ ಜನ ಕಾಂಗ್ರೆಸ್‌ನ ಹಸ್ತಕ್ಕೆ ಅಭಯ ನೀಡಿದ್ದಾರೆ. ಕಾಂಗ್ರೆಸ್ ನಾಯಕರು ಚುನಾವಣೆಗೆ ಮುನ್ನ ಘೋಷಿಸಿರುವ ಐದು ಗ್ಯಾರಂಟಿಗಳು, ಕಷ್ಟದ ಬದುಕಿನಲ್ಲೇ ದಿನ ದೂಡುತ್ತಿದ್ದ ಬಹುಸಂಖ್ಯಾತ ಬಡ, ಮಧ್ಯಮ ವರ್ಗದವರಿಗೆ, ಅದರಲ್ಲೂ ಮಹಿಳೆಯರಿಗೆ ಭವ್ಯ ಆಸರೆಯಂತೆ ಕಂಡಿವೆ. [illegible]

ಜನರ ನಂಬಿಕೆಗೆ ಭಂಗ ತರದಂತೆ ಸುಲಲಿತ ಆಡಳಿತ ನೀಡುವ ಹೊಣೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರ ಮೇಲಿದೆ

[illegible] ಮೀರಿ, ಜನಪರ ಆಡಳಿತ ನೀಡುವುದು ಸಿದ್ದರಾಮಯ್ಯನವರ ಮುಂದಿರುವ ಅಗ್ನಿ ಪರೀಕ್ಷೆ.

ಒಂದೂವರೆ ವರ್ಷದಿಂದೀಚೆಗೆ ಬಿಜೆಪಿ ನೇತೃತ್ವದ ಸರ್ಕಾರವನ್ನು 'ಶೇ 40ರ ಕಮಿಷನ್' ಸರ್ಕಾರ ಎಂದು ಕಾಂಗ್ರೆಸ್ ನಾಯಕರು ಜರಿದರು. 'ಬಿಜೆಪಿ ಎಂದರೆ ಭ್ರಷ್ಟಾಚಾರ' ಎಂದು ಬಿಂಬಿಸುವಲ್ಲಿ ಕಾಂಗ್ರೆಸ್ ಯಶಸ್ವಿಯೂ ಆಯಿತು. [illegible]

[illegible] ಗೃಹ ಇಲಾಖೆಯನ್ನು ಸದಾ ಎಚ್ಚರದ ಸ್ಥಿತಿಯಲ್ಲಿಡುವ ಗುರುತರ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಮೇಲಿರುವ ವಿಶ್ವಾಸದಷ್ಟೇ ಬಿಜೆಪಿ ವಿರುದ್ಧದ ಸಿಟ್ಟು ಕೆಲಸ ಮಾಡಿದೆ. ಜನರ ನಂಬಿಕೆಗೆ ಭಂಗ ತರದಂತೆ ಸುಲಲಿತ ಆಡಳಿತ ನೀಡುವ ಹೊಣೆ ಸಿದ್ದರಾಮಯ್ಯ– ಡಿ.ಕೆ.ಶಿವಕುಮಾರ್ ಅವರ ಮೇಲಿದೆ. ಒಮ್ಮತದ ಬದಲು ಭಿನ್ನಮತ ಶುರುವಾದರೆ ಆಡಳಿತ ಯಂತ್ರದ ಮೇಲೆ ಅಡ್ಡಪರಿಣಾಮ ಬೀರುತ್ತದೆ. ಜನಾಧಿಕಾರದ ಬದಲು ಅಧಿಕಾರಿಗಳ ಆಡಳಿತ ಮೇಲುಗೈ ಸಾಧಿಸುತ್ತದೆ. ಆಡಳಿತದ ಮೇಲೆ ಹಿಡಿತ ತಪ್ಪಿ, ಆಡಳಿತ ಯಂತ್ರ ಹಳಿ ತಪ್ಪಿದರೆ ಕಷ್ಟಪಡುವವರು ಸಾಮಾನ್ಯ ಜನರೇ ವಿನಾ ರಾಜಕಾರಣಿಗಳಲ್ಲ. ಈ ಬಗ್ಗೆ ಎಚ್ಚರದಿಂದ ನಡೆದುಕೊಳ್ಳುವುದು ಕಾಂಗ್ರೆಸ್ ನಾಯಕರ ಜವಾಬ್ದಾರಿ.

ದಿನದ ಟ್ವೀಟ್

ಹೀಗೆ ಮಾಡುವುದು ಉತ್ತಮ

ಉಚಿತ ಕೊಡುಗೆಗಳ ಬಗ್ಗೆ ಕಾಂಗ್ರೆಸ್ ವಿರುದ್ಧ ದಾಳಿ ಮಾಡುವುದಕ್ಕೆ, ರಾಜ್ಯದ ಹಣಕಾಸು ಪರಿಸ್ಥಿತಿ ಕುರಿತು ಶ್ವೇತಪತ್ರ ಬಿಡುಗಡೆ ಮಾಡುವುದೇ ಸದ್ಯದಲ್ಲಿ ಬಿಜೆಪಿಗೆ ಇರುವ ಅತ್ಯುತ್ತಮ ಮಾರ್ಗ. ಎರಡೂವರೆ ವರ್ಷಗಳ ನಂತರ ವಿಧಾನಸಭೆಯಲ್ಲಿ ಶ್ವೇತಪತ್ರ ಪ್ರಕಟಿಸುವಂತೆ ಕಾಂಗ್ರೆಸ್ ಪಕ್ಷವನ್ನು ಒತ್ತಾಯಿಸಿ, ರಾಜ್ಯದ ಜನತೆಗೆ ನಿಜ ಏನೆಂಬುದನ್ನು ತೋರಿಸಲಿ. ಹಣಕಾಸು ಪರಿಸ್ಥಿತಿ ಸುಧಾರಣೆಗೊಂಡಿದೆಯೋ ಅಥವಾ ಹಾಳಾಗಿದೆಯೋ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಇದನ್ನು ಬಿಟ್ಟು, ಬಿಲ್‌ಗಳನ್ನು ಪಾವತಿಸಬೇಡಿ ಎಂದು ಹೇಳುವುದು ಉಚಿತವಲ್ಲ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



2016: ಹೊಸ ನೋಟು ಬರುತ್ತಿದೆ! ಇದು ಕಪ್ಪುಹಣವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುತ್ತದೆ. ಎಂತಹ ದೊಡ್ಡ ಹೊಡೆತ!
2023: ಹೊಸ ನೋಟು ಕಣ್ಮರೆಯಾಗಲಿದೆ! ಇದು ಕಪ್ಪುಹಣವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುತ್ತದೆ. ಎಂತಹ ದೊಡ್ಡ ಹೊಡೆತ!

ಧ್ರುವ್ ರಾಠೆ, ಯುಟ್ಯೂಬರ್

25 ವರ್ಷಗಳ ಹಿಂದೆ

ಬುಧವಾರ, 20-5-1998

● **ಬಿಜೆಪಿ 'ರಾಜಕೀಯ ನಿರ್ಧಾರ'ಕ್ಕೆ ಗೌಡರ ಟೀಕೆ**

ನವದೆಹಲಿ, ಮೇ 19– ಅಣ್ವಸ್ತ್ರ ಸಾಧನಗಳ ಪರೀಕ್ಷೆ ನಡೆಸುವ ಮುನ್ನ ಪ್ರತಿಪಕ್ಷಗಳ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ 'ರಾಜಕೀಯ ನಿರ್ಧಾರ' ಕೈಗೊಂಡ ಬಗೆಗೆ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಕಟುವಾಗಿ ಟೀಕಿಸಿದ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಅವರು, ಅಣ್ವಸ್ತ್ರ ಪರೀಕ್ಷೆಯ ನಂತರ ಉದ್ಭವಿಸಿರುವ ವ್ಯತಿರಿಕ್ತ ಪರಿಣಾಮಗಳನ್ನು ಎದುರಿಸಲು ಸರ್ಕಾರದ ಕಾರ್ಯಕ್ರಮ ಏನೆಂಬುದನ್ನು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

ಸಚಿವ ಸಂಪುಟದ ಮೂವರಿಗೆ ತಿಳಿದಿದ್ದನ್ನು ಬಿಟ್ಟರೆ ರಕ್ಷಣಾ ಸಚಿವರಿಗೂ ಗೊತ್ತಿರಲಿಲ್ಲ ಎಂಬ ಪತ್ರಿಕಾ ವರದಿಗಳನ್ನು ಉಲ್ಲೇಖಿಸಿ ವಾಜಪೇಯಿ ಅವರಿಗೆ ಬರೆದಿರುವ ಪತ್ರವನ್ನು ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು.

● **ಒಂದು ಕೋಟಿಗೂ ಕಡಿಮೆ ವೆಚ್ಚದಲ್ಲಿ ಅಣುಬಾಂಬ್**

ನವದೆಹಲಿ, ಮೇ 19 (ಪಿಟಿಐ)– ಭಾರತ ತಯಾರಿಸುವ ಪ್ರತಿ ಅಣುಬಾಂಬಿಗೆ ಒಂದು ಕೋಟಿ ರೂಪಾಯಿಗಿಂತ ಕಡಿಮೆ ವೆಚ್ಚವಾಗಲಿದೆ ಹಾಗೂ ಸೇನೆಯ ಶಸ್ತ್ರಾಸ್ತ್ರೀಕರಣದಿಂದ ಖಜಾನೆಗೆ ಹೊರೆಯೇನೂ ಆಗುವುದಿಲ್ಲ ಎಂದು ಅಣುಶಕ್ತಿ ವಿಭಾಗದ (ಡಿಇಎ) ಮಾಜಿ ಮುಖ್ಯಸ್ಥ ಕೃಷ್ಣಗೋಪಾಲ ಅಯ್ಯಂಗಾರ್ ಹೇಳಿದ್ದಾರೆ.

'ಅಣ್ವಸ್ತ್ರ ಪಡೆಯನ್ನು ರಚಿಸಲು ಭಾರಿ ಖರ್ಚಾಗುತ್ತದೆ ಎಂಬ ಹೇಳಿಕೆ ಆಧಾರವಿಲ್ಲದ್ದು' ಎಂದು ಭಾರತೀಯ ವಿಜ್ಞಾನ ಲೇಖಕರ ಸಂಘಟನೆಯ ಸದಸ್ಯರನ್ನು ಉದ್ದೇಶಿಸಿ ಅವರು ಹೇಳಿದರು.

50 ವರ್ಷಗಳ ಹಿಂದೆ

ಭಾನುವಾರ, 20-5-1973

● **ಬೆಲೆ ಏರಿಕೆ ತಡೆಗೆ ಬೇಕಾದ ಧೈರ್ಯ, ವಿಶ್ವಾಸ ಸರ್ಕಾರಕ್ಕೆ ಇಲ್ಲ: ಕೃಷ್ಣಕಾಂತ್ ಟೀಕೆ**

ನವದೆಹಲಿ, ಮೇ 19– 'ಬೆಲೆ ಏರಿಕೆ ತಡೆಯಲು ಬೇಕಾದ ಧೈರ್ಯ, ನಿಖರ ಪರಿಜ್ಞಾನ ಹಾಗೂ ದೃಢವಿಶ್ವಾಸ ಸರ್ಕಾರಕ್ಕೆ ಇಲ್ಲ' ಎಂದು ಕಾಂಗ್ರೆಸ್ ಸದಸ್ಯ ಕೃಷ್ಣಕಾಂತ್ ಅವರು ಇಂದು ರಾಜ್ಯಸಭೆಯಲ್ಲಿ ಕಟುವಾಗಿ ಟೀಕಿಸಿದರು.

ಐದನೇ ಯೋಜನೆಯನ್ನು ರೂಪಿಸುವಲ್ಲಿ ಮಿತಿಮೀರಿ ಏರಿರುವ ಬೆಲೆಗಳು ಬೀರುವ ಪ್ರಭಾವ ಕುರಿತ ಚರ್ಚೆಯನ್ನು ಆರಂಭಿಸಿ ಅವರು ಮಾತನಾಡುತ್ತಿದ್ದರು.

'ಎಲ್ಲ ಅಗತ್ಯ ವಸ್ತುಗಳ ಬೆಲೆಗಳು ಏರುವುದಕ್ಕೆ ಸರ್ಕಾರಕ್ಕೆ ಬೆಲೆ ಏರಿಕೆ ಮತ್ತು ಹಣಕಾಸು ವ್ಯವಸ್ಥೆ ಮೇಲೆ ಹಿಡಿತ ಇಲ್ಲದಿರುವುದೇ ಕಾರಣ' ಎಂದು ಅವರು ಹೇಳಿದರು.

'ಇಪ್ಪತ್ತೈದು ವರ್ಷಗಳಲ್ಲಿ ಬೆಲೆಗಳು ಅತಿ ಹೆಚ್ಚಾಗಿ ಏರಿದುದು ಕಳೆದ ವರ್ಷದಲ್ಲಿಯೇ' ಎಂದು ಹೇಳಿದ ಕೃಷ್ಣಕಾಂತ್ ಅವರು, 'ಇದರಿಂದ ಬಡವರು, ನಿಗದಿತ ವರಮಾನ ಇರುವ ಜನ ಹಾಗೂ ಮಧ್ಯಮ ವರ್ಗದವರು ಕಷ್ಟಕ್ಕೆ ಗುರಿಯಾದರು' ಎಂದರು.

ಜಾಗೃತ ಮತದಾರರು, ಅತಿ ನಿರೀಕ್ಷೆ, ಲೋಕಸಭಾ ಚುನಾವಣೆಯ ನೆರಳಲ್ಲಿ ಹೊಸ ಸರ್ಕಾರ

ಕಾಂಗ್ರೆಸ್ ಪುನರಾಗಮನ: ನಿರೀಕ್ಷೆ, ಸವಾಲು

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಹತ್ತು ವರ್ಷದ ಕೆಳಗೆ ಇಂಥದ್ದೇ ಮೇ ತಿಂಗಳಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಚನೆಯಾದ ಕಾಲದ ನಿರೀಕ್ಷೆಗಳು ನೆನಪಾಗುತ್ತಿವೆ. ಆಗ, ಅಧಿಕಾರ ವಹಿಸಿಕೊಂಡ ದಿನವೇ ಅನ್ನಭಾಗ್ಯ ಹಾಗೂ ರೈತರ ಸಾಲಮನ್ನಾ ಕಡತಗಳಿಗೆ ಸಹಿ ಹಾಕಿದ್ದ ಸಿದ್ದರಾಮಯ್ಯನವರ ಎದುರು ಈಗ, ಕಾಂಗ್ರೆಸ್ ಕೊಟ್ಟಿರುವ ಗ್ಯಾರಂಟಿಗಳನ್ನು ಜಾರಿಗೆ ತರುವ ದೊಡ್ಡ ಸವಾಲಿದೆ. ಎರಡನೆಯ ಸಲ ಮುಖ್ಯಮಂತ್ರಿಯಾಗುತ್ತಿರುವ ಅವರೆದುರು, ಕರ್ನಾಟಕದ ಎಲ್ಲ ಸಮುದಾಯಗಳ ಹಾಗೂ ಶೇಕಡ 43ರಷ್ಟಿರುವ ಕಾಂಗ್ರೆಸ್ ಬೆಂಬಲಿಗ ಮತದಾರರ ನಿರೀಕ್ಷೆಗಳು ಇನ್ನಷ್ಟು ಹೆಚ್ಚಿವೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಈ ಸಲದ ಸವಾಲುಗಳು ಹಿಂದಿಗಿಂತ ಭಿನ್ನವಾಗಿವೆ. ರಾಜ್ಯದ ಹಣಕಾಸು ಸ್ಥಿತಿ ಕುರಿತ ಶ್ವೇತಪತ್ರ ಹೊರಬರುವ ತನಕ, ಕಾಂಗ್ರೆಸ್ ಕೊಟ್ಟ ಭರವಸೆಗಳ ಜಾರಿಗೆ ಅಗತ್ಯವಾದ ಆರ್ಥಿಕ ಶಕ್ತಿಯ ಅಂದಾಜು ಸಿಕ್ಕಲಾರದು. ಉಚಿತ ವಿದ್ಯುತ್ ಪೂರೈಕೆ, ಉಚಿತ ಮಹಿಳಾ ಪ್ರಯಾಣದಂತಹವುಗಳಿಂದ ಆಯಾ ಸಂಸ್ಥೆಗಳಿಗೆ ಆಗುವ ನಷ್ಟ ಭರಿಸಲು ಆಮ್ ಆದ್ಮಿ ಪಕ್ಷ ಮಾಡಿದ್ದ ಹೋಮ್‌ವರ್ಕನ್ನು ಕಾಂಗ್ರೆಸ್ ಮಾಡಿದೆಯೇ ಎಂಬ ಪ್ರಶ್ನೆಯಿದೆ.

ಕಾಂಗ್ರೆಸ್ಸಿನ 2013ರ ಜನಪ್ರಿಯ ಭರವಸೆಗಳು ಕೈಯಳತೆಯಲ್ಲಿದ್ದವು. ಈ ಸಲ ಅವು ಬಹಳಷ್ಟು ದುಬಾರಿಯಾಗಿವೆ. ಕರ್ನಾಟಕದಲ್ಲಿ ಅತ್ಯಂತ ಹೆಚ್ಚಿನ ಕಾಲ ಹಣಕಾಸು ಖಾತೆ ನಿರ್ವಹಿಸಿರುವ ಸಿದ್ದರಾಮಯ್ಯ ಇದನ್ನೆಲ್ಲ ಸರಿದೂಗಿಸಬಲ್ಲರು ಎನ್ನುವವರಿದ್ದಾರೆ. ಹಿಂದಿನ ಪ್ರಣಾಳಿಕೆಯ 99 ಭಾಗದಷ್ಟನ್ನು ಜಾರಿಗೆ ತಂದಿರುವುದಾಗಿ ಕಾಂಗ್ರೆಸ್ ಮತ್ತೆ ಮತ್ತೆ ಹೇಳಿಕೊಂಡಿರುವುದರಿಂದ, ಈ ಸಲದ ಭರವಸೆಗಳ ಈಡೇರಿಕೆಗಾಗಿ ಜನ ಬಹುಕಾಲ ಕಾಯಲಾರರು. ಮೊನ್ನೆಯ ಚುನಾವಣಾ ಪ್ರಚಾರದಲ್ಲಿ ಜನ ಕೇಳುತ್ತಿದ್ದ ನೇರ ಪ್ರಶ್ನೆಗಳಲ್ಲಿ ಮತದಾರರ ನವಜಾಗೃತಿ ಸ್ಪಷ್ಟವಾಗಿ ಕಾಣುತ್ತಿತ್ತು.

2013ರಂತೆಯೇ ಈ ಸಲವೂ ಭ್ರಷ್ಟಾಚಾರದ ವಿರುದ್ಧ ಹಾಗೂ ಸುಭದ್ರ ಸರ್ಕಾರಕ್ಕಾಗಿ ಜನ ಮತ ಕೊಟ್ಟಿದ್ದಾರೆ. ಆದ್ದರಿಂದ ಉಪಮುಖ್ಯಮಂತ್ರಿ ಹುದ್ದೆ, ಸಚಿವ ಹುದ್ದೆ, ಅಧಿಕಾರ ಹಂಚಿಕೆಯಂತಹ ನಿತ್ಯ ಗೊಣಗಾಟಗಳು ತಕ್ಷಣ ನಿಲ್ಲದಿದ್ದರೆ ಸರ್ಕಾರ ನಗೆಪಾಟಲಿಗೀಡಾಗಲಿದೆ. 2008- 13ರ ನಡುವಣ ಐದು ವರ್ಷಗಳಲ್ಲಿ ಮೂವರು ಮುಖ್ಯಮಂತ್ರಿಗಳ ಪ್ರಹಸನಕ್ಕೆ ಬೇಸತ್ತ ಜನ ಕಾಂಗ್ರೆಸ್ಸಿಗೆ ಬಹುಮತ ಕೊಟ್ಟಿದ್ದರು. 2018ರಿಂದೀಚೆಗೆ ಕೂಡ ಎಚ್‌.ಡಿ.ಕುಮಾರಸ್ವಾಮಿ ಸೇರಿದಂತೆ ಮೂವರು ಮುಖ್ಯಮಂತ್ರಿಗಳನ್ನು ಕಂಡ ಜನ ಮತ್ತೆ ಕಾಂಗ್ರೆಸ್ಸನ್ನು ಬೆಂಬಲಿಸಿದ್ದಾರೆ. ಹಿಂದಿನ ಐದು ವರ್ಷಗಳಿಂದ ಶಾಸಕರ ನಿರ್ಲಜ್ಜ ಮಾರಾಟ, ಮಂತ್ರಿಗಳ ದುರುಳ ವರ್ತನೆಗಳ ಬಗ್ಗೆ ಜನ ಒಳಗೊಳಗೇ ಅಸಹ್ಯಪಡುತ್ತಿದ್ದರು. ಹಿಜಾಬ್, ಗೋರಕ್ಷಣೆ, ಪಠ್ಯಪುಸ್ತಕಗಳ ವಿಕೃತಿಯಂತಹ ವಿವಾದಗಳಿಂದ ನಾಡನ್ನು ಒಡೆಯುತ್ತಿದ್ದ ಆಡಳಿತವನ್ನು ಕಂಡು ಜನ ಸಿಟ್ಟಾಗಿದ್ದರು. ಐದು ವರ್ಷಗಳಲ್ಲಿ ತಲೆಯೆತ್ತಿ ಹೇಳಿಕೊಳ್ಳುವ ಕೆಲಸಗಳನ್ನೇ ಮಾಡದ ನಾಯಕರು ಮತದಾರರೆದುರು ತಲೆತಗ್ಗಿಸಿ ನಿಂತು ಸೋತಿದ್ದಾರೆ. ಕೋಮು ವಿಭಜನೆಯನ್ನು ಕರ್ನಾಟಕ ಮಾನ್ಯ ಮಾಡುವುದಿಲ್ಲವೆಂಬುದು ಮತ್ತೆ ಸಾಬೀತಾಗಿದೆ. ಇದು ಸಾಮರಸ್ಯ, ಸಹಬಾಳ್ವೆಯ ಕರ್ನಾಟಕಕ್ಕಾಗಿ ಹಾಕಲಾದ ಮತ. ಮಕ್ಕಳ ಪಠ್ಯಪುಸ್ತಕಗಳಲ್ಲಿ, ಊರು ಕೇರಿಗಳಲ್ಲಿ, ರಂಗಭೂಮಿಯಲ್ಲಿ ವಿಷ ತುಂಬಲೆತ್ನಿಸಿದ ಸಮಾಜ ಕಂಟಕರ ವಿರುದ್ಧ ಹಾಕಲಾದ ಮತ.

ಇವೆಲ್ಲದರ ವಿರುದ್ಧ ಸಿದ್ದರಾಮಯ್ಯನವರು ಐದು ವರ್ಷ ನಿರಂತರವಾಗಿ ನಿರ್ವಹಿಸಿದ ವಿರೋಧ ಪಕ್ಷದ ನಾಯಕತ್ವದ ಗತ್ತಿನ ಹೊಣೆ, ಸ್ಪಷ್ಟ ನಿಲುವು ಹಾಗೂ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರ ತಂಡದ ಸತತ ಸಂಘಟನೆ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ದಿಕ್ಕು ನೀಡಿದ್ದವು. ಈಚಿನ ದಶಕಗಳಲ್ಲಿ ಕರ್ನಾಟಕದಲ್ಲಿ ಅಷ್ಟಾಗಿ ಕಾಣದ ವಿರೋಧ ಪಕ್ಷದ ನಾಯಕನ ಗಂಭೀರ ಮಾದರಿಯನ್ನು ಸಿದ್ದರಾಮಯ್ಯ ಅವರ ಸದನದ ಒಳ-ಹೊರಗಿನ ಭಾಷಣಗಳು, ಪ್ರತಿಕ್ರಿಯೆಗಳು ಸೃಷ್ಟಿಸಿದ್ದವು. ಸೋತಾಗ ಮಾತ್ರ ಒಟ್ಟಾಗಿ ಕೆಲಸ ಮಾಡಲೆತ್ನಿಸುವ ಕಾಂಗ್ರೆಸ್ಸಿಗರು ವಿರೋಧ ಪಕ್ಷದ ಭಾಷೆಗೆ ಅಷ್ಟಿಷ್ಟು ಒಗ್ಗಿಕೊಳ್ಳತೊಡಗಿದ್ದರು! ಆದರೂ ಕಾಂಗ್ರೆಸ್ ವಕ್ತಾರರು ಹಾಗೂ ಬೆರಳೆಣಿಕೆಯ ನಾಯಕರನ್ನು ಬಿಟ್ಟರೆ ಉಳಿದವರು ವಿರೋಧ ಪಕ್ಷದವರಂತೆ ಮಾತಾಡಲೇ ಇಲ್ಲ. ಸರ್ಕಾರವನ್ನು ಹಣಿಯಲು ಬೇಕಾದ ಅಂಕಿಅಂಶಗಳಾಗಲೀ ತಾತ್ವಿಕ ಸಿದ್ಧತೆಯಾಗಲೀ ಅನೇಕರಿಗಿರಲಿಲ್ಲ. ಆದರೆ ಕಾಂಗ್ರೆಸ್ಸಿಗಿಂತ ಗಟ್ಟಿ ವಿರೋಧ ಪಕ್ಷವಾಗಿ ಸರ್ಕಾರದ ನಡೆಗಳನ್ನು ನೇರವಾಗಿ ಟೀಕಿಸುತ್ತಾ, ಸ್ವಯಂ ಸ್ಫೂರ್ತಿಯಿಂದ ಅಳಿಲುಸೇವೆ ಮಾಡಿದ ನೂರಾರು ಹುಡುಗ, ಹುಡುಗಿಯರಿದ್ದಾರೆ. ಕೆಲವು ಪತ್ರಿಕೆಗಳು, ಸೋಷಿಯಲ್ ಮೀಡಿಯಾದ ದಿಟ್ಟ ವ್ಯಕ್ತಿಗಳು ವಸ್ತುನಿಷ್ಠವಾಗಿ ವಿರೋಧ ಪಕ್ಷದ ಕೆಲಸ ನಿರ್ವಹಿಸಿದ್ದು ಕೂಡ ಕಾಂಗ್ರೆಸ್ಸಿಗೆ ನೆರವಾಗಿದೆ. ಈ ನಡುವೆ, ಐದು ವರ್ಷ ಕಾಣೆಯಾಗಿದ್ದ ಕೆಲವರು ತಾವೀಗ ತುರ್ತಾಗಿ ಉಪಮುಖ್ಯಮಂತ್ರಿ ಆಗಬೇಕೆಂದು ಹೇಳುತ್ತಿರುವುದು ತಮಾಷೆಯಾಗಿದೆ!

ರಾಹುಲ್ ಗಾಂಧಿಯವರ 'ಭಾರತ್ ಜೋಡೊ' ಯಾತ್ರೆ ಜನರನ್ನು ಒಡೆಯುವ ಭಾಷೆಯನ್ನು ಹಿಮ್ಮೆಟ್ಟಿಸಿ,

ಹೃದಯಗಳನ್ನು ಜೋಡಿಸುವ ಭಾಷೆಯನ್ನು ಹಬ್ಬಿಸಿದ್ದನ್ನು ಮರೆಯಲಾಗದು. ಯಾವ ಪಕ್ಷಕ್ಕೂ ಸೇರದ ಜನರನ್ನು ಅದು ಕಾಂಗ್ರೆಸ್ಸಿನೆಡೆಗೆ ತಂದಿದೆ. ಹಿಂದೆ ಕಮ್ಯುನಿಸ್ಟ್, ಸೋಷಲಿಸ್ಟ್ ಪಕ್ಷಗಳನ್ನು ತಾತ್ವಿಕವಾಗಿ ಒಪ್ಪಿ ಅತ್ತ ವಾಲುತ್ತಿದ್ದ ಉದಾರವಾದಿ ಮತದಾರರು ಈಚಿನ ದಶಕಗಳಲ್ಲಿ ಕಾಂಗ್ರೆಸಿನತ್ತ ವಾಲಿದ್ದಾರೆ. ಜಾತ್ಯತೀತ ಧೋರಣೆ, ಸಮುದಾಯ ಬೆಸುಗೆಯ ಭಾಷೆ ಹಾಗೂ ಸಾಮಾಜಿಕ ನ್ಯಾಯವನ್ನು ಬೆಂಬಲಿಸುವ ಈ ವರ್ಗ ಕರ್ನಾಟಕದಲ್ಲಿ ಹಿಂದೊಮ್ಮೆ ಜನತಾಪಕ್ಷ, ಜನತಾದಳದ ಪರವಾಗಿತ್ತು. ಒಂದು ಕಾಲಕ್ಕೆ ಈ ವರ್ಗ ದೇವರಾಜ ಅರಸು ಅವರನ್ನು ಮೆಚ್ಚುತ್ತಿದ್ದರೂ, ಅಂದಿನ ಕಾಂಗ್ರೆಸ್ಸನ್ನು ಒಪ್ಪದಿದ್ದುದರಿಂದ ಆ ಪಕ್ಷಕ್ಕೆ ಮತ ಹಾಕುತ್ತಿರಲಿಲ್ಲ. ಹಿಂದಿನ ಹದಿನೈದು ವರ್ಷಗಳಲ್ಲಿ ಈ ಮತದಾರರ ಒಲವು, ಮತ, ಬೆಂಬಲವನ್ನು ಕಾಂಗ್ರೆಸ್ಸಿನತ್ತ ಒಯ್ದದ್ದು ಸಿದ್ದರಾಮಯ್ಯನವರ ಸಾಮಾಜಿಕ ತಾತ್ವಿಕತೆ, ನಡೆ ನುಡಿ ಹಾಗೂ ಖಚಿತ ಕೋಮುವಾದ ವಿರೋಧ.

ಆದ್ದರಿಂದಲೇ ಕರ್ನಾಟಕದಲ್ಲಿ ಇಷ್ಟು ದೊಡ್ಡ ಮಟ್ಟದಲ್ಲಿ ಕಾಂಗ್ರೆಸ್ ಬಗ್ಗೆ ಹುಟ್ಟಿರುವ ನಿಜವಾದ ಪಾಸಿಟಿವ್ ಬೆಂಬಲವನ್ನು ಯೋಜನೆ, ಕಾರ್ಯಕ್ರಮ, ನಡೆ ನುಡಿಗಳ ಮೂಲಕ ಕಾಯ್ದುಕೊಳ್ಳುವ ಸವಾಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಎದುರಿಗಿದೆ. ಕಾಂಗ್ರೆಸ್ ಗೆದ್ದ ಸುದ್ದಿ ಹಬ್ಬಿದ ತಕ್ಷಣ ರಾಜ್ಯದ ಸಾರ್ವಜನಿಕ ವಲಯದಲ್ಲಿ, ಹಲವು ಜಾತಿ, ವರ್ಗಗಳಲ್ಲಿ, ಅಲ್ಪಸಂಖ್ಯಾತರಲ್ಲಿ ನೆಮ್ಮದಿ ಉಕ್ಕಿದ್ದು ಎಲ್ಲೆಡೆ ಎದ್ದು ಕಾಣತೊಡಗಿದೆ. ಬರೆಯುವ ಕೈಗಳು, ಮುಕ್ತವಾಗಿ ಮಾತಾಡುವ ದನಿಗಳು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸತೊಡಗಿವೆ. ಆದರೆ ಆ ನೆಮ್ಮದಿ ಹಾಳಾಗುವಂತೆ ದೆಹಲಿ ಗೊಂದಲ ಶುರುವಾಯಿತು. ಸದ್ಯ! ಈಚೆಗೆ ಮಹಾರಾಷ್ಟ್ರದ ಶಿಂದೆ ಬಣದ ಶಾಸಕರ ಅನರ್ಹತೆ ಹಾಗೂ ಉದ್ಧವ್ ಠಾಕ್ರೆ ನೇತೃತ್ವದ ಸರ್ಕಾರದ ಪತನ ಕುರಿತು ಸುಪ್ರೀಂ ಕೋರ್ಟ್ ಕೊಟ್ಟ ಖಡಕ್ ತೀರ್ಪು ಶಾಸಕರ ಮಾರಾಟಕ್ಕೆ ತಡೆಯೊಡ್ಡಿದ್ದರಿಂದ ಶಾಸಕರ ಹರಾಜಿನ ಆತಂಕ ಕಾಂಗ್ರೆಸ್ಸಿಗೆ ಎದುರಾಗಲಿಲ್ಲ.

ಅಂದರೆ, ಹೆಚ್ಚಿನ ಜನಬೆಂಬಲ ಹಾಗೂ ನ್ಯಾಯಾಂಗದ ತೀರ್ಪಿನ ರಕ್ಷಣಾ ಕವಚಗಳ ನಿಜವಾದ ಸುರಕ್ಷಿತ ವಾತಾವರಣದಲ್ಲಿ ಸಿದ್ದರಾಮಯ್ಯನವರ ಹೊಸ ಸರ್ಕಾರ ರಚನೆಯಾಗಿದೆ. ರಾಜ್ಯಗಳ ನಾಡಿಮಿಡಿತವೇ ಗೊತ್ತಿರದೆ, ಸೂತ್ರಧಾರಿಗಳಂತೆ ಆಡಲು ಹೋಗಿ ಪಕ್ಷಗಳನ್ನು ಹಾಳುಗೆಡಹುವ ಹೈಕಮಾಂಡ್ ಜನ ತಮ್ಮ ಮಿತಿಗಳನ್ನು ಕೊನೆಗೂ ಅರಿತಂತಿದೆ. ರಾಜ್ಯಗಳ ರಾಜಕೀಯ ನಿರ್ವಹಣೆಯನ್ನು ಆಯಾ ರಾಜ್ಯ ನಾಯಕರ ಅನುಭವಗಳ ಬೆಳಕಿನಲ್ಲೇ ನಡೆಸುವುದು ಸೂಕ್ತವೆಂಬ ಜ್ಞಾನ ಕೊನೆಗೂ ದಿಲ್ಲಿಯವರಿಗೆ ಬಂದಂತಿದೆ.

ಕರ್ನಾಟಕದ ಫಲಿತಾಂಶ ಲೋಕಸಭಾ ಚುನಾವಣೆಯ ದಿಕ್ಸೂಚಿ ಎನ್ನುವವರಿದ್ದಾರೆ. ಆದ್ದರಿಂದಲೇ ನಿರೀಕ್ಷೆಗಳು ಹೆಚ್ಚಿವೆ. ಸವಾಲುಗಳೂ ದೊಡ್ಡದಾಗಿವೆ. ಹೊಸ ಸರ್ಕಾರ ಬಂದಿರುವ ನೆಮ್ಮದಿ ಹಾಗೂ ಅದು ಜನರಲ್ಲಿ ಹುಟ್ಟಿಸಿರುವ ನಿರೀಕ್ಷೆಯನ್ನು ಕಾಂಗ್ರೆಸ್ಸಿಗರಾಗಲೀ ಕಾಂಗ್ರೆಸ್ಸನ್ನು ಬೆಂಬಲಿಸುವ ವಾಚಾಳಿಗಳಾಗಲೀ ಹಾಳು ಮಾಡದಿರಲಿ. ಸರ್ಕಾರ ಹಾದಿ ತಪ್ಪಿದಾಗಲೆಲ್ಲ ತಿಳಿ ಹೇಳುವ, ಸಕಾರಣವಾಗಿ ಟೀಕಿಸುವ ವರ್ಗ ಸದಾ ಜಾಗೃತವಾಗಿರಲಿ. ತಮ್ಮ ನಾಯಕರ, ಕಾರ್ಯಕರ್ತರ ಪ್ರತಿಯೊಂದು ಠೇಂಕಾರದ ನಡೆಯೂ ಲೋಕಸಭಾ ಚುನಾವಣೆಯಲ್ಲಿ ಹೊಡೆತ ಕೊಡುತ್ತದೆ ಎಂಬ ಪ್ರಜ್ಞೆ ಸರ್ಕಾರ ನಡೆಸುವವರಿಗೂ ಇರಲಿ.

ಚುರುಮುರಿ

ಮತದಾರನ ಮೂಗುದಾರ

● ನಾರಾಯಣ ರಾಯಚೂರ್

'ಇವನಾರವ, ಇವನಾರವ ಇವನಾರವನೆಂದೆನಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ...'

'ಏನ್ರೀ, ಇವತ್ತು ವಚನ ವಾಚನ ನಡೆಸಿದ್ದೀರಿ? ಇನ್ನೂ ನ್ಯೂಸ್ ಪೇಪರ್ ಬಂದಿಲ್ಲವೋ?' ಕೈಹಿಡಿದವಳು ಕಾಲೆಳೆದಳು.

'ಇವತ್ತು 'ಪ್ರಮಾಣವಚನ' ಮುಹೂರ್ತದ ದಿನ ಕಣೇ. ಕಂಠೀರವ ಕ್ರೀಡಾಂಗಣ ಕಿಕ್ಕಿರಿದು ತುಂಬಲಿದೆ. ನಾಲ್ಕು ದಿವಸ ನಡೆದ ಕುಸ್ತಿ, ಹಗ್ಗ ಜಗ್ಗಾಟ, ಡಿಶುಂ ಡಿಶುಂ ಎಲ್ಲ ಮುಗಿದು, ಕಗ್ಗಂಟು, ಕಗ್ಗಂಟು ಅಂತ ಟೀವಿಲಿ ತೋರಿಸ್ತಾ ಇದ್ದರಲ್ಲ, ಆ ಕಗ್ಗಂಟೀಗ ಕರಗಿ ಕರದಂಟು ಆಗಿದೆ'.

'ಇನ್ನೇನು ಉಚಿತ ಕರೆಂಟು ಹರಿಯೋದು ಬಾಕಿ!'

'ಅದೂ ಆಗೋದು ಗ್ಯಾರಂಟಿ, ಪ್ರಮಾಣ ವಚನ ಮುಗೀತಿದ್ದಂಗೇ ಕ್ಯಾಬಿನೆಟ್ ಮೀಟಿಂಗ್ ಮಾಡಿ ಆದೇಶ ಹೊರಡಿಸಿಯೇ ಬಿಡಬಹುದು'.

'ಅಂತೂ ಮತದಾರ ಎಷ್ಟು 'ಪವರ್'ಫುಲ್ ಅಂತ ತೋರಿಸಿಯೇ ಬಿಟ್ಟ ನೋಡಿ. ಅವನು ನೋಡ್ತಾನೆ, ಅಧಿಕಾರ ಚೆನ್ನಾಗಿ ನಡೆಸಿದರೆ ಇನ್ನೊಂದು ಅವಕಾಶ, ಇಲ್ಲಾಂದ್ರೆ ಇನ್ನೊಬ್ಬರಿಗೆ ಅವಕಾಶ, ಅಂತೂ ಚೇಂಜ್ ಮಾಡ್ತಾನೇ ಇರ್ತಾನೆ, ಹೆಂಚಿನ ಮೇಲಿನ ದೋಸೆ ಮಗುಚಿ ಹಾಕಿದ ಹಾಗೆ'.

'ಈಗ ಜ್ಞಾಪಕ ಬಂತು, ಪಕ್ಷದ ಸ್ಟಾರ್ ಪ್ರಚಾರಕರೊಬ್ಬರು ಮೈಸೂರಿನ ಹೋಟೆಲ್ಲಿಗೆ ಹೋಗಿ ದೋಸೆ ಮಗುಚಿ ಹಾಕೋ ದೃಶ್ಯ ಟೀವಿಲಿ, ಸಾಮಾಜಿಕ ಜಾಲತಾಣದಲ್ಲಿ ಬಂದಿತ್ತಲ್ಲ'.

'ಓಹ್, ಹಾಗೋ ಇದು?!'

'ಲಕ್ಷಾಂತರ ಜನ ಸೇರಿಬಿಟ್ಟರು ಅಂತ ಮೈಮರೆಯೋಹಾಗಿಲ್ಲ, ಮತದಾರನ ಮನಸ್ಸು ಗೆಲ್ಲಬೇಕು. ಅವನ ಅಂತರಂಗ ಅರಿಯೋದೇ ಕಷ್ಟ. ಅವನ ಬೆರಳ ತುದಿಗೆ ಇರೋ ತಾಕತ್ತು, ದಮ್ಮು ಫಲಿತಾಂಶ ಬಂದಾಗ ಕಣ್ಣಿಗೇ ರಾಚುತ್ತೆ. ಮತದಾರ ಅಂದ್ರೆ ಅವನ ಬಳಿ ಇರೋದು ಸಾಮಾನ್ಯ ದಾರ ಅಲ್ಲ, ಅದು ಆಳುವವರನ್ನ ನಿಯಂತ್ರಿಸೋ ಮೂಗುದಾರ. ಅದು ಎಳೆದಲ್ಲಿಗೆ ಹೋಗಬೇಕು, ಹೇಳಿದ್ದು ಕೇಳಬೇಕು. ಎಂಥ ಶಕ್ತಿ ಅಲ್ಲವಾ ಪ್ರಜಾಪ್ರಭುತ್ವದ್ದು?!'

'ಹೊಸಬರೂ ಅಷ್ಟೇ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು. ಇವತ್ತಿನ ಮತದಾರ, ಅಮೃತ ಮಹೋತ್ಸವ ಆಚರಿಸ್ಕೊಂಡಿರೋ ಪ್ರಬುದ್ಧ. ಅವನು ಒತ್ತುವ ಬಟನ್, ಆನ್ ಆ್ಯಂಡ್ ಆಫ್ ಎರಡನ್ನೂ ಮಾಡಬಲ್ಲದು!'

ಚರ್ಚೆ

ಉಡುಗೊರೆ: ಅನಗತ್ಯ ಆರ್ಥಿಕ ಚಟುವಟಿಕೆ

ಆರ್ಥಿಕವಾಗಿ ಚೆನ್ನಾಗಿದ್ದು, ಆಡಂಬರದಿಂದ ಸಮಾರಂಭಗಳನ್ನು ಮಾಡುವವರಿಗೂ ಉಡುಗೊರೆಗಳನ್ನು ನೀಡಬೇಕೆಂಬ ಅಲಿಖಿತ ನಿಯಮವು ಸರ್ವಥಾ ವರ್ಜಿಸಬೇಕಾದದ್ದೆ

● ಪು.ಸೂ.ಲಕ್ಷ್ಮೀನಾರಾಯಣ ರಾವ್

'ಉಡುಗೊರೆ ಮತ್ತು ಮೌಲ್ಯ ನಿರ್ಣಯ' ಎಂಬ ರಾಜಕುಮಾರ ಕುಲಕರ್ಣಿ ಅವರ ಲೇಖನ (ಸಂಗತ ಮೇ 16) ಸಮಯೋಚಿತವಾಗಿದೆ. 'ಅತಿಥಿ ದೇವೋ ಭವ, ಅಭ್ಯಾಗತೊ ಸ್ವಯಂ ವಿಷ್ಣು' ಎನ್ನುವ ಸಂಸ್ಕೃತಿ ನಮ್ಮದು ಎನ್ನುತ್ತೇವೆ. ಇತ್ತೀಚೆಗಂತೂ ಭಾರತೀಯ ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸಬೇಕು ಎನ್ನುವವರ ಸಂಖ್ಯೆ ಹೆಚ್ಚಾಗಿದೆ. ಆದರೆ ಅವರಲ್ಲಿ ಮೌಢ್ಯಾಚರಣೆಗಳನ್ನೇ 'ನಮ್ಮ ಸಂಸ್ಕೃತಿ' ಎಂದು ಭಾವಿಸಿಕೊಂಡಿರುವವರೇ ಹೆಚ್ಚು. ಅದಕ್ಕೆ ಈ ಉಡುಗೊರೆ, ಆಹೇರಿ ಅಥವಾ ಮುಯ್ಯಿ ಓದಿಸುವುದು ಎಂಬ ಪದ್ಧತಿ ಒಂದು ಒಳ್ಳೆಯ ಉದಾಹರಣೆಯಾಗಿದೆ.

ಆರ್ಥಿಕವಾಗಿ ಸುಭದ್ರವಾಗಿ ಇಲ್ಲದವರು ಸಾಲ ಸೋಲ ಮಾಡಿಕೊಂಡು ಮದುವೆ, ಗೃಹಪ್ರವೇಶದಂತಹ ಸಮಾರಂಭಗಳನ್ನು ಮಾಡಿದಾಗ, ಅವರ ಸಂಕಷ್ಟವನ್ನು ಸಮಾಜವು ಸ್ವಲ್ಪಮಟ್ಟಿಗೆ ಹಂಚಿಕೊಳ್ಳುವುದರ ಭಾಗವಾಗಿ ಉಡುಗೊರೆಗಳನ್ನು ನೀಡುವಂತಹ ಪದ್ಧತಿ ಮೊದಲಿನಿಂದ ಬಂದಿರುವುದು ಸ್ವಾಗತಾರ್ಹವಾದುದೇ. ಆದರೆ ಆರ್ಥಿಕವಾಗಿ ಚೆನ್ನಾಗಿದ್ದು, ಆಡಂಬರದಿಂದ ಸಮಾರಂಭಗಳನ್ನು ಮಾಡುವವರಿಗೂ ಉಡುಗೊರೆಗಳನ್ನು ನೀಡಬೇಕೆಂಬ ಅಲಿಖಿತ ನಿಯಮವು ಸರ್ವಥಾ ವರ್ಜಿಸಬೇಕಾದದ್ದೆ. ಆಹ್ವಾನವಿಲ್ಲದೆ ಬರುವವ (ಅತಿಥಿ) ದೇವರಾದರೆ, ಆಹ್ವಾನಿತನಾಗಿ ಬರುವವ (ಅಭ್ಯಾಗತ) ಸ್ವತಃ ವಿಷ್ಣು ಎಂಬುದು ಮೇಲಿನ ಸಂಸ್ಕೃತದ ಮಾತಿನ ಅರ್ಥ.

ಈ ಅರ್ಥದಲ್ಲಿ, ಆಹ್ವಾನಿಸಿದವರು ಆಹ್ವಾನಿತರನ್ನು ಪ್ರೀತಿ, ಗೌರವಗಳಿಂದ ಕಾಣಬೇಕು. ತನ್ನ ಮೇಲೆ ಅಭಿಮಾನವಿಟ್ಟು ಬಂದಿದ್ದಾರಲ್ಲ ಎಂದು ಸಂತಸಪಡಬೇಕು. ಅದು ಬಿಟ್ಟು, ಅವರು ಉಡುಗೊರೆ ನೀಡಿದರು ಅಥವಾ ನೀಡಲಿಲ್ಲ ಎಂಬುದಾಗಿ ಯೋಚಿಸಲೇಬಾರದು. ತಮ್ಮ ಅಮೂಲ್ಯ ಸಮಯವನ್ನು ನಮಗಾಗಿ ಮೀಸಲಿಟ್ಟು ಎಲ್ಲೆಲ್ಲಿಂದಲೋ ಕಷ್ಟಪಟ್ಟುಕೊಂಡು ಬಂದಿರುತ್ತಾರೆ ಎಂಬುದನ್ನು ಅರಿತು, ಹೃತ್ಪೂರ್ವಕವಾಗಿ ಸ್ವಾಗತಿಸಿ ಸತ್ಕರಿಸಬೇಕು. ಕಾಣಿಕೆ, ಉಡುಗೊರೆಗಳನ್ನು ನಿರೀಕ್ಷಿಸಲೇಬಾರದು. ಆಹ್ವಾನ ಪತ್ರಿಕೆಗಳಲ್ಲಿ ಉಡುಗೊರೆಗಳನ್ನು ತರಬೇಡಿರೆಂಬ ಮನವಿಯನ್ನು ಮಾಡಿಕೊಳ್ಳುವುದು ಇನ್ನೂ ಉತ್ತಮ. ನಮ್ಮ ಮೇಲಿನ ವಿಶ್ವಾಸದಿಂದ ಬರುವವರು ಕೈಬೀಸಿಕೊಂಡು ಬರಲಿ, ಉಡುಗೊರೆಗಾಗಿ ಅಲೆದಾಡುವುದು ಬೇಡ ಎಂಬ ಭಾವನೆ ಇರಬೇಕು.

ದೊಡ್ಡ ಸರ್ಕಾರಿ ಅಧಿಕಾರಿಯೊಬ್ಬರ ಮಗಳ ಮದುವೆಯಲ್ಲಿ, ಬಂದವರು ತಂದಿದ್ದ ಹೂಗುಚ್ಛಗಳನ್ನು ಸುಂದರವಾಗಿ ಜೋಡಿಸಿಡಲಾಗಿತ್ತು. ಘಮಘಮಿಸುತ್ತಿದ್ದ ಆ ರಾಶಿಯನ್ನು ತೆಗೆದುಕೊಂಡು ಹೋಗಲು ಮಾರನೆಯ ದಿನ ಕಾರ್ಪೊರೇಷನ್ ಕಸದ ಲಾರಿ ಬಂದಿತ್ತು. ಈ ನಾಗರಿಕತೆಯನ್ನು ಏನೆಂದು ಪ್ರಶಂಸಿಸೋಣ?! ಆಡಂಬರದ ಕಾರ್ಯಕ್ರಮಗಳಿಗೆ ಹೋದಾಗ ಕೈ ಕುಲುಕಿ ಶುಭಾಶಯ ಹೇಳಿ ಬಂದರೆ ಸಾಕು. ಈ ಬಗ್ಗೆ ಯಾರಾದರೂ ಏನಾದರೂ ಅಂದುಕೊಂಡರೂ ತಲೆಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಸರ್ ಹೆನ್ರಿ ವಾಟನ್ ಎಂಬ ಕವಿ ತನ್ನ 'ಸುಖ ಜೀವನ' (ಇಂಗ್ಲಿಷ್ ಗೀತಗಳು- ಅನುವಾದ– ಬಿಎಂಶ್ರೀ) ಎಂಬ ಕವನದಲ್ಲಿ, 'ಏನು ಸುಖಿಯೋ ತಾನು ಹುಟ್ಟಿನಲಿ, ಕಲಿಕೆಯಲಿ, ಇನ್ನೊಬ್ಬನಿಚ್ಛೆಯನು ದುಡಿಯದಿರುವವನು', 'ಎಂತು ಧಣಿಯೊಲವೆಂದು, ನೆರೆಯ ಮೆಚ್ಚೆಂತೆಂದು, ಮಿಡುಮಿಡುಕಿ ಲೋಕವನು ಕಟ್ಟಿಕೊಳದವನು', 'ತನ್ನಾತ್ಮಸಾಕ್ಷಿಯೇ ಕೋಟೆಯಾದವನು' ಎಂದಿರುವುದು ಪ್ರಸ್ತುತ ಸ್ಮರಣಾರ್ಹ. ಅಂದರೆ, ಬೇರೆಯವರು ಮೆಚ್ಚಿಕೊಳ್ಳಬೇಕೆಂದು ಬಯಸದೆ, ಆತ್ಮಸಾಕ್ಷಿಗೆ ಅನುಗುಣವಾಗಿ ಬದುಕುವವನು ನಿಜವಾದ ಸುಖಿ. ಅಂತಹವನು ತನ್ನ ಮೇಲಿನ ಅಧಿಕಾರಿಯನ್ನು, ನೆರೆಯವರನ್ನು, ನೆಂಟರನ್ನು ಹೇಗೆ ಮೆಚ್ಚಿಸಬೇಕೆಂದು ಮಿಡುಕಾಡುವುದಿಲ್ಲ ಎಂದರ್ಥ. ಹೀಗಾಗಿ, ಎಲ್ಲಿ ಸಹಾಯಹಸ್ತದ ಅಗತ್ಯವಿದೆಯೋ ಅಲ್ಲಿ ಮಾತ್ರ ಧಾರಾಳವಾಗಿ ಉಡುಗೊರೆ ಸಲ್ಲಿಸುವುದು ಸೂಕ್ತ.

ಕನ್ನಡದ ಹಿರಿಯ ನಾಟಕ ನಿರ್ದೇಶಕರಾದ ದಿ. ಗೋಪಾಲಕೃಷ್ಣನಾಯರಿ ಅವರ ಜೊತೆ ಒಮ್ಮೆ ಮದುವೆಯೊಂದಕ್ಕೆ ಹೋಗಿದ್ದಾಗ, ನಾನು ಉಡುಗೊರೆಯ ರೂಪದಲ್ಲಿ ಹಣ ಕೊಡಲು ಪರ್ಸ್ ತೆಗೆದೆ. ಅದನ್ನು ಗಮನಿಸಿದ ನಾಯರಿ ಅವರು, 'ಬೇಡ, ಅದು ನಾವು ಅವರಿಗೆ ಮಾಡುವ ಅವಮಾನ ಅಲ್ಲವೇ?' ಅಂದರು. ಅಂದಿನಿಂದ ನಾನೂ ಉಡುಗೊರೆ ಕೊಡುವುದನ್ನು ನಿಲ್ಲಿಸಿದೆ. ಮೊದಮೊದಲು ಅಳುಕು ಆಗುತ್ತಿತ್ತು. ಈಗ ಹಾಗೇನೂ ಅನಿಸುವುದಿಲ್ಲ.

ಇತ್ತೀಚೆಗೆ ಮದುವೆ, ಮುಂಜಿಗಳಿಗೆ ಕರೆಯುವವರೇ ಆಹ್ವಾನ ಪತ್ರಿಕೆಯೊಂದಿಗೆ ಸೀರೆ, ಪಂಚೆಯನ್ನೋ ಅಥವಾ ಉಡುಗೊರೆಯ ವಸ್ತುಗಳನ್ನೋ ಕೊಟ್ಟು 'ಖಂಡಿತ ಬರಬೇಕು' ಎಂದು ಆಹ್ವಾನಿಸುತ್ತಾರೆ. ಇನ್ನು ಕೆಲವರು ಕಾರ್ಯಕ್ರಮ ಮುಗಿಸಿಕೊಂಡು ಹೋಗುವಾಗ, ತಾಂಬೂಲ ಅಂತ ಹೇಳಿ ಆ ರೀತಿಯಲ್ಲಿ ಏನೇನೋ ಕೊಡುತ್ತಾರೆ. ನಿರಾಕರಿಸಿದರೆ, 'ತಾಂಬೂಲವನ್ನು ಬೇಡ ಅನ್ನಬಾರದು, ಅದು ಶ್ರೇಯಸ್ಕರವಲ್ಲ' ಎಂದು ಒತ್ತಾಯಿಸುತ್ತಾರೆ. ಹೀಗೆ ಎರಡೂ ಕಡೆಯವರು ಕೊಟ್ಟು ತೆಗೆದುಕೊಳ್ಳುವ ಈ ಪದ್ಧತಿ ವಿಚಿತ್ರವಾಗಿ ಕಾಣಿಸುತ್ತದೆ. ಎರಡೂ ಕಡೆಯವರು ಆರ್ಥಿಕವಾಗಿ ಬಲಿಷ್ಠರಾಗಿದ್ದರೂ ಈ ಕೊಡುಕೊಳ್ಳುವಿಕೆ ಸಾಗುತ್ತಲೇ ಇರುವುದನ್ನು ಯಾವ ರೀತಿಯಲ್ಲಿ ಅರ್ಥೈಸಬೇಕೊ ತಿಳಿಯದಾಗಿದೆ.

ಈ ಅನಗತ್ಯ ಆರ್ಥಿಕ ಚಟುವಟಿಕೆಯು ದೇಶದ ಆರ್ಥಿಕತೆಯ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದನ್ನು ಅರ್ಥಶಾಸ್ತ್ರಜ್ಞರು ತಿಳಿಸಬೇಕು. ಇಂತಹ ವಿನಿಮಯ ಅಥವಾ ಹಂಚಿಕೆಯನ್ನು ಎಲ್ಲರೂ ಅರಿತುಕೊಂಡು ನಿಲ್ಲಿಸಿ, ಸದ್ಬಳಕೆ, ಸದ್ವಿನಿಮಯ ಮಾಡುವುದೆಂತು ಎಂದು ಯೋಚಿಸುವುದು ಅರ್ಥಪೂರ್ಣ ಬದಲಾವಣೆಗೆ ಕಾರಣವಾಗಬಹುದು.

ವಾಚಕರ ವಾಣಿ

ಚಿತ್ರನಟರಿಗಿಲ್ಲ ಪ್ರತ್ಯೇಕ ಸಂಚಾರ ನಿಯಮ

ಮುಂಬೈನಲ್ಲಿ ಹೆಲ್ಮೆಟ್ ಧರಿಸದೇ ಪ್ರಯಾಣಿಸಿದ ಚಿತ್ರನಟರಾದ ಅಮಿತಾಭ್ ಬಚ್ಚನ್ ಮತ್ತು ಅನುಷ್ಕಾ ಶರ್ಮಾ ಅವರಿಗೆ ದಂಡ ವಿಧಿಸದೆ, ಅವರನ್ನು ಕರೆದೊಯ್ದ ಇಬ್ಬರು ದ್ವಿಚಕ್ರ ವಾಹನ ಸವಾರರಿಗೆ ಸಂಚಾರ ಪೊಲೀಸರು ದಂಡ ವಿಧಿಸಿದ್ದು ಎಷ್ಟು ಸರಿ ಎಂದು ಪೂಜಾ ಎಸ್. ಅವರು ಕೇಳಿದ್ದಾರೆ (ವಾ.ವಾ., ಮೇ 19). ನನ್ನ ಪ್ರಕಾರ, ಪೊಲೀಸರ ಈ ಕ್ರಮ ಸಂಪೂರ್ಣ ಸರಿಯಿದೆ. ಅವರು ತಮ್ಮ ಕರ್ತವ್ಯವನ್ನು ಪಾಲಿಸಿದ್ದಾರೆ ಅಷ್ಟೆ. ಚಿತ್ರನಟರನ್ನು ವಾಹನದ ಹಿಂದೆ ಕೂರಿಸಿಕೊಂಡು ಹೋಗುವವರಿಗೆ ಪ್ರತ್ಯೇಕ ಸಂಚಾರ ನಿಯಮಗಳು ಇರುವುದಿಲ್ಲವೆಂಬುದು ಆ ಇಬ್ಬರು ವಾಹನ ಮಾಲೀಕರಿಗೆ ತಿಳಿದಿರಬೇಕಿತ್ತು. 'ಪ್ರಖ್ಯಾತ ವ್ಯಕ್ತಿಗಳು ಹಿಂದೆ ಕೂತಿರಬೇಕಾದರೆ ನನ್ನನ್ಯಾರು ತಡೆದಾರು' ಎಂಬ ಅವರ ಅಸಡ್ಡೆಯ ಧೋರಣೆಯೇ ಇದಕ್ಕೆಲ್ಲಾ ಕಾರಣ. ಅವರಿಬ್ಬರೂ ಈ ಇಬ್ಬರು ಗಣ್ಯರಿಗೆ 'ನಾನು ನಿಮಗೆ ಸಹಾಯ ಮಾಡುತ್ತಿದ್ದೇನೆ. ಪೊಲೀಸರಿಂದ ಏನಾದರೂ ಹೆಚ್ಚುಕಮ್ಮಿಯಾದರೆ ನೀವೇ ನೋಡಿಕೊಳ್ಳಬೇಕು' ಎಂದು ಮೊದಲೇ ಹೇಳಿ ನಂತರ ಕರೆದೊಯ್ಯಬಹುದಿತ್ತು. ಆ ದಂಡದ ಮೊತ್ತವನ್ನು, ಈಗ ಕಲಿತ ಪಾಠಕ್ಕೆ ತೆತ್ತ ಬೆಲೆಯೆಂದು ತಿಳಿದು, ಇನ್ನು ಮುಂದಾದರೂ ಎಚ್ಚರಿಕೆಯಿಂದ ಇರುವುದು ಲೇಸು. ಇಷ್ಟೊತ್ತಿಗಾಗಲೇ ಆ ಇಬ್ಬರೂ ಈ ತೀರ್ಮಾನ ತೆಗೆದುಕೊಂಡಿರಬಹುದು. ಉಳಿದಂತೆ ಈ ಪ್ರಕರಣವು ಬೇರೆಯವರಿಗೆಲ್ಲಾ ಒಂದು ರೀತಿಯ ಎಚ್ಚರಿಕೆಯ ಪಾಠದಂತೆಯೇ ಸರಿ.

ರವಿಕಿರಣ್ ಶೇಖರ್, ಬೆಂಗಳೂರು

ಸಚಿವರ ಆಯ್ಕೆಗೆ ಇರಲಿ ಮಾನದಂಡ

ರಾಜ್ಯದಲ್ಲಿ ಈಗ ಕಾಂಗ್ರೆಸ್ ನೇತೃತ್ವದ ಸರ್ಕಾರದ ಸಚಿವ ಸಂಪುಟದ ಆಯ್ಕೆ ಕಸರತ್ತು ನಡೆಯುತ್ತಿದೆ. ಸಚಿವರ ಆಯ್ಕೆ ಪ್ರಕ್ರಿಯೆಯಲ್ಲಿ ಮುಖ್ಯಮಂತ್ರಿ ಮತ್ತು ಹೈಕಮಾಂಡ್ ಕೆಲವು ಮಾನದಂಡಗಳನ್ನು ಇರಿಸಿಕೊಳ್ಳಬೇಕು. ಜಾತಿವಾರು, ಜಿಲ್ಲಾವಾರು ಪ್ರಾತಿನಿಧ್ಯ ಸಹಜವಾಗಿಯೇ ನಡೆಯುತ್ತದೆ. ಆದರೆ ಅನುಭವವನ್ನೇ ಆದ್ಯತೆ ಮಾಡಿಕೊಂಡು, ಈಗಾಗಲೇ ಸಚಿವ ಸ್ಥಾನ ನಿಭಾಯಿಸಿ ಯಶಸ್ವಿಯಾಗದವರನ್ನು ಪರಿಗಣಿಸಬಾರದು. ಪಕ್ಷನಿಷ್ಠೆ ಹೊಂದಿರುವವರು ಮತ್ತು ಜನಾನುರಾಗಿಗಳಿಗೆ ಆದ್ಯತೆ ನೀಡಬೇಕು.

ಸಚಿವರಾಗಿ ತಮ್ಮ ಆಡಳಿತಾವಧಿಯಲ್ಲಿ ಇಡೀ ರಾಜ್ಯವನ್ನು ಒಮ್ಮೆಯಾದರೂ ಪರ್ಯಟನೆ ಮಾಡುವಂತಹ ಸಾಮರ್ಥ್ಯ ಇರುವವರನ್ನು ಗುರುತಿಸಬೇಕು. ತಮ್ಮ ಜಿಲ್ಲೆ ಮತ್ತು ಬೆಂಗಳೂರಿಗೆ ಸೀಮಿತವಾಗುವವರನ್ನು ಮೊದಲೇ ನಿಯಂತ್ರಿಸಬೇಕು. ಸಚಿವರನ್ನು ವಿವಿಧ ಕಾರಣಗಳಿಗಾಗಿ ಇಡೀ ರಾಜ್ಯದ ಜನತೆ ಭೇಟಿ ಮಾಡುವ ಸಾಧ್ಯತೆಗಳಿರುತ್ತವೆ. ಆದರೆ ಅವರು ಜಿಲ್ಲಾ ಕೇಂದ್ರ ಮತ್ತು ತಮ್ಮ ನಿಗದಿತ ಕಚೇರಿಗಳಲ್ಲಿ ಸಿಗದೇ ಸಾರ್ವಜನಿಕರು ಪರಿತಪಿಸುವಂತೆ ಆಗಬಾರದು. ಈ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಏನಾಗುತ್ತದೆ ಎಂಬುದಕ್ಕೆ, ಹಿಂದಿನ ಸರ್ಕಾರದ ಬಹಳಷ್ಟು ಸಚಿವರು ಹೀನಾಯವಾಗಿ ಸೋಲನುಭವಿಸಿರುವುದೇ ಉತ್ತಮ ನಿದರ್ಶನ.

ತಿಮ್ಮೇಶ ಮುಸ್ಟೂರು, ಜಗಳೂರು

ಸೋತು ಸುಣ್ಣವಾದವರ ಹತಾಶ ನುಡಿ

'ಇನ್ನು ಎರಡು ಮೂರು ತಿಂಗಳಲ್ಲಿ ರಾಜಕೀಯ ಬೆಳವಣಿಗೆ ನಡೆಯಲಿದೆ. ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಆದಂತೆ ಈ ಸರ್ಕಾರದಿಂದ ಲೂಟಿ ಆಗಲಿದೆ' ಎಂದಿದ್ದಾರೆ ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ (ಪ್ರ.ವಾ., ಮೇ 19). ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಜೆಡಿಎಸ್ ಪಕ್ಷದ ಹತಾಶ ನುಡಿ ಇದು. ಜೆಡಿಎಸ್ ಅನ್ನು ಸ್ವಂತ ಕುಟುಂಬದ ಪಕ್ಷವೆಂಬಂತೆ ಕಾಪಾಡುತ್ತಿರುವ ಕುಮಾರಸ್ವಾಮಿ, ಮೊದಲು ಪಕ್ಷವನ್ನು ಸಾರ್ವಜನಿಕಗೊಳಿಸಲಿ, ನಂತರ ಸರ್ಕಾರದ ಲೂಟಿಯ ವಿರುದ್ಧ ಹೋರಾಡಲಿ. ಸ್ವಚ್ಛ ಆಡಳಿತ ಬಯಸುವ ಮತದಾರರು ಆಗ ಜೆಡಿಎಸ್‌ನ ಕೈ ಹಿಡಿಯುವುದರಲ್ಲಿ ಅನುಮಾನವೇ ಇಲ್ಲ. ಆದರೆ ಅದು ಬಿಟ್ಟು ಸರ್ಕಾರದ ಅಸ್ಥಿರತೆಯ ಬಗ್ಗೆ ಭವಿಷ್ಯ ಹೇಳುವುದು ಸಮಂಜಸವಲ್ಲ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅಭಿವೃದ್ಧಿ ಕಾರ್ಯ: ಜನರ ಮೇಲಿದೆ ಜವಾಬ್ದಾರಿ

ಕಾಂಗ್ರೆಸ್ ಪಕ್ಷವು ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವ ಗ್ಯಾರಂಟಿ ಕೊಡುಗೆಗಳನ್ನಷ್ಟೇ ಪೂರೈಸಲು ಸರ್ಕಾರದ ಮೇಲೆ ಒತ್ತಡ ಹಾಕಿ, ಇತರ ಅಭಿವೃದ್ಧಿ ಕಾರ್ಯಗಳ ಬಗ್ಗೆ ನಿರ್ಲಕ್ಷ್ಯ ಧೋರಣೆ ತಳೆಯುವಂತೆ ಮಾಡದಿರುವ ಜವಾಬ್ದಾರಿ ಜನರ ಮೇಲಿದೆ. ಗ್ಯಾರಂಟಿ ಕೊಡುಗೆಗಳ ಘೋಷಣೆಯ ಪ್ರಭಾವದಿಂದ ಮಾತ್ರವೇ ಕಾಂಗ್ರೆಸ್ ಪಕ್ಷವು ಅಧಿಕಾರ ಗಳಿಸಿಲ್ಲ ಅಲ್ಲವೇ? ಬದಲಾಗಿ, ಇತರ ಹತ್ತು ಹಲವಾರು ಆಶಯಗಳನ್ನು ನಿರೀಕ್ಷಿಸಿ ಜನರು ಮತ ಚಲಾಯಿಸಿದ್ದಾರೆ. ಭ್ರಷ್ಟಾಚಾರ ನಿರ್ಮೂಲನೆ, ಗ್ರಾಮೀಣ ರಸ್ತೆ, ಸಾರಿಗೆ, ವಸತಿಯಂಥ ಹತ್ತಾರು ಮೂಲ ಸೌಕರ್ಯಗಳ ಅಭಿವೃದ್ಧಿ, ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಹಾಗೂ ಮಾರಾಟ ಸೌಲಭ್ಯ, ಆರೋಗ್ಯ, ಶಿಕ್ಷಣ, ಉದ್ಯೋಗ ಸೃಷ್ಟಿಯ ಕಡೆ ಹೆಚ್ಚಿನ ಗಮನ, ಶಾಲಾಭಿವೃದ್ಧಿ, ಮಕ್ಕಳ ಆರೋಗ್ಯ, ಸುರಕ್ಷತೆ ಪ್ರಥಮ ಆದ್ಯತೆಯಾಗಲಿ. ಉನ್ನತ ಶಿಕ್ಷಣದ ಅಭಿವೃದ್ಧಿಯ ಕಡೆಗೂ ಸರ್ಕಾರ ಹೆಚ್ಚಿನ ಗಮನ ಹರಿಸಬೇಕಾಗಿದೆ. ಉದಾಹರಣೆಗೆ, ವಿಶ್ವವಿದ್ಯಾಲಯಗಳಲ್ಲಿ ಕಾಯಂ ಬೋಧಕರ ನೇಮಕ, ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟವನ್ನು ವಿಶ್ವದರ್ಜೆಗೆ ಏರಿಸುವಂಥ ಹತ್ತಾರು ಅಭಿವೃದ್ಧಿ ಚಿಂತನೆಗಳನ್ನು ಹೊತ್ತು ಮತ ಚಲಾಯಿಸಿದ ಮತದಾರರ ನಿರೀಕ್ಷೆಗಳನ್ನು ಕಾರ್ಯರೂಪಕ್ಕೆ ತಂದರೆ ಮಾತ್ರ ಕರ್ನಾಟಕವು ದೇಶದಲ್ಲಿಯೇ ಮಾದರಿ ರಾಜ್ಯವಾಗಬಲ್ಲದು.

ಡಾ. ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಆರೋಗ್ಯ ಕಾಯ್ದುಕೊಳ್ಳುವುದೇ ಪರಿಹಾರ

ಹೆಚ್ಚಿನ ಆಸ್ಪತ್ರೆಗಳು ರೋಗಿಗಳು ಮತ್ತು ಅವರ ಕುಟುಂಬಗಳಿಗೆ ಸಮಾಧಾನ ಕೊಡುವುದಕ್ಕಿಂತ ಆತಂಕವನ್ನೇ ಉಂಟುಮಾಡುತ್ತವೆ ಎಂಬುದು ಸತೀಶ್ ಜಿ.ಕೆ. ತೀರ್ಥಹಳ್ಳಿ ಅವರ ಲೇಖನವನ್ನು (ಸಂಗತ, ಮೇ 19) ಓದಿದಾಗ ಸ್ಪಷ್ಟವಾಗುತ್ತದೆ. ಸಣ್ಣ ತಲೆನೋವಿಗೂ 'ಎಂಆರ್‌ಐ ವರದಿ ತನ್ನಿ, ನಂತರ ಚಿಕಿತ್ಸೆ ನೀಡುತ್ತೇನೆ' ಎನ್ನುವ ವೈದ್ಯರೇ ಹೆಚ್ಚಾಗಿದ್ದಾರೆ. ಪಟ್ಟಣದ ವೈದ್ಯರು ಪರೀಕ್ಷೆ ಮಾಡುವ ಮೊದಲೇ 'ಆರೋಗ್ಯ ವಿಮೆ ಇದೆಯೇ' ಎಂದು ಕೇಳುವ ಪರಿಪಾಟವಿದೆ. ಆರೋಗ್ಯ ವಿಮೆ ಇದ್ದರೆ ಒಂದು ರೀತಿ, ಇಲ್ಲದಿದ್ದರೆ ಇನ್ನೊಂದು ರೀತಿಯ ಚಿಕಿತ್ಸೆ! ಇದನ್ನೆಲ್ಲಾ ನೋಡಿದರೆ, ಆರೋಗ್ಯ ಕಾಯ್ದುಕೊಳ್ಳಬೇಕಾದ ಮಹತ್ವದ ಅರಿವಾಗುತ್ತದೆ. ಯೋಗ, ಧ್ಯಾನ, ಪ್ರಾಣಾಯಾಮವನ್ನು ಕಲಿತು ಸಮಾಧಾನಚಿತ್ತದಿಂದ ಜೀವನ ನಡೆಸುವುದು ಕಾಯಿಲೆಗಳಿಂದ ದೂರ ಉಳಿಯುವುದಕ್ಕೆ ಪೂರಕ.

ತಿಮ್ಮರಾಜು ಎಸ್.ಆರ್., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹೊಸ ಸರ್ಕಾರಕ್ಕೊಂದು ಪ್ರಜಾ ಪ್ರಣಾಳಿಕೆ



ಹೊಸ ಸರ್ಕಾರ ನಿಮ್ಮ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬರುತ್ತಿದೆ. ನಿಮ್ಮ ಮೇಲೆ ನಮ್ಮ ಹೊಸ ನಿರೀಕ್ಷೆಗಳ ಭಾರವೂ ದೊಡ್ಡದಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹುದ್ದೆಗಳಿಗೆ ನಿಮ್ಮ ಹೆಸರುಗಳು ಘೋಷಣೆಯಾದಾಗ ರಾಜ್ಯದ ಅಭಿವೃದ್ಧಿ ಮಾತುಗಳನ್ನು ಆಡಿದ್ದೀರಿ. ರಾಜ್ಯದ ಅಭಿವೃದ್ಧಿ ಆಗಬೇಕಾದರೆ ಪ್ರಮುಖ ಇಲಾಖೆಗಳಿಗೆ ಸಂಬಂಧಿಸಿದ ಕೆಲವು ಬೇಡಿಕೆಗಳು ಇಲ್ಲಿವೆ. ಪ್ರದೇಶವಾರು ಬೇಡಿಕೆಗಳ ಪಟ್ಟಿಯೂ ಜತೆಗಿದೆ. ನಿಮ್ಮ ಸಂಪುಟ ಇತ್ತ ತುರ್ತಾಗಿ ಗಮನಹರಿಸುತ್ತದೆ ಎಂದು ನಂಬಿದ್ದೇವೆ.

ಇಂತಿ ರಾಜ್ಯದ ಪ್ರಜೆಗಳು

ಪ್ರತಿ ತಿಂಗಳು ರೈತರಿಗೆ ಆದಾಯ

ಟಿ.ಜಿ.ಎಸ್.ಅವಿನಾಶ್, ವ್ಯವಸ್ಥಾಪಕ ನಿರ್ದೇಶಕ, ಉಳುಮೆ ಪ್ರತಿಷ್ಠಾನ, ಮೈಸೂರು

1 ರಾಜ್ಯದಲ್ಲಿ ಅತಿವೃಷ್ಟಿ, ಅನಾವೃಷ್ಟಿಯಿಂದ ಐದು ವರ್ಷದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆ ಹಾನಿ ಸಂಭವಿಸಿದೆ. ಹವಾಮಾನದಲ್ಲಿ ಆಗುತ್ತಿರುವ ಬದಲಾವಣೆಯ ಕುರಿತು ಅಧ್ಯಯನ ನಡೆಸಬೇಕು. ಅದಕ್ಕೆ ತಕ್ಕಂತೆ ಪ್ರದೇಶವಾರು ಕೃಷಿ ಯೋಜನೆಯನ್ನು ರೂಪಿಸಬೇಕು

2 ಹದಿನೈದು ವರ್ಷದಲ್ಲಿ 12 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಭೂಮಿ ಬರಡಾಗಿದೆ. ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಬಡಾವಣೆ ನಿರ್ಮಿಸಲಾಗುತ್ತಿದೆ. ಅಭಿವೃದ್ಧಿ ಕೆಲಸಕ್ಕೂ ಕೃಷಿ ಜಮೀನಿನ ಮೇಲೆಯೇ ಕಣ್ಣು ಬಿದ್ದಿದೆ. ಶೇ 80ರಷ್ಟಿದ್ದ ರೈತರ ಪ್ರಮಾಣ ಶೇ 52ಕ್ಕೆ ಇಳಿದಿದೆ. ಕೃಷಿಭೂಮಿ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ನಿಲ್ಲಿಸಬೇಕು

3 ಗ್ರಾಮೀಣ ಪ್ರದೇಶದ ಯುವಕರು ಕೃಷಿ ಕ್ಷೇತ್ರದಿಂದ ದೂರ ಸರಿಯುತ್ತಿದ್ದಾರೆ. ಇವರಿಗೆ ಉತ್ತೇಜನ ನೀಡುವ ಕಾರ್ಯಕ್ರಮ ರೂಪಿಸಬೇಕು

4 ಒಂದು ಎಕರೆಯಲ್ಲಿ ತಿಂಗಳಿಗೆ ಕನಿಷ್ಠ ₹10 ಸಾವಿರ ಆದಾಯ ಬರುವ ಕೃಷಿ ಮಾದರಿ ರೂಪಿಸಬೇಕಿದೆ. ‘ಫುಡ್ ಫಾರೆಸ್ಟ್’ ಎಂಬ ಪರಿಕಲ್ಪನೆ ಅಡಿ ಈ ಆದಾಯ ಗಳಿಸಬಹುದು. ಇಲ್ಲಿ 1 ಎಕರೆಯಲ್ಲಿ 30 ಬಗೆಯ 1,500 ಮರ ಗಿಡಗಳಿರುತ್ತವೆ. ಮಳೆಗಾಲದಲ್ಲಿ ಮನೆಗೆ ಅಗತ್ಯವಿರುವ ಆಹಾರ ಧಾನ್ಯ ಲಭಿಸುವಂತೆ ಕೃಷಿ ಮಾಡಬೇಕು. ಈ ರೀತಿಯ ಹೊಸ ಕೃಷಿ ಪದ್ಧತಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕು

5 ರಾಸಾಯನಿಕ ಮುಕ್ತ ಕೃಷಿ ಪದ್ಧತಿಗೆ ಉತ್ತೇಜನ ನೀಡಬೇಕು. ಆಯಾ ಜಿಲ್ಲೆಗೆ ಹೊಂದಾಣಿಕೆ ಆಗುವ ಕೃಷಿ ಮಾದರಿ ರೂಪಿಸಬೇಕು. ಏಕ ಬೆಳೆ ಪದ್ಧತಿ ನಿಲ್ಲಬೇಕು. ಹೆಚ್ಚಿನ ಆಳಕ್ಕೆ ಉಳುಮೆ ಮಾಡುವುದನ್ನು ನಿಲ್ಲಿಸಬೇಕು. ಭೂಮಿಯ ಫಲವತ್ತತೆ ವೃದ್ಧಿಸಲು ರೈತರಲ್ಲಿ ಜಾಗೃತಿ ಮೂಡಿಸಬೇಕು

6 15ರಿಂದ 30 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಆಹಾರದ ಬೆಳೆಗಳು ಸದೃಢವಾಗಿ ಬೆಳೆಯುತ್ತವೆ. ಆದರೆ, ಈಗ ಉಷ್ಣಾಂಶ ಹೆಚ್ಚುತ್ತಿರುವುದರಿಂದ ಕೃಷಿ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಇಳುವರಿ ಕುಸಿಯುತ್ತಿದೆ. ತಾಪಮಾನ ಹೆಚ್ಚಳ ತಡೆಗೆ ತುರ್ತುಕ್ರಮ ಆಗಬೇಕು

7 ಆಯಾ ಹೋಬಳಿಗೆ ಒಂದರಂತೆ ಮಾರುಕಟ್ಟೆ ನಿರ್ಮಿಸಬೇಕು. ಸಕಾಲದಲ್ಲಿ ರೈತರಿಗೆ ಬಿತ್ತನೆಬೀಜ ಸಿಗಬೇಕು. ಎಲ್ಲ ಬೆಳೆಗಳಿಗೂ ವೈಜ್ಞಾನಿಕವಾಗಿ ಬೆಂಬಲ ಬೆಲೆ ನೀಡಬೇಕು

ಎನ್‌ಇಪಿ ಗೊಂದಲ ದೂರಮಾಡಿ

ರಾಜೇಂದ್ರ ಚೆನ್ನಿ, ಶಿಕ್ಷಣತಜ್ಞ, ಶಿವಮೊಗ್ಗ

1 ರಾಷ್ಟ್ರೀಯ ಶಿಕ್ಷಣ ನೀತಿ ಆಶಯಗಳು ಹಾಗೂ ಅದರಿಂದ ಅನುಷ್ಠಾನಕ್ಕೆ ಬಂದಿರುವ, ಬರಲಿರುವ ಬದಲಾವಣೆಗಳ ಬಗ್ಗೆ ರಾಜಕೀಯೇತರ ಪರಿಣತರಿಂದ ಗಂಭೀರ ವಿಶ್ಲೇಷಣೆ ನಡೆಸಬೇಕು. ಅಗತ್ಯವಿದ್ದರೆ ಮಾರ್ಪಾಡು ಮಾಡಬೇಕು

2 ಎನ್‌ಇಪಿ ಹಾಗೂ ಅದರ ಅವಸರದ ಅನುಷ್ಠಾನದಿಂದ ರಾಜ್ಯದ ಕಾಲೇಜು ಶಿಕ್ಷಣದಲ್ಲಿ ಆಗಿರುವ ಗೊಂದಲಗಳನ್ನು ತಕ್ಷಣ ನಿವಾರಿಸಬೇಕು

3 ಸಂವಿಧಾನದ ಪ್ರಕಾರ ಸಮವರ್ತಿ ಪಟ್ಟಿಯಲ್ಲಿರುವ ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರದಿಂದ ಅನೈತಿಕ ಒತ್ತಡಗಳು ಬರದಂತೆ ಒಕ್ಕೂಟದ ಅಡಿಯಲ್ಲಿ ಕರ್ನಾಟಕ ರಾಜ್ಯವು ತನ್ನ ಸಮಗ್ರ ಶಿಕ್ಷಣ ನೀತಿ ರೂಪಿಸಬೇಕು

4 ಪ್ರಾಥಮಿಕ ಮತ್ತು ಪ್ರೌಢಶಾಲಾ ಮಟ್ಟದ ಪಠ್ಯಪುಸ್ತಕ ರಚನೆಗಾಗಿ ಮಹಾರಾಷ್ಟ್ರದಲ್ಲಿರುವಂತೆ ಶಿಕ್ಷಣ ತಜ್ಞರನ್ನು ಒಳಗೊಂಡ ಸ್ವಾಯತ್ತವಾದ ಸ್ವತಂತ್ರ ಸಂಸ್ಥೆಯನ್ನು ರೂಪಿಸಬೇಕು

5 ಸರ್ಕಾರಗಳು ಬದಲಾದರೂ ಪಠ್ಯಕ್ರಮ, ಪಠ್ಯಪುಸ್ತಕಗಳಲ್ಲಿ ಹಸ್ತಕ್ಷೇಪ ಮಾಡದಂತೆ ಕಾಯಂ ನೀತಿಯನ್ನು ಅನುಷ್ಠಾನಕ್ಕೆ ತರಬೇಕು

6 ನೈತಿಕ ಶಿಕ್ಷಣದ ಹೆಸರಲ್ಲಿ ಕೇವಲ ಧಾರ್ಮಿಕ ಗ್ರಂಥಗಳನ್ನು ಪಠ್ಯವಾಗಿ ಅಳವಡಿಸುವ ಬದಲಾಗಿ ಭಾರತೀಯ ಮೌಲ್ಯಗಳಾದ ಸಹಿಷ್ಣುತೆ, ಸಹಬಾಳ್ವೆ, ಸೌಹಾರ್ದದ ವಿಷಯಗಳನ್ನು ವಿವಿಧ ಸಾಂಸ್ಕೃತಿಕ ಮೂಲಗಳಿಂದ ಆಯ್ದು ಬೋಧನೆ ಮಾಡಬೇಕು

7 ದೇಶದ ಅತ್ಯುನ್ನತ ವಿಜ್ಞಾನ ಹಾಗೂ ಸಂಶೋಧನಾ ಸಂಸ್ಥೆಗಳನ್ನು ಈಚೆಗೆ ಸರ್ಕಾರದ ಅಧಿಕಾರದ ಕೆಳಗೆ ತರುತ್ತಿರುವ ಪ್ರಯತ್ನಗಳನ್ನು ನಮ್ಮ ರಾಜ್ಯಮಟ್ಟದ ಸಂಸ್ಥೆಗಳಲ್ಲಿ ನಡೆಯದಂತೆ ಎಚ್ಚರವಹಿಸಬೇಕು. ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಅಪಾರ ಸಂಖ್ಯೆಯ ಶಿಕ್ಷಕರ ಹುದ್ದೆಗಳನ್ನು 60 ದಿನಗಳ ಒಳಗೆ ಭರಿಸುವ ಕಾರ್ಯಕ್ರಮವನ್ನು ತಕ್ಷಣ ಆರಂಭಿಸಬೇಕು

ಮುಟ್ಟಿನ ರಜೆ ಕಡ್ಡಾಯ ಮಾಡಿ

ಪ್ರತಿಭಾ ಎಂ.ವಿ., ರಂಗಕರ್ಮಿ, ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯೆ, ಸಾಗರ

1 ಉದ್ಯೋಗದ ಸ್ಥಳಗಳಲ್ಲಿ ಮಹಿಳೆಯರಿಗೆ ಮುಟ್ಟಿನ ರಜೆಯನ್ನು ಕಡ್ಡಾಯವಾಗಿ ನೀಡುವ ಕಾನೂನು ಜಾರಿಯಾಗಬೇಕು

2 ರಾಜ್ಯದ ಕೆಲವು ಕಡೆಗಳಲ್ಲಿ ಮಾತ್ರವೇ ಮಹಿಳಾ ಪೊಲೀಸ್ ಠಾಣೆಗಳಿವೆ. ಇದು ಎಲ್ಲಾ ತಾಲ್ಲೂಕು ಕೇಂದ್ರದಲ್ಲೂ ಸ್ಥಾಪನೆಯಾಗಬೇಕು

3 ಉದ್ಯೋಗ ಸೇರಿದಂತೆ ಹಲವು ಕಾರಣಗಳಿಗಾಗಿ ಬೇರೆ ಊರಿಗೆ ತೆರಳುವ ಮಹಿಳೆಯರಿಗಾಗಿ ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಸುರಕ್ಷಿತ ವಸತಿ ಕೇಂದ್ರದ ಸ್ಥಾಪನೆಯಾಗಬೇಕು

4 ಬಾಣಂತಿಯರಿಗೆ, ಗರ್ಭಿಣಿಯರಿಗೆ ಸರ್ಕಾರ ನೀಡುತ್ತಿರುವ ಮಾತ್ರೆಗಳು, ಕಾಂಡೋಮ್‌ಗಳು ಮತ್ತು ಅಂಗನವಾಡಿಯಲ್ಲಿ ನೀಡುತ್ತಿರುವ ಪೌಷ್ಟಿಕ ಆಹಾರ ಹೀಗೆ ಎಲ್ಲವೂ ಕಾಳಸಂತೆಕೋರರ ಪಾಲಾಗುತ್ತಿವೆ. ಇದರ ನಿಯಂತ್ರಣಕ್ಕೆ ಸರ್ಕಾರವು ಯೋಜನೆ ರೂಪಿಸಬೇಕು

5 ಖಾಸಗಿ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಮಹಿಳೆಯರಿಗೆ ರಜೆ ನೀಡುತ್ತಿಲ್ಲ. ಒಂದು ವೇಳೆ ರಜೆ ನೀಡಿದರೆ, ವೇತನರಹಿತ ರಜೆ ನೀಡಲಾಗುತ್ತಿದೆ. ಇದನ್ನು ತಡೆಯಲು ಸರ್ಕಾರವು ಕಾನೂನು ರೂಪಿಸಬೇಕು

6 ಹೆದ್ದಾರಿಗಳಲ್ಲಿ ಮಹಿಳೆಯರಿಗಾಗಿ ಸ್ವಚ್ಛ ಹಾಗೂ ಸುರಕ್ಷಿತ ಶೌಚಾಲಯ ನಿರ್ಮಾಣ ಅಗತ್ಯ. ಜೊತೆಗೆ, ಮಹಿಳೆಯರಿಗೆ ಪ್ರತ್ಯೇಕ ಸೀಟಿನ ವ್ಯವಸ್ಥೆ ಇದ್ದರೂ ಜಾರಿ ಮಾತ್ರ ಆಗುತ್ತಿಲ್ಲ. ಖಾಸಗಿ ಬಸ್ಸುಗಳಲ್ಲಿ ಕೆಲವೊಮ್ಮೆ ಸರ್ಕಾರಿ ಬಸ್ಸುಗಳಲ್ಲೂ ಸ್ಲೀಪರ್ ಸೀಟುಗಳಲ್ಲಿ ಮಹಿಳೆಯರ ಪಕ್ಕದ ಸೀಟನ್ನು ಪುರುಷರಿಗೆ ನೀಡಿ, ಮಹಿಳೆಯರು ಮುಜುಗರ ಅನುಭವಿಸುವಂತೆ ಮಾಡಲಾಗುತ್ತಿದೆ. ಇದು ನಿಲ್ಲಬೇಕು

7 ಮೌಢ್ಯ ನಿಷೇಧ ಕಾನೂನು ಪರಿಣಾಮಕಾರಿಯಾಗಿ ಜಾರಿ ಅಗಬೇಕು. ಅತ್ಯಾಚಾರದ ಕಾರಣಗಳಿಂದ ಬಾಲಕಿಯರು ಗರ್ಭಿಣಿಯರಾದರೆ, ಇಂಥ ಮಕ್ಕಳಿಗೂ ಪೌಷ್ಟಿಕ ಆಹಾರ ನೀಡುವಂಥ, ಇವರ ಆರೋಗ್ಯ ರಕ್ಷಿಸುವಂತೆ ಯೋಜನೆ ಬೇಕು. ಅವರ ಸುರಕ್ಷತೆಯನ್ನು ಖಾತರಿಪಡಿಸಬೇಕು. ಕಡ್ಡಾಯ ಮತ್ತು ಉಚಿತ ಶಿಕ್ಷಣಕ್ಕೆ ಒತ್ತು ನೀಡಬೇಕು

ಬೆಂಗಳೂರು ಮಾತ್ರ ಕರ್ನಾಟಕವಲ್ಲ

ಎಚ್.ಎಸ್. ರಾಘವೇಂದ್ರ ರಾವ್, ವಿಮರ್ಶಕ, ಬೆಂಗಳೂರು

1 ಬಹುಮುಖಿಯಾದ, ಸದಾ ಬದಲಾಗುವ, ಖಚಿತವಾದ ಅಳತೆಗೋಲುಗಳಿಗೆ ನಿಲುಕದ ‘ಸಂಸ್ಕೃತಿ’ಯು ಯಾವಾಗಲೂ ಪರಸ್ಪರ ಸಹಯೋಗ ಮತ್ತು ಸಂಘರ್ಷಗಳಲ್ಲಿರುತ್ತದೆ. ಆಡಳಿತ ನಡೆಸುವ ಸರ್ಕಾರವು ತನ್ನ ಆದರ್ಶಗಳ ಹಿನ್ನೆಲೆಯಲ್ಲಿ ಅನೇಕ ಯೋಜನೆಗಳನ್ನು ರೂಪಿಸಬೇಕು. ಅದು ತಾನೇ ನೇಮಿಸುವ ಅಕಾಡೆಮಿಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರಬಾರದು.

2 ನಮ್ಮ ಸಂಸ್ಕೃತಿನೀತಿಯು ಪ್ರಾದೇಶಿಕ, ಸಾಮಾಜಿಕ ಮತ್ತು ಲಿಂಗ ಸಮಾನತೆಯನ್ನು ಒಳಗೊಳ್ಳಬೇಕು; ಗುಣಪಕ್ಷಪಾತಿಯೂ ಆಗಬೇಕು. ಇದಕ್ಕೆ ಅಡ್ಡಿಯಾಗುವ ಸ್ವ-ಜನಪಕ್ಷಪಾತಕ್ಕೆ ಕಡಿವಾಣ ಹಾಕಬೇಕು

3 ಅಧಿಕಾರದ ವಿಕೇಂದ್ರೀಕರಣದ ಬಗೆಗಳನ್ನು ಎಚ್ಚರಿಕೆಯಿಂದ ಜಾರಿಗೆ ತರಬೇಕು. ಬೆಂಗಳೂರು ಮಾತ್ರ ಕರ್ನಾಟಕವಲ್ಲ

4 ಶಿಕ್ಷಣ ಇಲಾಖೆ, ಸಮಾಜಕಲ್ಯಾಣ ಇಲಾಖೆಗಳು, ವಿಶ್ವವಿದ್ಯಾಲಯಗಳು ಮತ್ತು ಸಂಸ್ಕೃತಿ ಸಂಘಟನೆಗಳು ಪರಸ್ಪರ ಸಹಯೋಗದಲ್ಲಿ ಕೆಲಸ ಮಾಡಲು ನೆರವಾಗುವ ಒಂದು ‘ವ್ಯವಸ್ಥೆ’ಯನ್ನು ರೂಪಿಸುವ ಅಗತ್ಯವಿದೆ. ಆ ಮೂಲಕ ಗೃಹಿಣಿಯರು, ರೈತ-ಕಾರ್ಮಿಕರು ಮತ್ತು ವಿದ್ಯಾರ್ಥಿಗಳನ್ನು ಒಳಗೊಳ್ಳುವ ಬಗೆಗಳನ್ನು ಕಂಡುಕೊಳ್ಳಬೇಕಾಗಿದೆ

5 ಸಂಸ್ಕೃತಿ ಇಲಾಖೆಯೆಂದರೆ ಹಣ ಹಂಚುವ ಕೇಂದ್ರವೆಂಬ, ಆ ಹಣಕ್ಕೆ ಯಾವುದೇ ಬಗೆಯ ‘ಅಕೌಂಟಬಿಲಿಟಿ’ ಬೇಡವೆಂಬ, ಇಲಾಖೆಯ ಅಧಿಕಾರಿಗಳು ‘ದಾತಾರ’ರೆಂಬ ತಿಳಿವಳಿಕೆ ಹೋಗಬೇಕು. ‘ನಾಯಿಕೊಡೆ’ಯಂತೆ ಹುಟ್ಟಿಕೊಳ್ಳುವ ಸಂಸ್ಥೆಗಳಿಂದ ಸಂಸ್ಕೃತಿ ಬೆಳೆಯುವುದಿಲ್ಲ

6 ಕೈಗಾರಿಕೆ, ವಾಣಿಜ್ಯ, ಧಾರ್ಮಿಕ ಸಂಸ್ಥೆಗಳು ಕಲೆ ಹಾಗೂ ಸಂಸ್ಕೃತಿಯನ್ನು ‘ಪೋಷಿಸುವಾಗ’ ಮೂಡಿ ಬರುತ್ತಿರುವ ಹಿತಾಸಕ್ತಿಗಳ ಹುನ್ನಾರವನ್ನು ಗಮನಿಸುವುದು ಸರ್ಕಾರಗಳಿಗೆ ಮತ್ತು ಸಮುದಾಯಗಳಿಗೆ ಸಾಧ್ಯವಾಗಬೇಕು. ಸಂಸ್ಥೆಗಳಂತೆಯೇ ವೈಯಕ್ತಿಕವಾಗಿ ಒಳ್ಳೆಯ ಯೋಜನೆಗಳನ್ನು ಹೊಂದಿರುವ ವ್ಯಕ್ತಿಗಳಿಗೂ ನೆರವು ಸಿಗಬೇಕು

7 ‘ಕಿರಿಯರಿಗೆ ಪ್ರೋತ್ಸಾಹ’ದ ಹೆಸರಿನಲ್ಲಿ ಅವರಿಗೆ ನೀಡಲಾಗುವ ಬಿರುದು/ಬಹುಮಾನಗಳು ಒಂದು ಕಡೆಯಾದರೆ, ಬಹುಪಾಲು ಸರ್ಕಾರೀ ಯೋಜನೆಗಳಲ್ಲಿ ‘ಅದೇ ಅದೇ ಮುದುಕರ ಮುಖದರ್ಶನ’ ಇನ್ನೊಂದು ಕಡೆ. ಇವೆರಡೂ ಅತಿರೇಕಗಳೇ. ಕಲಾಸ್ವಾದನೆ, ವೈಚಾರಿಕತೆಯ ಪ್ರಸಾರ, ಕಲಾನಿರ್ಮಿತಿ, ಕಲಾಕೃತಿಗಳ ಸಂರಕ್ಷಣೆ ಮುಂತಾದ ಕೆಲಸಗಳು ಪ್ರಾಮಾಣಿಕವಾಗಿ ನಡೆಯಬೇಕು. ಸಾಹಿತ್ಯವನ್ನು ಹೊರತುಪಡಿಸಿದ ಇತರ ಕಲೆಗಳಿಗೆ/ಕಲಾವಿದರಿಗೆ ಇನ್ನಷ್ಟು ‘ಸ್ಪೇಸ್’ ಕೊಡುವುದು ಇಂದಿನ ಅಗತ್ಯ. ಈ ಕೆಲಸಕ್ಕೆ ಆಧುನಿಕ ತಂತ್ರಜ್ಞಾನ ಮತ್ತು ಮಾಧ್ಯಮಗಳ ಅಳವಡಿಕೆ ಬೇಕು

ಗ್ರಾಹಕ ಸೇವೆಗಳು ಕನ್ನಡದಲ್ಲಿ ಸಿಗಲಿ

ವಸಂತ ಶೆಟ್ಟಿ, ಬರಹಗಾರ, ಬೆಂಗಳೂರು

1 ಕನ್ನಡ ಮಾಧ್ಯಮದಲ್ಲಿ ಇಂದಿಗೂ 50 ಲಕ್ಷಕ್ಕೂ ಹೆಚ್ಚು ಮಕ್ಕಳು ಓದುತ್ತಿದ್ದಾರೆ. ಇವರ ಕಲಿಕೆಯ ಗುಣಮಟ್ಟ ಸುಧಾರಿಸಲು STEM ಆಧಾರಿತ ಕಲಿಕೆ, ವಿಜ್ಞಾನ ಮತ್ತು ಗಣಿತದ ಪಠ್ಯಕ್ರಮ ಸರಳಗೊಳಿಸುವುದು ಮತ್ತು ಇಂಗ್ಲಿಷ್ ಅನ್ನು ಒಂದು ಮಾತಿನ ನುಡಿಯಾಗಿ ಚೆನ್ನಾಗಿ ಕಲಿಸುವುದಕ್ಕೆ ಒತ್ತು ನೀಡಬೇಕು

2 ನಗರಪ್ರದೇಶಗಳಲ್ಲಿ ಕನ್ನಡ ಮಾಧ್ಯಮದ ಶಾಲೆಗಳೇ ಇಲ್ಲ. ಒಳ್ಳೆಯ ಗುಣಮಟ್ಟದ ಕನ್ನಡ ಮಾಧ್ಯಮ ಶಾಲೆಗಳನ್ನು ನಗರಪ್ರದೇಶಗಳಲ್ಲಿ ಸ್ಥಾಪಿಸಲು ಖಾಸಗಿ ಸಂಸ್ಥೆಗಳಿಗೆ ಉತ್ತೇಜನ ನೀಡುವ ನೀತಿಯೊಂದನ್ನು ಜಾರಿಗೆ ತರಬೇಕು. ಕರ್ನಾಟಕದ ಎಲ್ಲ ಶಾಲೆಗಳಲ್ಲೂ ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸುವ ಕಾಯ್ದೆಯನ್ನು ಅನುಷ್ಠಾನಕ್ಕೆ ತರಬೇಕು

3 ಕನ್ನಡಿಗ ಉದ್ಯಮಿಗಳು ಸ್ಥಾಪಿಸುವ ನವೋದ್ಯಮಗಳಿಗೆ ವಿಶೇಷ ಬೆಂಬಲ ನೀಡುವ ನೀತಿಯೊಂದನ್ನು ತರಬೇಕು

4 ಬ್ಯಾಂಕು, ರೈಲ್ವೆ ಸೇರಿದಂತೆ ಕೇಂದ್ರ ಸರ್ಕಾರದಡಿ ಬರುವ ಎಲ್ಲ ಉದ್ಯೋಗ ನೇಮಕಾತಿಯ ಅಧಿಸೂಚನೆಯನ್ನು ಕನ್ನಡದಲ್ಲಿ ಪ್ರಕಟಿಸಿ, ಪರೀಕ್ಷೆ ಮತ್ತು ಸಂದರ್ಶನಗಳನ್ನು ಕನ್ನಡದಲ್ಲೂ ನೀಡುವ ಅವಕಾಶ ಕೊಡುವಂತೆ ಕೇಂದ್ರದ ಮೇಲೆ ಒತ್ತಡ ತರಬೇಕು

5 ಕೇಂದ್ರ ಸರ್ಕಾರಿ ಉದ್ಯೋಗಗಳನ್ನು ಪಡೆಯಲು ಬೇಕಿರುವ ತರಬೇತಿ ಶಿಬಿರಗಳನ್ನು ವಿಶ್ವವಿದ್ಯಾಲಯಗಳ ಮೂಲಕ ಕಾಲೇಜುಗಳಲ್ಲಿ ವ್ಯಾಪಕವಾಗಿ ನಡೆಸುವುದಕ್ಕೆ ಒತ್ತು ಕೊಡಬೇಕು

6 ಬೆಂಗಳೂರಿಗೆ ಕೆಲಸ ಅರಸಿ ಬರುವ ಕನ್ನಡಿಗರಿಗೆ ವಸತಿ, ಸಾರಿಗೆ, ಆರೋಗ್ಯ ಸೇವೆ ಮತ್ತು ಶಿಕ್ಷಣದಂತಹ ವಿಚಾರಗಳಲ್ಲಿ ಬೆಂಬಲ ನೀಡುವ ವ್ಯವಸ್ಥೆಗಳನ್ನು ತರಬೇಕು

7 ಕೇಂದ್ರ ಸರ್ಕಾರಿ ಕಚೇರಿಗಳು ನೀಡುವ ನಾಗರೀಕ ಮತ್ತು ಗ್ರಾಹಕ ಸೇವೆಗಳು ಕರ್ನಾಟಕದಲ್ಲಿ ಕನ್ನಡದಲ್ಲಿ ದೊರಕುವುದನ್ನು ಖಾತರಿಪಡಿಸಬೇಕು. 2026ರ ಡಿಲಿಮಿಟೇಶನ್ ಅಡಿ ಕರ್ನಾಟಕದ ಪ್ರತಿನಿಧಿತ್ವ ದೆಹಲಿಯಲ್ಲಿ ಕುಸಿಯದಂತೆ ದನಿ ಎತ್ತಬೇಕು

ಇ.ವಿ.ಗಳ ಬಳಕೆಗೆ ಇರಲಿ ಆದ್ಯತೆ

ಸಾರ್ಥಕ್ ಪ್ರಧಾನ್, ಸಹಾಯಕ ಪ್ರಾಧ್ಯಾಪಕ, ತಕ್ಷಶಿಲಾ ಇನ್‌ಸ್ಟಿಟ್ಯೂಷನ್, ಬೆಂಗಳೂರು

1 ರಾಜ್ಯದ ಎಲ್ಲ ನಗರ ಪ್ರದೇಶಗಳಲ್ಲಿ ಮೂಲಸೌಕರ್ಯ ಖಾತರಿಪಡಿಸಬೇಕು. ಸಾರಿಗೆ, ತ್ಯಾಜ್ಯ ನಿರ್ವಹಣೆ ವ್ಯವಸ್ಥೆಯ ಅಭಿವೃದ್ಧಿ ಮಾಡಬೇಕು

2 ಹೊಸ ನಗರಗಳ ನಿರ್ಮಾಣ ಮತ್ತು ಹಾಲಿ ನಗರಗಳ ವಿಸ್ತರಣೆಗೆ ಉತ್ತೇಜನಬೇಕು

3 ನಗರ ಹಾಗೂ ಗ್ರಾಮೀಣ ಪ್ರದೇಶಗಳ ನಡುವೆ ಸುಲಭ ಸಂಚಾರಕ್ಕೆ ಮೂಲಸೌಕರ್ಯ ಬೇಕು. ಹಳ್ಳಿಯವರು ನಗರಗಳಲ್ಲಿನ ಸೌಲಭ್ಯವನ್ನು ಸುಲಭವಾಗಿ ಪಡೆದು, ಮಾರುಕಟ್ಟೆ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಡಿಜಿಟಲ್ ಮೂಲಸೌಕರ್ಯ ಕಲ್ಪಿಸಬೇಕು. ಇದಕ್ಕೆ ಖಾಸಗಿ ವಲಯದ ಜೊತೆ ಪಾಲುದಾರಿಕೆ ಬೇಕು

4 ಬೆಂಗಳೂರಿನ ಮೂಲಸೌಕರ್ಯವು ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿರುವಂತೆ ಮಾಡಬೇಕು. ಇದಕ್ಕೆ ಆದ್ಯತೆ ಸಿಗಬೇಕು

5 ಈಗ ನಡೆದಿರುವ ನಮ್ಮ ಮೆಟ್ರೊ ಯೋಜನೆಗಳು ಕಾಲಮಿತಿಯಲ್ಲಿ ಪೂರ್ಣಗೊಳ್ಳಬೇಕು. ಮೆಟ್ರೊ ಜಾಲವು ಇನ್ನಷ್ಟು ಬೆಳೆಯಬೇಕು

6 ನಗರ ಕೇಂದ್ರಿತ ವಿಮಾನ ನಿಲ್ದಾಣಗಳ ಬದಲು ವಿವಿಧ ಪ್ರದೇಶಗಳಿಗೆ ವಿಮಾನ ನಿಲ್ದಾಣ ಸೌಲಭ್ಯ ಸಿಗುವಂತಾಗಬೇಕು. ರೈಲು ಮಾರ್ಗ, ಎಕ್ಸ್‌ಪ್ರೆಸ್ ಮಾರ್ಗ ನಿರ್ಮಾಣಕ್ಕೆ ನೆರವು ಕೊಡಿ. ಇದು ಆರ್ಥಿಕ ಬೆಳವಣಿಗೆಗೆ ನೆರವಾಗುತ್ತದೆ

7 ವಿಮಾನ, ಹಡಗು ಮೂಲಕ ಸರಕು ಸಾಗಣೆ ಸಾಮರ್ಥ್ಯ ಹೆಚ್ಚಾಗಲಿ. ಇದಕ್ಕೆ ಅನುಗುಣವಾಗಿ ಗೋದಾಮು ಸೌಲಭ್ಯವೂ ಹೆಚ್ಚಬೇಕು. ಇ.ವಿ. ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಇದಕ್ಕೆ ಅಗತ್ಯವಿರುವ ಮೂಲಸೌಕರ್ಯವನ್ನು ರಾಜ್ಯದೆಲ್ಲೆಡೆ ಕಲ್ಪಿಸಬೇಕು

ರಾಜಕೀಯ ವರ್ಗಾವಣೆ ಬೇಡ

ವಿ. ಬಾಲಸುಬ್ರಮಣಿಯನ್, ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬೆಂಗಳೂರು

1 ಈ ಬಾರಿಯ ಚುನಾವಣೆಯಲ್ಲಿನ ಜನಮತವು ‘ಹಿಂದುತ್ವ’ದ ಕಾರ್ಯಸೂಚಿಯ ಆಡಳಿತದ ವಿರುದ್ಧ ಇದೆ. ಅದನ್ನು ಮನಗಂಡು ಎಲ್ಲ ಜಾತಿ, ಧರ್ಮಗಳ ಜನರನ್ನು ಸಮಾನವಾಗಿ ಕಾಣುವ ಜಾತ್ಯತೀತ, ಧರ್ಮ ನಿರಪೇಕ್ಷ ಆಡಳಿತ ಜಾರಿಯಾಗಬೇಕು

2 ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ಎದುರಿಸುತ್ತಿರುವ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ದಾಖಲಾದ ಪ್ರಕರಣಗಳಲ್ಲಿ ವಿಚಾರಣೆ ಆರಂಭಿಸಲು ತನಿಖಾ ಸಂಸ್ಥೆಗಳಿಗೆ ತ್ವರಿತವಾಗಿ ಅಭಿಯೋಜನಾ ಮಂಜೂರಾತಿ ನೀಡಬೇಕು

3 ತನಿಖಾ ಸಂಸ್ಥೆಗಳನ್ನು ಬಲಪಡಿಸುವ ಮೂಲಕ ಸರ್ಕಾರದ ಯಾವುದೇ ಹಂತದಲ್ಲಿ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ ಎಂಬ ಸಂದೇಶ ರವಾನಿಸಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ರಕ್ಷಣೆ ನೀಡಬೇಕು

4 ರಾಜಕೀಯ ಒತ್ತಡಗಳಿಗೆ ಮಣಿದು ಸರ್ಕಾರಿ ಅಧಿಕಾರಿಗಳು ಮತ್ತು ನೌಕರರನ್ನು ವರ್ಗಾವಣೆ ಮಾಡುವುದನ್ನು ನಿಲ್ಲಿಸಬೇಕು

5 ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಧಿಕಾರಿಗಳನ್ನು ಬೆರಳಚ್ಚುಗಾರರಂತೆ ನಡೆಸಿಕೊಳ್ಳಲಾಗುತ್ತಿತ್ತು. ಅದರಿಂದಾಗಿಯೇ ಆಡಳಿತ ವ್ಯವಸ್ಥೆ ಕುಸಿದಿತ್ತು. ಹೊಸ ಸರ್ಕಾರವು ಅಂತಹ ನಡವಳಿಕೆಯನ್ನು ಕೈಬಿಟ್ಟು, ಅಧಿಕಾರಿಗಳು, ನೌಕರರನ್ನು ಗೌರವದಿಂದ ನಡೆಸಿಕೊಳ್ಳಬೇಕು

6 ಯಾವುದೇ ಕಡತಗಳು ನಿರ್ದಿಷ್ಟ ಕಾಲಮಿತಿಯೊಳಗೆ ವಿಲೇವಾರಿ ಆಗುವಂತೆ ವ್ಯವಸ್ಥೆ ಮಾಡಬೇಕು. ವಿಳಂಬಕ್ಕೆ ಕಾರಣವಾಗುವವರ ವಿರುದ್ಧ ಕ್ರಮ ಜರುಗಿಸಬೇಕು

7 ಬಿಡಿಎ, ಕೆಐಎಡಿಬಿ ಸೇರಿದಂತೆ ಸರ್ಕಾರದ ಯಾವುದೇ ಇಲಾಖೆ, ಸಂಸ್ಥೆ ಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಕಾನೂನಿಗೆ ವಿರುದ್ಧವಾಗಿ ಡಿನೋಟಿಫೈ ಮಾಡಲು ಅವಕಾಶ ನೀಡಬಾರದು. ಸರ್ಕಾರಿ ಆಸ್ತಿಗಳ ರಕ್ಷಣೆ ಮತ್ತು ವರಮಾನ ಸೋರಿಕೆ ತಡೆಗೆ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು

ಆಸ್ಪತ್ರೆ ಶುರುಮಾಡುವ ಮುನ್ನವೇ ಹುದ್ದೆ ತುಂಬಿ

ಡಾ. ವೈ. ಯೋಗಾನಂದ ರೆಡ್ಡಿ, ವೈದ್ಯ, ಬಳ್ಳಾರಿ

1 ರಾಜ್ಯದಲ್ಲಿ ಯಾವುದೇ ಹೊಸ ಆಸ್ಪತ್ರೆ, ಮೆಡಿಕಲ್ ಕಾಲೇಜು ಆರಂಭಿಸುವಾಗ ಎಲ್ಲ ಹುದ್ದೆಗಳನ್ನು ತುಂಬಿಯೇ ಮುಂದುವರಿಯಬೇಕು. ವೈದ್ಯಕೀಯ ಉಪಕರಣಗಳನ್ನು ಪ್ರತಿ ಐದಾರು ವರ್ಷಗಳಿಗೊಮ್ಮೆ ಬದಲಿಸಬೇಕು

2 ಕರ್ನಾಟಕ ವೈದ್ಯಕೀಯ ಮಂಡಳಿ ಇರುವುದು ಜನರಿಗೆ ನ್ಯಾಯ ಒದಗಿಸಲು. ಅದಕ್ಕೆ ಶಕ್ತಿ ತುಂಬಿ ಸದೃಢಗೊಳಿಸಬೇಕು. ಪ್ರತಿ ಐದು ವರ್ಷಗಳಿಗೊಮ್ಮೆ ಚುನಾಯಿತ ಮಂಡಳಿ ಅಸ್ತಿತ್ವಕ್ಕೆ ಬರಬೇಕು. ಅದಕ್ಕಾಗಿ ಕಾಯ್ದೆಗೆ ತಿದ್ದುಪಡಿ ತರಬೇಕು. ವಿವಿಧ ರೀತಿಯ ನೆಪವೊಡ್ಡಿ ಮಂಡಳಿಯ ಅಧಿಕಾರದಲ್ಲಿ ಕೆಲವರೇ ದೀರ್ಘಕಾಲದ ವರೆಗೆ ಮುಂದುವರಿಯುತ್ತಿದ್ದಾರೆ. ಅಲ್ಲಿ ಹಣ ಸಂಗ್ರಹವಾಗದಂತೆ ನೋಡಿಕೊಳ್ಳಬೇಕು

3 ಹೊಸದಾಗಿ ನೇಮಕಗೊಂಡ ವೈದ್ಯರನ್ನು ಗ್ರಾಮೀಣ ಸೇವೆಗೆ ನಿಯೋಜಿಸಬಾರದು. ಅವರಿಗೆ ಅನುಭವ ಇರುವುದಿಲ್ಲ. ಇಬ್ಬರು ಅನುಭವಿ ವೈದ್ಯರೊಂದಿಗೆ ಒಬ್ಬ ಹೊಸ ವೈದ್ಯರನ್ನು ಹಳ್ಳಿಗಳಿಗೆ ನಿಯೋಜಿಸಬೇಕು. ಉತ್ತಮ ವೈದ್ಯಕೀಯ ಸೌಲಭ್ಯದ ಜೊತೆಗೆ ಹೊಸ ವೈದ್ಯರಿಗೆ ಅನುಭವ ಗಳಿಸಲು ಇದು ಸಹಕಾರಿ

4 ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾಲಕಾಲಕ್ಕೆ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ನಡೆಯಬೇಕು. ಅದರಲ್ಲಿ ಭ್ರಷ್ಟಾಚಾರ ಆಗದಂತೆ ನೋಡಿಕೊಳ್ಳಬೇಕು

5 ಮೆಡಿಕಲ್ ಕಾಲೇಜುಗಳಲ್ಲಿ ಪ್ರತಿ ಮೂರು ವರ್ಷಗಳಿಗೊಮ್ಮೆ ಎಚ್‌ಒಡಿಗಳನ್ನು ಬದಲಿಸಬೇಕು

6 ಕ್ಲಿನಿಕಲ್ ಜಾಬ್ ಮತ್ತು ಸಾರ್ವಜನಿಕ ಸೇವೆ ಪ್ರತ್ಯೇಕಗೊಳಿಸಬೇಕು. ನರ್ಸಿಂಗ್ ಕಾಲೇಜುಗಳಲ್ಲಿ ಸಿಬ್ಬಂದಿ, ಮೂಲಸೌಕರ್ಯ ಇಲ್ಲ. ಅದರ ಬಲವರ್ಧನೆ ಆಗಬೇಕು. ಗುಣಮಟ್ಟ ಬರಬೇಕು. ಅಲ್ಲಿ ಉತ್ತಮ ಶಿಕ್ಷಣ ಕೊಟ್ಟು, ನರ್ಸ್‌ಗಳನ್ನು ಹೆಚ್ಚು ವೃತ್ತಿಪರ ಮಾಡಬೇಕು

7 ಔಷಧಿ, ಉಪಕರಣಗಳ ಖರೀದಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಎಲ್ಲ ಸಾಮಾನ್ಯ ಔಷಧಿಗಳ ಮೇಲೆ ಒಂದೇ ಸಮನಾದ ರಿಯಾಯಿತಿ ಇರಬೇಕು. ಕ್ಲಿನಿಕಲ್ ಲ್ಯಾಬ್‌ಗಳನ್ನು ಸರಿಯಾಗಿ ಪರಿಶೀಲಿಸಿದ ನಂತರವೇ ಅನುಮತಿ ಕೊಡಬೇಕು. ಸರ್ಕಾರಿ ಹಾಗೂ ಖಾಸಗಿ ಲ್ಯಾಬ್‌ಗಳಿಗೆ ಪ್ರೈವೇಟ್ ಕಂಪನಿಗಳಿಂದ ಉಚಿತವಾದ ಸಲಕರಣೆಗಳ ಪೂರೈಕೆ ತಡೆಯಬೇಕು. ಇಲ್ಲವಾದಲ್ಲಿ ಕೆಮಿಕಲ್ ರೀ ಏಜೆಂಟ್ಸ್ ಜಾಸ್ತಿ ಹೊರೆಯಾಗಿ, ಕಮಿಷನ್ ದಂಧೆಗೆ ಅವಕಾಶ ಸಿಗುತ್ತದೆ. ವೈದ್ಯಕೀಯ ಉಪಕರಣಗಳ ದರ ಸ್ಟ್ಯಾಂಡರ್ಡ್ ಆಗಬೇಕು

ಪ್ರದೇಶವಾರು ಅಭಿವೃದ್ಧಿಗೆ ಬೇಕಿದೆ 40 ಅಂಶಗಳ ಕಾರ್ಯಕ್ರಮ

1. ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ಬೇಕು, 24x7 ಕುಡಿಯುವ ನೀರು ಪೂರೈಕೆ ಯೋಜನೆ ಹು-ಧಾ ಎಲ್ಲ ವಾರ್ಡ್‌ಗಳಿಗೆ ವಿಸ್ತರಿಸಬೇಕು
2. ಬೆಳಗಾವಿ-ಕಿತ್ತೂರು- ಧಾರವಾಡ ನೇರ ರೈಲು ಮಾರ್ಗದ ನಿರ್ಮಾಣ ತ್ವರಿತಗೊಳ್ಳಬೇಕು, ಬೆಳಗಾವಿ ನಗರಕ್ಕೆ ರಿಂಗ್ ರಸ್ತೆ ನಿರ್ಮಾಣವಾಗಬೇಕು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಹೊಸ ಕಟ್ಟಡ ನಿರ್ಮಾಣ ಮಾಡಬೇಕು, ಜಿಲ್ಲಾ ವಿಭಜನೆಗೆ ಕ್ರಮ ಜರುಗಿಸಬೇಕು.
3. ಉತ್ತರ ಕನ್ನಡದಲ್ಲಿ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ ಸ್ಥಾಪನೆಯಾಗಬೇಕು
4. ಹಾವೇರಿಯಲ್ಲಿ ದೊಡ್ಡ ಕೈಗಾರಿಕೆಗಳ ಸ್ಥಾಪನೆಗೆ ಕ್ರಮ ಜರುಗಿಸಬೇಕು
5. ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತ ಪೂರ್ಣಗೊಳಿಸಬೇಕು. ಮುಳುಗಡೆ ಸಂತ್ರಸ್ತರಿಗೆ ಪುನರ್ ವಸತಿ ಕಲ್ಪಿಸಬೇಕು. ಜವಳಿ ಪಾರ್ಕ್ ಆರಂಭಿಸಬೇಕು.
6. ಆಲಮಟ್ಟಿ ಆಣೆಕಟ್ಟೆ ಎತ್ತರ ಹೆಚ್ಚಳ ಮಾಡಬೇಕು, ಜಿಲ್ಲೆಯ ನೀರಾವರಿ ಯೋಜನೆ ಪೂರ್ಣಗೊಳಿಸಬೇಕು.
7. ತುಂಗಭದ್ರಾ ಸಮಾನಾಂತರ ಜಲಾಶಯ ನಿರ್ಮಾಣ ಮಾಡಬೇಕು
8. ವಿಜಯನಗರ ಜಿಲ್ಲೆಯಲ್ಲಿ ಉದ್ಯೋಗಾವಕಾಶಗಳ ಸೃಷ್ಟಿಗೆ ಒತ್ತು ನೀಡಬೇಕು
9. ಗದಗ ಜಿಲ್ಲೆಗೆ ನೀರು ತರುವ ಮಹದಾಯಿ, ಕಳಸಾ ಬಂಡೂರಿ ಯೋಜನೆ ಪೂರ್ಣಗೊಳಿಸಬೇಕು



10. ಕಡಲ್ಕೊರೆತ ತಡೆಗೆ ಪರಿಣಾಮಕಾರಿ ಯೋಜನೆ ಜಾರಿಗೊಳಿಸಬೇಕು
11. ಪ್ರಾಣಿ–ಮಾನವ ಸಂಘರ್ಷ ತಡೆಗೆ ಕ್ರಮ ಕೈಗೊಳ್ಳಬೇಕು
12. ಉಡುಪಿಯ ವಾರಾಹಿ ನೀರಾವರಿ ಯೋಜನೆ ಪೂರ್ಣ ಮತ್ತು ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಪುನಶ್ಚೇತನಗೊಳಿಸಬೇಕು
13. ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತೇಜನ ನೀಡಬೇಕು
14. ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಸಾರಿಗೆ ವ್ಯವಸ್ಥೆಯ ರಾಷ್ಟ್ರೀಕರಣ ಮಾಡಬೇಕು
15. ಮಾನವ–ವನ್ಯಜೀವಿ ಸಂಘರ್ಷಕ್ಕೆ ಶಾಶ್ವತ ತಡೆಗೆ ಯೋಜನೆ ರೂಪಿಸಬೇಕು
16. ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿ ಮಾಡಬೇಕು
17. ಕಾಫಿ ಬೆಳೆಗಾರರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ರೂಪಿಸಬೇಕು
18. ಮೈಸೂರು ಮಹಾನಗರ ಪಾಲಿಕೆ ರಚನೆ ಆಗಬೇಕು
19. ಬೆಂಗಳೂರು- ಮೈಸೂರು ದಶಪಥಕ್ಕೆ ಆಗಮನ- ನಿರ್ಗಮನ ಪಥ ನಿರ್ಮಾಣವಾಗಬೇಕು
20. ಕಲಬುರಗಿ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನವಾಗಬೇಕು. ಜಮೀನುಗಳಿಗೆ ನೀರು ಹರಿಯಬೇಕು
21. ಯಾದಗಿರಿ ಜಿಲ್ಲೆಯ ಹೊಸ ತಾಲ್ಲೂಕುಗಳಿಗೆ ಮೂಲಸೌಕರ್ಯ ಕಲ್ಪಿಸುವುದರ ಜೊತೆಗೆ ಸರ್ಕಾರಿ ಕಚೇರಿಗಳನ್ನು ಆರಂಭಿಸಬೇಕು
22. ಬೀದರ್ ಜಿಲ್ಲೆಯ ಕೈಗಾರಿಕಾ ಪ್ರದೇಶಕ್ಕೆ ಅಗತ್ಯ ಸೌಲಭ್ಯ ಒದಗಿಸಬೇಕು. ಉದ್ಯೋಗಾವಕಾಶ ಸೃಷ್ಟಿಗಾಗಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು
23. ರಾಯಚೂರಿನಲ್ಲೇ ಏಮ್ಸ್ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು. ವಿಮಾನ ನಿಲ್ದಾಣ ಶೀಘ್ರ ನಿರ್ಮಿಸಬೇಕು
24. ಕೊಪ್ಪಳ ಜಿಲ್ಲೆಯಲ್ಲಿ ಕೆರೆ ತುಂಬಿಸುವ ಯೋಜನೆ ಅನುಷ್ಠಾನಗೊಳಿಸಬೇಕು. ಹೊಸ ವಿಶ್ವವಿದ್ಯಾಲಯಕ್ಕೆ ಜಾಗ ನೀಡಬೇಕು
25. ದಾವಣಗೆರೆ, ಚಿತ್ರದುರ್ಗಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕು
26. ದಾವಣಗೆರೆ ಜಿಲ್ಲೆಯಲ್ಲಿ ಕೈಗಾರಿಕಾ ಕಾರಿಡಾರ್ ಆರಂಭವಾಗಬೇಕು
27. ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಗೆ ವೇಗ ನೀಡಬೇಕು
28. ಶರಾವತಿ ಮುಳುಗಡೆ ಸಂತ್ರಸ್ತರ ಸಮಸ್ಯೆ ಬಗೆಹರಿಸಬೇಕು
29. ಮಲೆನಾಡಿನ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು
30. ಕೆ.ಸಿ. ವ್ಯಾಲಿ ಹಾಗೂ ಎಚ್.ಎನ್.ವ್ಯಾಲಿ ನೀರು ಮೂರು ಹಂತದಲ್ಲಿ ಶುದ್ಧೀಕರಣಕ್ಕೆ ಕ್ರಮವಹಿಸಬೇಕು
31. ಮೇಕೆದಾಟು ಅಣೆಕಟ್ಟೆ ನಿರ್ಮಾಣ ಮತ್ತು ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ಜಾರಿ ಮಾಡಬೇಕು
32. ಟೊಮೆಟೊ, ಮಾವು, ಹುಣಸೆ ಸಂಸ್ಕರಣಾ ಘಟಕ ಮತ್ತು ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ಸ್ಥಾಪನೆಯಾಗಬೇಕು
33. ತೆಂಗು ಅಭಿವೃದ್ಧಿ ಪಾರ್ಕ್ ನಿರ್ಮಾಣ ಮಾಡಬೇಕು
34. ತೆಂಗು, ಕೊಬ್ಬರಿ, ಶೇಂಗಾ ಮತ್ತು ರಾಗಿ ಬೆಳೆಗೆ ಪ್ರೋತ್ಸಾಹ ಧನ ನೀಡಬೇಕು

35. ಬೆಂಗಳೂರು ನಗರದ ವಾರ್ಡ್ ರಸ್ತೆಗಳು ಸೇರಿದಂತೆ ಮುಖ್ಯರಸ್ತೆಗಳಲ್ಲಿ ಸುಗಮ ಸಂಚಾರಕ್ಕೆ ಗುಂಡಿಮುಕ್ತ ರಸ್ತೆ, ನಡೆದಾಡಲು ಸಾಧ್ಯವಾಗುವ ಪಾದಚಾರಿ ಮಾರ್ಗ, ನೀರು ಹರಿಯಲು ಅನುವಾಗುವ ಚರಂಡಿಗಳ ವ್ಯವಸ್ಥೆ ಆಗಬೇಕು
36. ಸಂಚಾರ ದಟ್ಟಣೆ ನಿವಾರಣೆಗೆ ಶಾಶ್ವತ ಪರಿಹಾರ ಒದಗಿಸಬೇಕು. ಜಂಕ್ಷನ್‌ಗಳಲ್ಲಿ ದಟ್ಟಣೆ, ಸಿಗ್ನಲ್‌ಗಳಲ್ಲಿ ಹೆಚ್ಚು ಸಮಯ ವ್ಯರ್ಥವಾಗದಂತೆ ಕ್ರಮ ವಹಿಸಬೇಕು
37. ಮಳೆಗಾಲದಲ್ಲಿ ನಗರವನ್ನು ಕಾಡುತ್ತಿರುವ ಜಲಾವೃತ ಸಮಸ್ಯೆ ನಿವಾರಣೆಗೆ ಶಾಶ್ವತ ಕ್ರಮ ವಹಿಸಬೇಕು. ರಾಜಕಾಲುವೆಗಳ ಮರುಸ್ಥಾಪನೆ, ಜೈವಿಕ–ವೈಜ್ಞಾನಿಕವಾಗಿ ಕೆರೆಗಳ ಅಭಿವೃದ್ಧಿಗೆ ಗಮನಹರಿಸಬೇಕು
38. ನಗರದಾದ್ಯಂತ ಮೆಟ್ರೊ ವಿಸ್ತರಣೆ, ಕಾಮಗಾರಿಗೆ ವೇಗಬೇಕು. ಬಿಎಂಟಿಸಿ ಸೇರಿದಂತೆ ಸಾರ್ವಜನಿಕ ಸಾರಿಗೆಗೆ ಒತ್ತು ನೀಡಿ, ಪ್ರತಿಯೊಂದು ಕಿಲೋಮೀಟರ್‌ಗೂ ಸಂಪರ್ಕ ಕಲ್ಪಿಸಬೇಕು
39. ನಗರದ ಮಧ್ಯಭಾಗ ಸೇರಿದಂತೆ ಹೊರವಲಯದಲ್ಲೂ ಕುಡಿಯುವ ನೀರು, ಒಳಚರಂಡಿ ಸಂಪರ್ಕದ ಕೊರತೆ ನೀಗಿಸಬೇಕು. ಗುಣಮಟ್ಟದ ವಿದ್ಯುತ್ ಸರಬರಾಜು ಪೂರೈಸಬೇಕು
40. ಉಪನಗರ ರೈಲು ಸಾರಿಗೆ ತ್ವರಿತಗತಿಯಲ್ಲಿ ಅನುಷ್ಠಾನವಾಗಬೇಕು

- **ಲೋಕಾಯುಕ್ತಕ್ಕೆ ಶಕ್ತಿ ತುಂಬಬೇಕು**
- **ಪ್ರಗತಿಯಲ್ಲಿರುವ ಎಲ್ಲ ನೀರಾವರಿ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು**
- **ನಾಡನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಉಳಿಸಬೇಕು**
- **ಉದ್ಯೋಗ ಸೃಷ್ಟಿಗೆ ಪೂರಕವಾಗುವಂತೆ ಬಂಡವಾಳ ಆಕರ್ಷಣೆ ಹೆಚ್ಚಿಸಬೇಕು**
- **ಬ್ರ್ಯಾಂಡ್ ಕರ್ನಾಟಕದ ಮೆರುಗು ಹೆಚ್ಚಿಸಬೇಕು**
- **ಮಕ್ಕಳ ಅಪೌಷ್ಟಿಕತೆಯನ್ನು ತೊಲಗಿಸಲು ಆದ್ಯತೆ ನೀಡಬೇಕು**
- **ಸರ್ಕಾರಿ ನೇಮಕಾತಿಗಳಲ್ಲಿ ಸಂಪೂರ್ಣ ಪಾರದರ್ಶಕತೆ ತರಬೇಕು**
- **ಕನ್ನಡ ಅಸ್ಮಿತೆಗೆ ಇರುವ ತೊಡಕುಗಳನ್ನು ನಿವಾರಿಸಬೇಕು**
- **ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ದೊರಕಿಸಬೇಕು**
- **ಸರ್ಕಾರಿ ಶಾಲೆಗಳೇ ನಮ್ಮ ಹೆಮ್ಮೆಯಾಗುವಂತೆ ರೂಪಿಸಬೇಕು**

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,129
ಇಂದಿನ ಅಂತ್ಯ	18,203
▲	74
ದಿನದ ಗರಿಷ್ಠ	18,218

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹520
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹525

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1625)
ಸೋಯಾ (ರಿಫೈನ್ಡ್)	₹915 (917)
ಸೂರ್ಯಕಾಂತಿ (ರಿಫೈನ್ಡ್)	₹945 (950)
ಪಾಮೋಲಿನ್	₹893 (890)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹157
ಆರ್‌ಎಸ್‌ಎಸ್-5 ₹151
ಗುಡ್ ಲಾಟ್ ₹133
(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹800-1000
ಮಧ್ಯಮ	₹500-800
ಸಣ್ಣ	₹300-500

ಜೋಯಾಲುಕ್ಕಾಸ್: ತಯಾರಿಕಾ ಶುಲ್ಕದಲ್ಲಿ ಶೇ 50 ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಯಾಲುಕ್ಕಾಸ್ ಕಂಪನಿಯು ಈ ವರ್ಷದ ಬೃಹತ್ ಆಭರಣ ಉತ್ಸವದ ಕೊಡುಗೆಯ ಭಾಗವಾಗಿ ತನ್ನೆಲ್ಲಾ ಮಳಿಗೆಗಳಲ್ಲಿ ತಯಾರಿಕಾ ಶುಲ್ಕದ ಮೇಲೆ ಶೇ 50ರಷ್ಟು ರಿಯಾಯಿತಿ ನೀಡುತ್ತಿದೆ. ಈ ಕೊಡುಗೆಯು ಇದೇ 12ರಂದು ಆರಂಭ ಆಗಿದ್ದು ಜೂನ್ 11ರವರೆಗೆ ಜಾರಿಯಲ್ಲಿ ಇರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಜೋಯಾಲುಕ್ಕಾಸ್‌ನಿಂದ ಖರೀದಿಸುವ ಎಲ್ಲಾ ಆಭರಣಗಳಿಗೆ ಜೀವಿತಾವಧಿಯವರೆಗೆ ನಿರ್ವಹಣೆ, ಒಂದು ವರ್ಷದ ಉಚಿತ ವಿಮೆ ಹಾಗೂ ಬೈಬ್ಯಾಕ್ ಖಾತರಿಯು ಸಿಗಲಿದೆ.

ಗ್ರಾಹಕರ ಪ್ರತಿಯೊಂದು ಅಗತ್ಯವನ್ನೂ ಪೂರೈಸಲು ಉತ್ತಮ ಮತ್ತು ವಿಸ್ತಾರವಾದ ಆಯ್ಕೆಗಳಿರುವ ಶ್ರೇಣಿಯ ಆಭರಣಗಳನ್ನು ಒದಗಿಸುವ ಗುರಿಯನ್ನು ಹೊಂದಿದ್ದೇವೆ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಅಲುಕ್ಕಾಸ್ ತಿಳಿಸಿದ್ದಾರೆ.

₹2 ಸಾವಿರ ನೋಟು ಚಲಾವಣೆಗೆ ಬ್ರೇಕ್

ಒಂದನೇ ಪುಟದಿಂದ

₹500 ಮತ್ತು ₹1,000 ಮುಖಬೆಲೆಯ ನೋಟುಗಳನ್ನು ರದ್ದು ಮಾಡಿದ್ದರಿಂದ ದೇಶದಲ್ಲಿ ಕರೆನ್ಸಿ ಅಗತ್ಯವನ್ನು ಪೂರೈಸಲು 2016ರ ನವೆಂಬರ್‌ನಲ್ಲಿ ₹2 ಸಾವಿರದ ನೋಟನ್ನು ಪರಿಚಯಿಸಲಾಯಿತು. ಇತರ ಮುಖಬೆಲೆಯ ನೋಟುಗಳು ಅಗತ್ಯ ಪ್ರಮಾಣದಲ್ಲಿ ಲಭ್ಯ ಇವೆ. ಹೀಗಾಗಿ, ₹2 ಸಾವಿರ ಮುಖಬೆಲೆಯ ನೋಟುಗಳು ಚಲಾವಣೆಯಲ್ಲಿ ಇರುವ ಅಗತ್ಯ ಇಲ್ಲ ಎಂದು ಆರ್‌ಬಿಐ ತಿಳಿಸಿದೆ.

ಬ್ಯಾಂಕಿಂಗ್ ಸೌಲಭ್ಯ ಇಲ್ಲದ ಕಡೆಗಳಲ್ಲಿ ಬ್ಯಾಂಕ್‌ಗಳು ಮೊಬೈಲ್ ವ್ಯಾನ್ ಸೌಲಭ್ಯ ಕಲ್ಪಿಸಬಹುದು ಗ್ರಾಹಕರಿಗೆ ಬ್ಯಾಂಕಿಂಗ್ ಸೇವೆ ನೀಡುವ ಪ್ರತಿನಿಧಿಗಳು ದಿನಕ್ಕೆ ₹ 4 ಸಾವಿರದವರೆಗೆ ಬೇರೆ ನೋಟಿನೊಂದಿಗೆ ಬದಲಾಯಿಸಿಕೊಳ್ಳಬಹುದು. ಬ್ಯಾಂಕ್‌ಗಳು ತಮ್ಮ ವಿವೇಚನೆ ಬಳಸಿ ಮಿತಿಯನ್ನು ಹೆಚ್ಚಿಸಬಹುದು ಎಂದು ಹೇಳಿದೆ

ಅಂಕಿ-ಅಂಶಗಳು

₹6.73 ಲಕ್ಷ ಕೋಟಿ
2018ರ ಮಾರ್ಚ್ 31ರ ವೇಳೆಗೆ ಚಲಾವಣೆಯಲ್ಲಿ ಇದ್ದ ನೋಟುಗಳ ಒಟ್ಟು ಮೌಲ್ಯ

₹3.62 ಲಕ್ಷ ಕೋಟಿ
2023ರ ಮಾರ್ಚ್ 31ರ ವೇಳೆಗೆ ಚಲಾವಣೆಯಲ್ಲಿ ಇದ್ದ ನೋಟುಗಳ ಮೌಲ್ಯ

‘ವರ್ಷದ ಹಿಂದೆಯೇ ಸೂಚನೆ ಸಿಕ್ಕಿತ್ತು’

ಬೆಂಗಳೂರು: ₹2 ಸಾವಿರ ಮುಖಬೆಲೆಯ ನೋಟನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ಬಗ್ಗೆ ವರ್ಷದ ಹಿಂದೆಯೇ ಸೂಚನೆ ಸಿಕ್ಕಿತ್ತು ಎಂದು ಬ್ಯಾಂಕ್‌ನ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಗ್ರಾಹಕರಿಗೆ ₹2 ಸಾವಿರದ ನೋಟನ್ನು ನೀಡದಂತೆ ಮತ್ತು ಒಮ್ಮೆ ಜಮಾ ಆದ ನೋಟನ್ನು ಮತ್ತೆ ಯಾರಿಗೂ ವಿತರಿಸದಂತೆ ಬ್ಯಾಂಕ್‌ಗಳ ಕೇಂದ್ರ ಕಚೇರಿಗಳಿಗೆ ಮೌಖಿಕ ಆದೇಶ ಬಂದಿತ್ತು. ಹೀಗಾಗಿ ಬ್ಯಾಂಕ್ ಶಾಖೆಗಳಿಗೆ ಬಂದ ನೋಟನ್ನು ಕರೆನ್ಸಿ ಚೆಸ್ಟ್‌ಗಳಿಗೆ ರವಾನಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

ಕೇಂದ್ರಕ್ಕೆ ₹87,416 ಕೋಟಿ ಲಾಭಾಂಶ: ಆರ್‌ಬಿಐ

2021–22ರಲ್ಲಿ ನೀಡಿದ್ದಕ್ಕಿಂತಲೂ ಮೂರು ಪಟ್ಟು ಹೆಚ್ಚಳ

ಮುಂಬೈ (ಪಿಟಿಐ): 2022-23ರಲ್ಲಿ ಕೇಂದ್ರ ಸರ್ಕಾರಕ್ಕೆ ₹87,416 ಕೋಟಿ ಲಾಭಾಂಶ ಪಾವತಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಒಪ್ಪಿಗೆ ನೀಡಿದೆ.

2021-22ರಲ್ಲಿ ಆರ್‌ಬಿಐ ಲಾಭಾಂಶದ ರೂಪದಲ್ಲಿ ₹30,307 ಕೋಟಿ ಆರ್‌ಬಿಐ ಸರ್ಕಾರಕ್ಕೆ ನೀಡಿತ್ತು. ಈ ಮೊತ್ತಕ್ಕೆ ಹೋಲಿಸಿದರೆ 2022-23ರಲ್ಲಿ ನೀಡುವ ಮೊತ್ತದಲ್ಲಿ ಸುಮಾರು ಮೂರು ಪಟ್ಟು ಏರಿಕೆ ಕಂಡುಬಂದಿದೆ.

ಕೇಂದ್ರ ಸರ್ಕಾರವು ಆರ್‌ಬಿಐ ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಂದ 2022-23ನೇ ಹಣಕಾಸು ವರ್ಷಕ್ಕೆ ₹48 ಸಾವಿರ ಕೋಟಿ ಲಾಭಾಂಶ ಬರುವ ಅಂದಾಜನ್ನು ಬಜೆಟ್‌ನಲ್ಲಿ ಮಾಡಿತ್ತು.

ಹೆಚ್ಚಿನ ಪ್ರಮಾಣದಲ್ಲಿ ಡಾಲರ್ ಅನ್ನು ಮಾರಾಟ ಮಾಡಿದ್ದರಿಂದ ಆರ್‌ಬಿಐ ಲಾಭ ಗಳಿಸಿದೆ. ಅಲ್ಲದೆ, ಟ್ರಷರಿಯಿಂದ ಹೆಚ್ಚಿನ ಬಡ್ಡಿ ವರಮಾನ ಬಂದಿರುವ ಕಾರಣಗಳಿಂದಾಗಿ ಆರ್‌ಬಿಐ ನೀಡುವ ಲಾಭಾಂಶವು ಬಜೆಟ್ ಅಂದಾಜನ್ನೂ ಮೀರಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಕೇಂದ್ರಕ್ಕೆ ಲಾಭಾಂಶ (ಕೋಟಿಗಳಲ್ಲಿ)



2022–23ನೇ ಹಣಕಾಸು ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ₹ 1 ಲಕ್ಷಕ್ಕೂ ಅಧಿಕ ಲಾಭ ಗಳಿಸುವುದರಿಂದ ಸರ್ಕಾರಕ್ಕೆ ಬ್ಯಾಂಕ್‌ಗಳಿಂದ ಬರಲಿರುವ ಲಾಭಾಂಶವು ಹೆಚ್ಚಿನ ಪ್ರಮಾಣದಲ್ಲಿಯೇ ಇರುವ ಸಾಧ್ಯತೆ ಇದೆ.

2021-22ರಲ್ಲಿ ಕೇಂದ್ರ ಸರ್ಕಾರವು ಆರ್‌ಬಿಐ ಮತ್ತು ಸರ್ಕಾರಿ ಬ್ಯಾಂಕ್‌ಗಳಿಂದ ₹40,953 ಕೋಟಿ ಲಾಭಾಂಶ ಪಡೆದಿತ್ತು. 2022-23ಕ್ಕೆ ಬಜೆಟ್ ಅಂದಾಜು ₹73,948 ಕೋಟಿಗಿಂತಲೂ ಇದು ತೀರಾ ಕಡಿಮೆ ಆಗಿದೆ.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದಲ್ಲಿ ನಡೆದ ನಿರ್ದೇಶಕ ಮಂಡಳಿ ಸಭೆಯಲ್ಲಿ ಲಾಭಾಂಶ ನೀಡುವ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಜಾಗತಿಕ ಮತ್ತು ದೇಶದ ಆರ್ಥಿಕ ಸ್ಥಿತಿ, ಸವಾಲುಗಳು ಮತ್ತು ಸದ್ಯದ ಜಾಗತಿಕ ರಾಜಕೀಯ ಬೆಳವಣಿಗೆಗಳ ಪರಿಣಾಮಗಳ ಕುರಿತೂ ಸಭೆಯಲ್ಲಿ ಚರ್ಚಿಸಲಾಯಿತು.

₹ 7 ಸಾವಿರ ಕೋಟಿ ಸಾಲ ಪಡೆಯಲಿದೆ ಗೇಲ್

ಮುಂಬೈ (ಪಿಟಿಐ): ಗೇಲ್ ಇಂಡಿಯಾ ಕಂಪನಿಯು ಪ್ರಸಕ್ತ ಹಣಕಾಸು ವರ್ಷದಲ್ಲಿ ₹10 ಸಾವಿರ ಕೋಟಿ ಬಂಡವಾಳ ವೆಚ್ಚ ಮಾಡುವ ಯೋಜನೆ ಹೊಂದಿದ್ದು, ಅದಕ್ಕಾಗಿ ಮಾರುಕಟ್ಟೆಯಿಂದ ₹7 ಸಾವಿರ ಕೋಟಿಯವರೆಗೆ ಸಾಲ ಪಡೆಯುವ ಆಲೋಚನೆ ಹೊಂದಿದೆ ಎಂದು ಕಂಪನಿಯ ಅಧ್ಯಕ್ಷ ಎಸ್.ಕೆ. ಗುಪ್ತಾ ಹೇಳಿದ್ದಾರೆ.

2022–23ನೇ ಹಣಕಾಸು ವರ್ಷವು ಆಂತರಿಕ ಸಂಪನ್ಮೂಲ ಸೃಷ್ಟಿಗೆ ಉತ್ತಮ ಆಗಿರದೇ ಇದ್ದರು ಸಹ ₹ 9,100 ಕೋಟಿ ಹೂಡಿಕೆ ಮಾಡಲಾಗಿದೆ. ಈ ಮೊತ್ತವು ಅಂದಾಜು ಮಾಡಿದ್ದಕ್ಕಿಂತಲೂ ಶೇ 15ರಷ್ಟು ಹೆಚ್ಚಿನದ್ದಾಗಿದೆ ಎಂದು ಅವರು ತಿಳಿಸಿದ್ದಾರೆ.

ಆಂತರಿಕವಾಗಿ ಸಂಪನ್ಮೂಲ ಸೃಷ್ಟಿಸಿಕೊಳ್ಳಲು ಪ್ರಸಕ್ತ ಹಣಕಾಸು ವರ್ಷವು ಉತ್ತಮವಾಗಿರುವ ವಿಶ್ವಾಸ ಇದೆ. ಹೀಗಾಗಿ ಬಂಡವಾಳ ವೆಚ್ಚದ ಗುರಿಗೆ ಅನುಗುಣವಾಗಿ ನಡೆಯುವುದರಲ್ಲಿ ಯಾವುದೇ ಸಮಸ್ಯೆ ಎದುರಾಗಲಾರದು ಎಂದಿದ್ದಾರೆ.

ಮುಂಬೈ ಧಾರಣೆ

ಶೇಂಗಾ

19–5–2023

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12200-12300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1635)
ಒಂದು ವಾರದ ಡೆಲಿವರಿ	1625 (1630)
ಸೋಯಾ ಕಚ್ಚಾ	860 (855)
ಪಾಮ್ ವಾರದ ಡೆಲಿವರಿ	891 (888)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (865)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60000 (60100)
ಬೆಳ್ಳಿ ಕೆ.ಜಿ 71800 (71450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	- 470

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	29999-33339
ಕೋಕ	20109-31019
ಹಳೆಚಾಲಿ	36709-40099
ಹೊಸಚಾಲಿ	36000-37699
ಶಿವಮೊಗ್ಗ	
ಬೆಟ್ಟೆ	45000-53330
ಗೊರಬಲು	18100-35050
ರಾಶಿ	36216-48099
ಸರಕು	54169-80696
ಸಿದ್ದಾಪುರ	
ಬಿಳಿಗೋಟು	28889-32399
ಚಾಲಿ	35399-37499
ಕೋಕ	26809-32699
ಕೆಂಪುಗೋಟು	27119-32199
ರಾಶಿ	42669-46809
ತಟ್ಟಿಬೆಟ್ಟೆ	39099-44099
ಶಿರಸಿ	
ಬೆಟ್ಟೆ	37319-43399
ಬಿಳಿಗೋಟು	24999-33699
ಚಾಲಿ	34499-38309
ಕೆಂಪುಗೋಟು	28139-36709
ರಾಶಿ	41969-46499
ಯಲ್ಲಾಪುರ	
ಬಿಳಿಗೋಟು	26069-34000
ಚಾಲಿ	34412-38578
ಕೋಕ	18601-31299
ಕೆಂಪುಗೋಟು	28899-35499
ರಾಶಿ	41760-50699
ತಟ್ಟಿಬೆಟ್ಟೆ	36509-47499

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15250	15200	15300	186.65 ಸೆಂಟ್ಸ್
ಎಸಿ	7980	7700	7700	
ಆರ್‌ಪಿ	10400	10750	10550	ಲಂಡನ್
ಆರ್‌ಸಿ	5925	234 on OT	5750	2540 ಡಾಲರ್ಸ್

ಸುದ್ದಿ 2 ನಿಮಿಷ

‘ಷೇರುಪೇಟೆಯಲ್ಲಿ ಸಂಶಯಾಸ್ಪದ ವಹಿವಾಟು ತಡೆಗೆ ಬಿಗಿ ನಿಯಮ’

ಮುಂಬೈ (ರಾಯಿಟರ್ಸ್): ದೇಶದ ಷೇರುಪೇಟೆಗಳಲ್ಲಿ ಸಂಶಯಾಸ್ಪದ ವಹಿವಾಟು ತಡೆಯಲು ನಿಯಮಗಳನ್ನು ಇನ್ನಷ್ಟು ಬಲಪಡಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮುಂದಾಗಿದೆ.

ಕಂಪನಿಗೆ ಸಂಬಂಧಿಸಿದ ಸೂಕ್ಷ್ಮವಾದ ಮಾಹಿತಿಗಳನ್ನು ಬಹಿರಂಗಪಡಿಸುವುದು, ಷೇರು ದರಗಳನ್ನು ಅಕ್ರಮವಾಗಿ ಏರಿಳಿತ ಮಾಡಿರುವುದು ಸೇರಿದಂತೆ ಇನ್ನಿತರ ಸಂಶಯಾಸ್ಪದ ವಹಿವಾಟುಗಳನ್ನು ತಡೆಯಲು ನಿಯಮಗಳನ್ನು ಇನ್ನಷ್ಟು ಬಿಗಿಗೊಳಿಸುವುದಾಗಿ ಶುಕ್ರವಾರ ಬಿಡುಗಡೆ ಮಾಡಿರುವ ಸಮಾಲೋಚನಾ ಪತ್ರದಲ್ಲಿ ತಿಳಿಸಿದೆ.



ಹೊಸ ತಂತ್ರಜ್ಞಾನ ಬಳಸಿಕೊಂಡು ಮಾರುಕಟ್ಟೆಯಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆಸುವುದನ್ನು ನಿಯಂತ್ರಿಸಲು ಇದು ನೆರವಾಗುತ್ತದೆ.

ಅಸಹಜ ವಹಿವಾಟುಗಳ ಆಧಾರದ ಮೇಲೆ ತನಿಖೆ ಆರಂಭಿಸುವುದಾಗಿ ಸೆಬಿ ಹೇಳಿದೆ. ಈ ರೀತಿಯ ಅಸಹಜ ವಹಿವಾಟಿನಲ್ಲಿ ತೊಡಗಿಕೊಂಡಿರುವವರು ದಂಡ ಅಥವಾ ಕಠಿಣ ಕ್ರಮದಿಂದ ತಪ್ಪಿಸಿಕೊಳ್ಳಲು ಸೂಕ್ತವಾದ ವಿವರಣೆಯನ್ನು ನೀಡಬೇಕಾಗುತ್ತದೆ.

ವ್ಯಕ್ತಿ ಅಥವಾ ಸಂಪರ್ಕಿತ ವ್ಯಕ್ತಿಗಳ ಗುಂಪು ಷೇರುಪೇಟೆಯಲ್ಲಿ ವಹಿವಾಟು ನಡೆಸುವಾಗ ವಹಿವಾಟಿನ ಒಂದು ನಿರ್ದಿಷ್ಟ ಮಾದರಿಯನ್ನು ಪುನರಾರ್ತನೆ ಮಾಡುತ್ತಿದ್ದರೆ ಅದನ್ನು ಅಸಹಜ ವಹಿವಾಟಿನ ಮಾದರಿ ಎಂದು ಸಮಾಲೋಚನಾ ಪತ್ರದಲ್ಲಿ ತಿಳಿಸಿದೆ.

ವಿದೇಶಿ ವಿನಿಮಯ ಮೀಸಲು ₹29,110 ಕೋಟಿ ಹೆಚ್ಚಳ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಮೇ 12ಕ್ಕೆ ಕೊನೆಗೊಂಡ ವಾರದಲ್ಲಿ ₹29,110 ಕೋಟಿ ಹೆಚ್ಚಾಗಿ ₹49.16 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಹೇಳಿದೆ.

ಅದಕ್ಕೂ ಹಿಂದಿನ ವಾರದಲ್ಲಿ ಮೀಸಲು ಸಂಗ್ರಹವು ₹48.87 ಲಕ್ಷ ಕೋಟಿಗೆ ತಲುಪಿತ್ತು.

ಮೀಸಲು ಸಂಗ್ರಹದಲ್ಲಿ ಹೆಚ್ಚಿನ ಪಾಲು ಹೊಂದಿರುವ ವಿದೇಶಿ ಕರೆನ್ಸಿಗಳ ಸಂಗ್ರಹವು ₹29,274 ಕೋಟಿಯಷ್ಟು ಹೆಚ್ಚಾಗಿ ₹43.42 ಲಕ್ಷ ಕೋಟಿಗೆ ತಲುಪಿದೆ ಎಂದು ಆರ್‌ಬಿಐ ತಿಳಿಸಿದೆ.

ಚಿನ್ನದ ಮೀಸಲು ಸಂಗ್ರಹ ₹314 ಕೋಟಿ ಹೆಚ್ಚಾಗಿ ₹3.80 ಲಕ್ಷ ಕೋಟಿಗೆ ತಲುಪಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹231 ಕೋಟಿಯಷ್ಟು ಕಡಿಮೆ ಆಗಿ ₹42,312 ಕೋಟಿಯಷ್ಟಾಗಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್ ನಿವ್ವಳ ಲಾಭ ₹1,159 ಕೋಟಿ

ನವದೆಹಲಿ (ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ (ಪಿಎನ್‌ಬಿ) ನಿವ್ವಳ ಲಾಭವು 2023ರ ಮಾರ್ಚ್ ತ್ರೈಮಾಸಿಕದಲ್ಲಿ ಐದು ಪಟ್ಟು ಹೆಚ್ಚಾಗಿ ₹1,159 ಕೋಟಿಗೆ ಏರಿಕೆ ಕಂಡಿದೆ.

ಸುಸ್ತಿ ಸಾಲದ ಪ್ರಮಾಣ ಕಡಿಮೆ ಆಗಿರುವುದು ಹಾಗೂ ಬಡ್ಡಿ ವರಮಾನ ಹೆಚ್ಚಾಗಿರುವುದೇ ಲಾಭದಲ್ಲಿ ಈ ಪ್ರಮಾಣದ ಏರಿಕೆಗೆ ಕಾರಣ ಎಂದು ಬ್ಯಾಂಕ್ ತಿಳಿಸಿದೆ. 2022ರ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಲಾಭ ₹202 ಕೋಟಿ ಇತ್ತು.

ಬ್ಯಾಂಕ್‌ನ ಒಟ್ಟು ವರಮಾನವು ₹21,095 ಕೋಟಿಯಿಂದ ₹27,269 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಬಡ್ಡಿ ವರಮಾನ ₹18,645 ಕೋಟಿಯಿಂದ ₹23,849 ಕೋಟಿಗೆ ಏರಿಕೆಯಾಗಿದೆ. ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣ ಶೇ 11.78 ರಿಂದ ಶೇ 8.74ಕ್ಕೆ ಇಳಿಕೆ ಕಂಡಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

50 ಎಕರೆ ಜಮೀನಿಗೆ ಫಾರಂ/ ಅಗ್ರಿಕಲ್ಚರಲ್ ಸೂಪರ್‌ವೈಸರ್ ಬೇಕಾಗಿದ್ದಾರೆ. ವೇತನರೂ. 18000/- ಉಚಿತ ವಸತಿಸೌಲಭ್ಯ. ಬಿಎಸ್ಸಿ ಅಗ್ರಿ ಅಥವಾ ಅನುಭವಿ ಅಭ್ಯರ್ಥಿಗಳು ಸಂಪರ್ಕಿಸಿ: 9108270569

Teachers/ Professors

WANTED TEACHERS for High School English, Primary, Office Staff. 9916443317 9845634537.

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ.ಕೊರಿಯರ್ ಇದೆ. 8050064329, 8050064330.

Multiple Vacancy

ನೇರ ನೇಮಕಾತಿ A Leading Construction Material Testing Laboratory "Structwel Designers & Consultants Pvt. Ltd", ಪೀಣ್ಯ ಕೈಗಾರಿಕಾ ಎಸ್ಟೇಟ್‌ನಲ್ಲಿ ಕೆಳಗಿನ ಖಾಲಿ ಹುದ್ದೆಗಳಿಗೆ ನೇಮಕಾತಿ TECHNICIAN DCE/ ITI ಶಿಕ್ಷಣದೊಂದಿಗೆ ಕನಿಷ್ಠ 2 4 ವರ್ಷಗಳ ಅನುಭವ ಹೊಂದಿರಬೇಕು. DATA ENTRY OPERATOR ಯಾವುದೇ ಪದವಿಯೊಂದಿಗೆ ಕನಿಷ್ಠ 24 ವರ್ಷಗಳ ಅನುಭವ ಜೊತೆಗೆ ಕಂಪ್ಯೂಟರ್ ಕಾರ್ಯಾಚರಣೆಯ ಜ್ಞಾನವನ್ನು ಹೊಂದಿರಬೇಕು. SALES & RECOVERY ಯಾವುದೇ ಪದವಿಯೊಂದಿಗೆ ಕನಿಷ್ಠ 2 4 ವರ್ಷಗಳ ಅನುಭವ. ಸಂಪರ್ಕಿಸಿ: 7676344002, shalini.shetty@structwel.com

Wanted

ಆಂಧ್ರಪ್ರದೇಶ ಪ್ರೊಡಕ್ಟಿವಿಟಿ ಕೌನ್ಸಿಲ್, ಹೈದರಾಬಾದ್ ಇವರು, ಐಟಿಐ ವಿದ್ಯಾರ್ಹತೆಯುಳ್ಳ (ಇಲೆಕ್ಟ್ರಾನಿಕ್ಸ್, ಫಿಟ್ಟರ್ಸ್, ವೆಲ್ಡರ್ಸ್) ಕನಿಷ್ಠ ಒಂದರಿಂದ ನಾಲ್ಕು ವರ್ಷ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ, ಹೈದರಾಬಾದ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಪ್ರತಿಷ್ಠಿತ ಉತ್ಪಾದನಾ ಕೈಗಾರಿಕೆಗಳಲ್ಲಿ ಉದ್ಯೋಗ ಅವಕಾಶಗಳನ್ನು ಒದಗಿಸುತ್ತಿದ್ದಾರೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಅನುಭವದ ವಿವರಗಳನ್ನು ಹೊಂದಿರುವ ರೆಸ್ಯೂಮ್‌ನ್ನು appchyd@gmail.com ವಿಳಾಸಕ್ಕೆ ಇಮೇಲ್ ಮಾಡಬಹುದು ಅಥವಾ ವಿವರಗಳಿಗಾಗಿ 9000212019 ಸಂಖ್ಯೆಗೆ ಕರೆ ಮಾಡಬಹುದು.

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. 12,000–15,000 ಸಂಬಳ. ಊಟ ವಸತಿ ಉಚಿತ. ಸಂಪರ್ಕಿಸಿರಿ: 9036776032 ಮಂಗಳೂರು.

ಬೇಕಾಗಿದ್ದಾರೆ

ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು SSLC ಉತ್ತೀರ್ಣರಾಗಿರುವ ಅಭ್ಯರ್ಥಿಗಳು KSIC ಘಟಕಗಳಾದ ಮೈಸೂರು ಮತ್ತು ರಾಮನಗರ ಜಿಲ್ಲೆಗೆ ಬೇಕಾಗಿದ್ದಾರೆ.
ಉತ್ತಮ ವೇತನ ಮತ್ತು ಇಎಸ್‌ಐ, ಇಪಿಎಫ್ ಸೌಲಭ್ಯಗಳಿರುತ್ತದೆ.
ಆಸಕ್ತರು ಬಯೋಡೇಟಾವನ್ನು ಈ ಕೆಳಗಿನ ಅಂಚೆ ಪೆಟ್ಟಿಗೆಗೆ 10 ದಿನಗಳೊಳಗಾಗಿ ಕಳುಹಿಸುವುದು.
P.O. Box No.: JA353, ಪ್ರಜಾವಾಣಿ, ಎಂ.ಜಿ. ರಸ್ತೆ, ಬೆಂಗಳೂರು–560001

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business Offers

Business For Sale

ರೈತರಿಗೆ ಸುವರ್ಣ ಅವಕಾಶ ಸಮರ್ಥ್ ಸಾವಯವ ಗೊಬ್ಬರ ಫ್ಯಾಕ್ಟರಿ ಇಂದ ನೇರ ಮಾರಾಟ ಕೇವಲ 199/- per bag cont. 9686192009

ಭವಿಷ್ಯ

Astrology

ನಂ.1 ವಶೀಕರಣ ಸ್ಪೆಷಲಿಸ್ಟ್, ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀಪುರುಷ ವಶೀಕರಣ, ಶತ್ರುಕಾಟ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 9844174018

ಪ್ರವಾಸ

Travel

1.6.2023 ದೆಹಲಿ, ವೈಷ್ಣೋದೇವಿ, ಅಮೃತ್‌ಸರ್, ಹರಿದ್ವಾರ, ಅಯೋಧ್ಯಾ,ಕಾಶಿ, 11.6.2023ಯಮುನೋತ್ರಿ, ಗಂಗೋತ್ರಿ,ಕೇದಾರನಾಥ್, ಬದ್ರಿನಾಥ್. 12.6.2023 ಚಿತ್ರಕೂಟ,ನೈಮಿಶಾರಣ್ಯ, ಅಯೋಧ್ಯಾ, ಕಾಶಿ,ಗಯಾ 29.6.2023 ಅಮರ್‌ನಾಥ್ ಯಾತ್ರಾ ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9482435755, 9845035349

25/05/2023`ಮತ್ತು 01/06/2023ರಿಂದ ಚಾರುಧಾಮ್`,ಹರಿದ್ವಾರ, ಮಸ್ಸೂರಿ`-12ದಿನ.`ಕಾಶಿ,ಗಯಾ, ನೈಮಿಷಾರಣ್ಯ`-9 ದಿನ`ಮುಕ್ತಿನಾಥ ಜನಕಪುರಿ,ಕಾಶಿ,ಪೋಕ್ರಾ`-16ದಿನ. 30/06/2023ರಿಂದ ಅಮರ ನಾಥ್`ಯಾತ್ರೆ`-9/12ದಿನ. ವಿಮಾನ/AC`ಬಸ್ಸಿನಲ್ಲಿ ಏಷ್ಯನ್`ಟ್ರಾವೆಲ್`ಲೈನ್ಸ್. 8105657052/ 9480182865

18 ದಿನಗಳ ಯುಕೆ ಯುರೋಪ್ ಪ್ರವಾಸ ಹತ್ತು ದೇಶಗಳು, ವಿಮಾನದರ,ವೀಸ,ವಸತಿ, ಊಟ,gst,ವಿಮೆ, ಪ್ರವಾಸ ಕೋಚ್, ಪ್ರೇಕ್ಷಣೀಯ ಸ್ಥಳಗಳು ಎಲ್ಲಾ ಸೇರಿರುತ್ತದೆ.ಹೊರಡುವ ದಿನ 26.07.2023. ಹಾಗೂ ಇತರೆ ಪ್ರವಾಸ. ಬುಕ್ಕಿಂಗ್‌ಗಳಿಗಾಗಿ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9880079644, 9900080791

19.06.2023 13/16 ದಿನಗಳು ಕಾಶಿ,ನೇಪಾಳ,ಮುಕ್ತಿನಾಥ ಪ್ರವಾಸ.,15.08.2023 14/10 ದಿನಗಳು ಗುಜರಾತ್ ಉಜ್ಜೈನ್ ಓಂಕಾರ್ ಪ್ರವಾಸ., ಆರ್.ಗಾಂಧಿ ಟೂರ್ಸ್(ರಿ) 9945445809/ 9902433500

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 22/06 ಚಾರ್ಧಾಮ್, ಕೇದಾರನಾಥ, ಬದ್ರಿನಾಥ್. 01/06 ಗುರುವಾಯೂರು, ಕೊಚ್ಚಿನ್, ಆಲ್ಲೆಪ್ಪಿ. 22/06 ಕಾಶಿ ಪ್ರವಾಸ. 9964527782, 9591017782

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಲ್ಮಾನ್ ರಶ್ದಿಗೆ ‘ಪೆನ್ ಸೆಂಟನರಿ ಕರೇಜ್ ಪ್ರಶಸ್ತಿ’ಯ ಗೌರವ

ನ್ಯೂಯಾರ್ಕ್ (ಪಿಟಿಐ): ಖ್ಯಾತ ಲೇಖಕ ಸಲ್ಮಾನ್ ರಶ್ದಿ ಅವರಿಗೆ ಗುರುವಾರ ರಾತ್ರಿ ಪ್ರತಿಷ್ಠಿತ ‘ಪೆನ್ ಸೆಂಟನರಿ ಕರೇಜ್ ಪ್ರಶಸ್ತಿ’ ನೀಡಿ ಗೌರವಿಸಲಾಗಿದೆ.

75 ವರ್ಷದ ರಶ್ದಿ ಅವರಿಗೆ, ನ್ಯೂಯಾರ್ಕ್‌ನ ಮ್ಯಾನ್‌ಹಟ್ಟನ್‌ನಲ್ಲಿರುವ ‘ಅಮೆರಿಕನ್ ಮ್ಯೂಸಿಯಮ್ ಆಫ್ ನ್ಯಾಚುರಲ್ ಹಿಸ್ಟರಿ’ಯಲ್ಲಿ ನಡೆದ ‘2023ರ ಲಿಟರರಿ ಗಾಲಾ’ ಸಮಾರಂಭದಲ್ಲಿ ಈ ಪ್ರಶಸ್ತಿ ನೀಡಲಾಯಿತು.

ಕಳೆದ ವರ್ಷ ಸಾಹಿತ್ಯ ಸಮಾರಂಭವೊಂದರಲ್ಲಿ ಚಾಕು ಇರಿತಕ್ಕೆ ಒಳಗಾಗಿದ್ದ ರಶ್ದಿ ಅವರು, ಗುಣಮುಖರಾದ ಬಳಿಕ ಕಾಣಿಸಿಕೊಂಡ ಮೊದಲ ಸಾರ್ವಜನಿಕ ಸಮಾರಂಭ ಇದಾಗಿದೆ.

ಸಮಾರಂಭಲ್ಲಿ ಪಾಲ್ಗೊಂಡಿದ್ದ ವೀಕ್ಷಕರು ರಶ್ದಿ ಅವರಿಗೆ ಎದ್ದು ನಿಂತು ಗೌರವ ಸೂಚಿಸಿದರು. ಆ ಬಳಿಕ ಮಾತನಾಡಿದ ಅವರು, ‘ಪೆನ್ (ಕವಿಗಳು, ಪ್ರಬಂಧಕಾರರು ಮತ್ತು ಕಾದಂಬರಿಕಾರರ) ಗುಂಪಿನೊಂದಿಗೆ ನಾನು ದೀರ್ಘಕಾಲದ ನಂಟು ಹೊಂದಿದ್ದೇನೆ. ಇಲ್ಲಿ ನೆರೆದಿರುವ ಬರಹಗಾರರು ಹಾಗೂ ಪುಸ್ತಕ ಪ್ರೇಮಿಗಳ ನಡುವೆ ನಾನು ಮತ್ತೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದು ಖುಷಿ ನೀಡಿದೆ’ ಎಂದರು.



ಸಲ್ಮಾನ್ ರಶ್ದಿ

2022ರ ಆಗಸ್ಟ್ 12ರಂದು ನ್ಯೂಯಾರ್ಕ್‌ನ ಷಟೌಕ್ವಾ ಇನ್‌ಸ್ಟಿಟ್ಯೂಟ್‌ನಲ್ಲಿ ಮಾರಣಾಂತಿಕ ದಾಳಿ ನಡೆದಾಗ ತಮ್ಮನ್ನು ರಕ್ಷಿಸಿದ ಹೀರೋಗಳ ಪರವಾಗಿ ಈ ಪ್ರಶಸ್ತಿ ಸ್ವೀಕಾರ ಮಾಡುತ್ತಿರುವುದಾಗಿ ಹೇಳಿದ ರಶ್ದಿ ಅವರು, ‘ಒಂದು ವೇಳೆ ಅಂದು ಅವರಿಲ್ಲದಿದ್ದರೆ ಬಹುಶಃ ಇಂದು ನಾನು ಇಲ್ಲಿ ಇರುತ್ತಿಲ್ಲ. ಅಂದು ನನ್ನನ್ನು ಕೊಲ್ಲಲು ಹೊಂಚು ಹಾಕಲಾಗಿತ್ತು. ಆ ದಿನ ನನ್ನನ್ನು ಕಾಪಾಡಿರುವವರಲ್ಲಿ ಧೈರ್ಯ ಇತ್ತು. ನಾನು ಅವರಿಗೆ ಜೀವನಪೂರ್ತಿ ಋಣಿಯಾಗಿರುತ್ತೇನೆ’ ಎಂದು ಹೇಳಿದರು.

‘ಭಯೋತ್ಪಾದನೆ ನಮ್ಮನ್ನು ಭಯಗೊಳಿಸಬಾರದು. ಹಿಂಸೆ ನಮ್ಮನ್ನು ತಡೆಯಬಾರದು. ಹೋರಾಟ ನಿರಂತರವಾಗಿ ಸಾಗುತ್ತಿರಬೇಕು’ ಎಂದು ಅವರು ತಿಳಿಸಿದರು.

‘ಪೆನ್ ಅಮೆರಿಕ’ ಅಧ್ಯಕ್ಷ, ನಾಟಕಕಾರ ಮತ್ತು ಕಾದಂಬರಿಕಾರ ಅಯಾದ್ ಅಖ್ತರ್ ಅವರು, ‘ರಶ್ದಿ ಅವರು ನಿರಂತರವಾಗಿ ತೆಗೆದುಕೊಂಡ ನಿಲುವುಗಳಿಗಾಗಿ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ’ ಎಂದರು.

ರಶ್ದಿ ಅವರ ಮೇಲಿನ ದಾಳಿಗೆ ಜಾಗತಿಕ ಮಟ್ಟದಲ್ಲಿ ಖಂಡನೆ ವ್ಯಕ್ತವಾಗಿತ್ತು. ರಶ್ದಿ ಅವರ ‘ದಿ ಸಟಾನಿಕ್ ವರ್ಸಸ್’ ಕಾದಂಬರಿ ಪ್ರಕಟವಾದ ಬಳಿಕ ಅವರ ಹತ್ಯೆ ಮಾಡುವಂತೆ 1998ರಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯಾತ್ ಉಲ್ಲಾ ಖೊಮೇನಿ ಫತ್ವಾ ಹೊರಡಿಸಿದ್ದರು. ನಂತರ ಕಳೆದ ವರ್ಷ ಆಗಸ್ಟ್ 12ರಂದು ನ್ಯೂಯಾರ್ಕ್‌ನ ಷಟೌಕ್ವಾ ಇನ್‌ಸ್ಟಿಟ್ಯೂಟ್‌ನ ಕಾರ್ಯಕ್ರಮದಲ್ಲಿ ರಶ್ದಿ ಪಾಲ್ಗೊಂಡಿದ್ದಾಗ ಹದಿ ಮಟರ್ ಎಂಬಾತ ಅವರಿಗೆ ಚಾಕುವಿನಿಂದ ಇರಿದಿದ್ದ.

‘ಗ್ರೀನ್ ಕಾರ್ಡ್: ಹಂಚಿಕೆ ವ್ಯವಸ್ಥೆ ಬದಲಾಗಲಿ’

ವಾಷಿಂಗ್ಟನ್ (ಪಿಟಿಐ): ಗ್ರೀನ್ ಕಾರ್ಡ್ ಹಂಚಿಕೆಗೆ ಸಂಬಂಧಿಸಿ ದೇಶವಾರು ಮಿತಿ ವ್ಯವಸ್ಥೆ ಜಾರಿಯಲ್ಲಿ ಇರುವುದರಿಂದ ಅಮೆರಿಕದಲ್ಲಿ ಶಾಶ್ವತವಾಗಿ ನೆಲೆಸಲು ಅಗತ್ಯವಿರುವ ಈ ಕಾರ್ಡ್ ಪಡೆಯಲು ಭಾರತ, ಚೀನಾ ಸೇರಿದಂತೆ ಹಲವು ದೇಶಗಳ ಪ್ರಜೆಗಳು ವರ್ಷ ಗಟ್ಟಲೇ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ರೀನ್ ಕಾರ್ಡ್ ಹಂಚಿಕೆ ವ್ಯವಸ್ಥೆಯಲ್ಲಿ ಸಂಸತ್ ಬದಲಾವಣೆ ತಂದರೆ ಮಾತ್ರ ಈ ದೀರ್ಘವಾದ ಮತ್ತು ಯಾತನೆಯಿಂದ ಕೂಡಿದ ಕಾಯುವ ಪರಿಸ್ಥಿತಿ ನಿವಾರಣೆಯಾಗಬಲ್ಲದು ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸದ್ಯ ಜಾರಿಯಲ್ಲಿರುವ ಕಾನೂನಿನ ಪ್ರಕಾರ, ಉದ್ಯೋಗ ಆಧರಿಸಿ, ಪ್ರತಿ ವರ್ಷ 1.40 ಲಕ್ಷ ಗ್ರೀನ್ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ.

ಒಂದು ದೇಶಕ್ಕೆ ಒಟ್ಟು ಕಾರ್ಡ್‌ಗಳಲ್ಲಿ ಶೇ 7ರಷ್ಟು ಗ್ರೀನ್ ಕಾರ್ಡ್‌ಗಳನ್ನು ನೀಡಲಾಗುತ್ತದೆ. ಇದೇ ಕಾರಣಕ್ಕೆ ಗ್ರೀನ್ ಕಾರ್ಡ್‌ಗೆ ಅರ್ಜಿ ಸಲ್ಲಿಸಿದವರು ದೀರ್ಘಕಾಲದ ವರೆಗೆ ಕಾಯಬೇಕಾದ ಪರಿಸ್ಥಿತಿ ಇದೆ.

ಭಯೋತ್ಪಾದಕರ ಪತ್ತೆಗೆ ನಡೆದ ಕಾರ್ಯಾಚರಣೆ

ಇಮ್ರಾನ್ ಖಾನ್ ಮನೆಯಲ್ಲಿ ಪೊಲೀಸರ ಶೋಧ

ಲಾಹೋರ್ (ಪಿಟಿಐ): ‘ಭಯೋತ್ಪಾದಕರು ಅಡಗಿರುವ ಶಂಕೆ ಆಧಾರದಲ್ಲಿ ಪಂಜಾಬ್ ಪೊಲೀಸರು ಜಮಾನ್ ಪಾರ್ಕ್‌ನಲ್ಲಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ನಿವಾಸದಲ್ಲಿ ಶುಕ್ರವಾರ ಶೋಧ ನಡೆಸಿದ್ದಾರೆ’ ಎಂದು ಡಾನ್ ಪತ್ರಿಕೆ ವರದಿ ಮಾಡಿವೆ.

‘ಶೋಧ ಕಾರ್ಯಾಚರಣೆ ನಡೆಸುತ್ತಿರುವ ಪೊಲೀಸ್ ನಿಯೋಗದಲ್ಲಿ ಲಾಹೋರ್ ಕಮಿಷನರ್ ಮುಹಮ್ಮದ್ ಅಲಿ ರಾಂಧಾವಾ, ಲಾಹೋರ್ ಡೆಪ್ಯುಟಿ ಕಮಿಷನರ್ ರಫಿಯಾ ಹೈದರ್, ಡಿಐಜಿ (ಕಾರ್ಯಾಚರಣೆ ವಿಭಾಗ) ಸಾದಿಕ್ ದೊಗರ್ ಹಾಗೂ ವಿಶೇಷ ಪೊಲೀಸ್ ವರಿಷ್ಠಾಧಿಕಾರಿ (ಕಾರ್ಯಾಚರಣೆ) ಸೋಹೈಬ್ ಇದ್ದಾರೆ. ಇವರೆಲ್ಲರೂ ಇಮ್ರಾನ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ’ ಪತ್ರಿಕೆ ಹೇಳಿದೆ.

‘ಇಮ್ರಾನ್ ಖಾನ್ ಅವರ ಮನೆಯನ್ನು ಸಂಪೂರ್ಣವಾಗಿ ಶೋಧ ಮಾಡಬೇಕೆಂದು ಆದೇಶ ಬಂದ ಹಿನ್ನೆಲೆಯಲ್ಲಿ ಈ ಬೆಳವಣಿಗೆ ನಡೆದಿದೆ. ನೂರಾರು ಪೊಲೀಸರು ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿರುವುದಾಗಿ ಪಂಜಾಬ್‌ನ ಮಾಹಿತಿ ಸಚಿವ ಅಮೀರ್ ಮಿರ್ ಹೇಳಿದ್ದಾರೆ’ ಎಂದು ಪತ್ರಿಕೆ ಮಾಹಿತಿ ನೀಡಿದೆ.

ಇಮ್ರಾನ್ ಖಾನ್

‘ಅಡಗಿಕೊಂಡಿರುವ ಭಯೋತ್ಪಾದಕರನ್ನು ಪತ್ತೆ ಹಚ್ಚುವ ಉದ್ದೇಶದಿಂದ ಇಮ್ರಾನ್ ಅವರ ನಿವಾಸದ ಪ್ರವೇಶ ದ್ವಾರ ಹಾಗೂ ನಿರ್ಗಮನ ದ್ವಾರಗಳ ಸ್ಥಳಗಳನ್ನೂ ಒಳಗೊಂಡಂತೆ ಶೋಧ ನಡೆಸುತ್ತಿರುವುದಾಗಿ ಪೊಲೀಸರು ಹೇಳಿದ್ದಾರೆ’ ಎಂದು ವಿವರಿಸಿದೆ.

‘ಇಮ್ರಾನ್ ಖಾನ್ ಅವರ ನಿವಾಸದಲ್ಲಿ 30ರಿಂದ 40 ಭಯೋತ್ಪಾದಕರು ಅಡಗಿಕೊಂಡಿದ್ದಾರೆ’ ಎಂದು ಬುಧವಾರ ಆರೋಪಿಸಿದ್ದ ಪಂಜಾಬ್ ಸರ್ಕಾರ, ದುಷ್ಕರ್ಮಿಗಳನ್ನು ಸರ್ಕಾರದ ವಶಕ್ಕೆ ಒಪ್ಪಿಸಲು ಇಮ್ರಾನ್ ಅವರ ನೇತೃತ್ವದ ತೆಹ್ರೀಕ್- ಎ- ಇನ್ಸಾಫ್ ಪಕ್ಷಕ್ಕೆ (ಪಿಟಿಐ) 24 ಗಂಟೆಗಳ ಕಾಲಾವಕಾಶವನ್ನೂ ನೀಡಿತ್ತು. ಆದರೆ, ನಿಗದಿತ ಸಮಯದಲ್ಲಿ ಪಿಟಿಐ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಶೋಧ ನಡೆಯುತ್ತಿದೆ.

ಶೋಧ ಕಾರ್ಯಾಚರಣೆ ಕುರಿತು ಮಾಹಿತಿ ನೀಡಿರುವ ಇಮ್ರಾನ್ ಅವರ ಭದ್ರತಾ ಅಧಿಕಾರಿ, ‘ಶೋಧ ನಡೆಸಲು ಬಂದವರು ಕೇವಲ ನೀರು ಮತ್ತು ಬಿಸ್ಕತ್‌ಗಳನ್ನು ಸೇವಿಸಿ ಹಿಂದಿರುಗಿದ್ದಾರೆ’ ಎಂದಿದ್ದಾರೆ.

ಇಮ್ರಾನ್‌ಗೆ ನಿರೀಕ್ಷಣಾ ಜಾಮೀನು

ಲಾಹೋರ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ದಾಖಲಾಗಿರುವ ಮೂರು ಭಯೋತ್ಪಾದನಾ ಪ್ರಕರಣಗಳಲ್ಲಿ ಜೂನ್ 2ರವರೆಗೆ ನಿರೀಕ್ಷಣಾ ಜಾಮೀನು ಮಂಜೂರಾಗಿದೆ.

ಇಲ್ಲಿನ ಭಯೋತ್ಪಾದನಾ ವಿರೋಧಿ ನ್ಯಾಯಾಲಯ ಶುಕ್ರವಾರ ಜಾಮೀನು ಮಂಜೂರು ಮಾಡಿದೆ. ಬಿಗಿ ಭದ್ರತೆಯ ನಡುವೆ ಇಮ್ರಾನ್ ಅವರು ಲಾಹೋರ್‌ನ ಭಯೋತ್ಪಾದನಾ ವಿರೋಧಿ ನ್ಯಾಯಾಲಯಕ್ಕೆ (ಎಟಿಸಿ) ಹಾಜರಾದರು.

ಜಿನ್ನಾ ಹೌಸ್ ದಾಳಿ ಸೇರಿದಂತೆ ಮೂರು ಭಯೋತ್ಪಾದನಾ ಪ್ರಕರಣಗಳಲ್ಲಿ ಪಾಕಿಸ್ತಾನ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ) ಮುಖ್ಯಸ್ಥರಿಗೆ ಎಟಿಸಿ ಜೂನ್ 2ರವರೆಗೆ ನಿರೀಕ್ಷಾ ಜಾಮೀನು ನೀಡಿದೆ ಮತ್ತು ತನಿಖೆಗೆ ಸಹಕರಿಸುವಂತೆ ನಿರ್ದೇಶಿಸಿದೆ ಎಂದು ನ್ಯಾಯಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತನಿಖೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಖಾನ್ ತಿಳಿಸಿದ್ದಾರೆ ಎಂದು ಅವರು ಹೇಳಿದ್ದಾರೆ.

‘ಅದಾನಿ ಸಮೂಹ ತಪ್ಪೆಸಗಿಲ್ಲ’

ಷೇರು ಮೌಲ್ಯ ಏರಿಳಿತ: ‘ಸುಪ್ರೀಂ’ಗೆ ತಜ್ಞರ ಸಮಿತಿ ಸಲ್ಲಿಸಿರುವ ಮಧ್ಯಂತರ ವರದಿಯಲ್ಲಿ ಉಲ್ಲೇಖ

ನವದೆಹಲಿ (ಪಿಟಿಐ): ‘ಅದಾನಿ ಸಮೂಹವು ಷೇರುಗಳ ಮೌಲ್ಯವನ್ನು ಕೃತಕವಾಗಿ ಏರಿಳಿತ ಮಾಡಿಲ್ಲ. ಈ ವಿದ್ಯಮಾನಕ್ಕೆ ಸಂಬಂಧಿಸಿದ ನಿಯಂತ್ರಣ ವ್ಯವಸ್ಥೆಯಲ್ಲಿ ಯಾವುದೇ ಲೋಪವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿಲ್ಲ’ ಎಂದು ಸುಪ್ರೀಂಕೋರ್ಟ್ ನೇಮಿಸಿದ್ದ ತಜ್ಞರ ಸಮಿತಿ ಶುಕ್ರವಾರ ಹೇಳಿದೆ.

ಸಾಗರೋತ್ತರ ಕಂಪನಿಗಳು ಅದಾನಿ ಸಮೂಹದಲ್ಲಿ ಹೂಡಿಕೆ ಮಾಡುವ ವೇಳೆ ನಿಯಮಗಳ ಉಲ್ಲಂಘನೆಯಾಗಿತ್ತು ಎಂಬ ಆರೋಪಗಳ ಕುರಿತು ಸೆಬಿ ತನಿಖೆ ನಡೆಸಿದ್ದು, ಯಾವುದೇ ತಪ್ಪು ಕಂಡುಬಂದಿಲ್ಲ ಎಂದೂ ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

ಅದಾನಿ ಸಮೂಹವು ತನ್ನ ಷೇರುಗಳ ಮೌಲ್ಯದಲ್ಲಿ ಕೃತಕವಾಗಿ ಏರಿಳಿತ ಮಾಡಿತ್ತು ಎಂಬುದಾಗಿ ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆ ವರದಿ ಪ್ರಕಟಿಸಿತ್ತು. ಇದು ದೇಶದ ಷೇರು ಮಾರುಕಟ್ಟೆಯಲ್ಲಿ ತಲ್ಲಣಕ್ಕೆ ಕಾರಣವಾಗಿತ್ತು.

ಈ ಆರೋಪಗಳ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸಲು ನಿವೃತ್ತ ನ್ಯಾಯಮೂರ್ತಿ ಎ.ಎಂ.ಸಪ್ರೆ ನೇತೃತ್ವದ ಆರು ಸದಸ್ಯರಿರುವ ತಜ್ಞರ ಸಮಿತಿಯನ್ನು ಸುಪ್ರೀಂಕೋರ್ಟ್ ರಚಿಸಿತ್ತು. ಒ.ಪಿ. ಭಟ್, ಕೆ.ವಿ.ಕಾಮತ್, ನಂದನ್ ನಿಲೇಕಣಿ ಹಾಗೂ ಸೋಮಶೇಖರ್ ಸುಂದರೇಶನ್ ಈ ಸಮಿತಿ ಸದಸ್ಯರಾಗಿದ್ದಾರೆ. ಸಮಿತಿಯು ಸುಪ್ರೀಂಕೋರ್ಟ್‌ಗೆ ಶುಕ್ರವಾರ ಸಲ್ಲಿಸಿರುವ ಮಧ್ಯಂತರ ವರದಿಯಲ್ಲಿ ಈ ಮಾಹಿತಿ ನೀಡಿದೆ.

‘ಅದಾನಿ ಸಮೂಹದ ಷೇರುಗಳ ‘ಶಾರ್ಟ್ ಸೆಲ್ಲಿಂಗ್’ ಮಾಡುವುದು. ಸಮೂಹದ ವಿರುದ್ಧದ ಆರೋಪಗಳಿರುವ ವರದಿಯು ಬಹಿರಂಗಗೊಂಡ ನಂತರ ಷೇರುಗಳ ಮೌಲ್ಯದಲ್ಲಿ ಭಾರಿ ಕುಸಿತ ಕಂಡು ಬಂದಾಗ ದೊಡ್ಡ ಪ್ರಮಾಣದ ಲಾಭ ಮಾಡಿಕೊಳ್ಳಬೇಕು. ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ತನ್ನ ವರದಿ ಬಿಡುಗಡೆ ಮಾಡುವುದಕ್ಕೆ ಮೊದಲೇ ಇಂಥ ಸನ್ನಾಹ ನಡೆದಿತ್ತು ಎಂಬ ಬಗ್ಗೆ ಪುರಾವೆ ಲಭಿಸಿದೆ’ ಎಂದು ಸಮಿತಿಯು ಹೇಳಿದೆ.

ಯಾವುದೇ ಷೇರು ಕುಸಿಯುತ್ತದೆ ಎಂಬುದು ವಿಶ್ಲೇಷಣೆಯಿಂದ ಗೊತ್ತಾದಾಗ, ಟ್ರೇಡರ್ ಅದನ್ನು ‘ಶಾರ್ಟ್ ಸೆಲ್’ ಮಾಡಲು ನಿರ್ಧರಿಸುತ್ತಾನೆ. ಈ ವಹಿವಾಟಿನಲ್ಲಿ ಷೇರುಗಳನ್ನು ಖರೀದಿಸುವ ಮುನ್ನವೇ ಮಾರಾಟ ಮಾಡಲಾಗುತ್ತದೆ.

‘ಸೆಬಿಯು ಅನುಸರಿಸುವ ನಿಯಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿ ಸ್ಥಿರ ಹಾಗೂ ಏಕರೂಪದ ನೀತಿಯ ಅಗತ್ಯ ಇದೆ’ ಎಂದೂ ಸಮಿತಿ ಅಭಿಪ್ರಾಯಪಟ್ಟಿದೆ.

ಅದಾನಿ ಸಮೂಹದ ಕಂಪನಿಗಳಲ್ಲಿ ಕನಿಷ್ಠ ಹೂಡಿಕೆಗೆ ಸಂಬಂಧಿಸಿದ ನಿಯಮಗಳು ಅಥವಾ ವಹಿವಾಟಿಗೆ ಸಂಬಂಧಿಸಿ ಸೆಬಿಯಿಂದ ಲೋಪವಾಗಿರುವುದು ಕಂಡುಬಂದಿಲ್ಲ ಎಂದು ವರದಿಯಲ್ಲಿ ವಿವರಿಸಲಾಗಿದೆ.

‘ಅದಾನಿ ಸಮೂಹದ ಕಂಪನಿಗಳಲ್ಲಿ ವಿದೇಶದ 13 ಕಂಪನಿಗಳು ಹೂಡಿಕೆ ಮಾಡಿವೆ. ಆದರೆ, ಈ ವಿದೇಶಿ ಕಂಪನಿಗಳ ಮಾಲೀಕತ್ವದ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಹೀಗಾಗಿ, ಅದಾನಿ ಸಮೂಹದ ಕಂಪನಿಗಳಲ್ಲಿ ವಿದೇಶಿ ಹೂಡಿಕೆದಾರರು ಮಾಡಿರುವ ಹೂಡಿಕೆ ಪಾರದರ್ಶಕವಾಗಿಲ್ಲ ಎಂದು ಸೆಬಿ ಸಂಶಯ ವ್ಯಕ್ತಪಡಿಸಿತ್ತು. ಈ ಸಂಶಯವೇ ತನಿಖೆಗೆ ಕಾರಣವಾಗಿದೆ’ ಎಂದು ವರದಿಯಲ್ಲಿ ವಿವರಿಸಲಾಗಿದೆ.

‘ಕಂಪನಿಗಳ ಪ್ರವರ್ತಕರೇ ಸಾರ್ವಜನಿಕರ ಹೆಸರಿನಲ್ಲಿ ಹೂಡಿಕೆ ಮಾಡಿದ್ದಾರೆ ಎಂಬ ಬಗ್ಗೆ ಸೆಬಿ ಬಹಳ ಹಿಂದಿನಿಂದಲೂ ಶಂಕೆ ವ್ಯಕ್ತಪಡಿಸುತ್ತಿದೆ. ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ ನೆರವಿನಿಂದ ತನಿಖೆ ಕೈಗೊಂಡಿದ್ದರೂ, ಈ 13 ಕಂಪನಿಗಳ ಮಾಲೀಕತ್ವವನ್ನು ಸೆಬಿಗೆ ಪತ್ತೆ ಮಾಡಲು ಆಗಿಲ್ಲ’ ಎಂದು ವರದಿಯಲ್ಲಿ ಹೇಳಲಾಗಿದೆ.

‘ಈ 13 ವಿದೇಶಿ ಕಂಪನಿಗಳ ಮಾಲೀಕತ್ವದ ಕುರಿತು 2020ರ ಅಕ್ಟೋಬರ್‌ನಿಂದಲೇ ಸೆಬಿ ತನಿಖೆ ನಡೆಸುತ್ತಿದೆ. ಆದರೆ, ತಾನು ವ್ಯಕ್ತಪಡಿಸಿರುವ ಸಂಶಯಕ್ಕೆ ಉತ್ತರ ಕಂಡುಕೊಳ್ಳುವುದು ಸೆಬಿಗೆ ಸಾಧ್ಯವಾಗುತ್ತಿಲ್ಲ’ ಎಂದು ವಿವರಿಸಲಾಗಿದೆ.

‘ಕೆಲ ವಿಷಯಗಳಲ್ಲಿ ತಪ್ಪು ಮಾಡಿರುವ ಬಗ್ಗೆ ಸೆಬಿ ಸಂಶಯ ವ್ಯಕ್ತಪಡಿಸಿದ್ದರೂ, ಹಲವಾರು ಷರತ್ತುಗಳನ್ನು ಪಾಲನೆ ಮಾಡಿರುವುದು ಕಂಡುಬಂದಿದೆ. ಹೀಗಾಗಿ, ಇಲ್ಲಿ ಕೋಳಿ ಮೊದಲೋ ಮೊಟ್ಟೆ ಮೊದಲೋ ಎಂಬ ಪರಿಸ್ಥಿತಿ ಇದೆ ಎಂಬುದು ದಾಖಲೆಗಳ ಪರಿಶೀಲನೆಯಿಂದ ತಿಳಿದು ಬರುತ್ತದೆ’ ಎಂದು ಸಮಿತಿ ಹೇಳಿದೆ.

‘ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅದಾನಿ ಸಮೂಹದ ಷೇರುಗಳನ್ನು ಮಾರುಕಟ್ಟೆ ಮರುಮೌಲ್ಯಮಾಪನಕ್ಕೆ ಒಳಗಪಡಿಸಿ, ಅವುಗಳ ಮೌಲ್ಯವನ್ನು ಮರುನಿಗದಿ ಮಾಡಿದೆ. ಷೇರುಗಳ ಮೌಲ್ಯವು ಜನವರಿ 24ಕ್ಕೂ ಮುಂಚಿನ ಮಟ್ಟಕ್ಕೆ ಬಂದಿಲ್ಲದೇ ಇರಬಹುದು, ಆದರೆ, ಹೊಸ ಮೌಲ್ಯದಲ್ಲಿ ಸ್ಥಿರತೆ ಕಂಡಿವೆ’ ಎಂದು ಹೇಳಿದೆ.

‘ಜನವರಿ 24ರ ನಂತರ ಚಿಲ್ಲರೆ ಹೂಡಿಕೆದಾರರು ಅದಾನಿ ಕಂಪನಿಗಳಲ್ಲಿ ಹೂಡಿಕೆ ಮಾಡುವುದು ಹೆಚ್ಚಾಗಿರುವುದು ಕಂಡುಬಂದಿದೆ. ಹಾಗಾಗಿ, ಹಿಂಡನ್‌ಬರ್ಗ ರಿಸರ್ಚ್ ವರದಿ ಸಲ್ಲಿಸಿದ ನಂತರದ ಅವಧಿಯಲ್ಲಿ ಭಾರತದ ಷೇರು ಮಾರುಕಟ್ಟೆಯಲ್ಲಿ ಅಸ್ಥಿರತೆ ಇತ್ತು ಎಂದು ಹೇಳಲಾಗುವುದಿಲ್ಲ’ ಎಂದೂ ಸಮಿತಿ ಅಭಿಪ್ರಾಯಪಟ್ಟಿದೆ.

ರಾಹುಲ್‌ಗೆ ಭಾಷಣ ಬರೆಯುವವರಿಂದ ವಿಲಕ್ಷಣ ವಿವರಣೆ ಸಾಧ್ಯತೆ: ಬಿಜೆಪಿ

ನವದೆಹಲಿ (ಪಿಟಿಐ): ಅದಾನಿ ಸಮೂಹದ ವಿಚಾರವಾಗಿ ಸೆಬಿಯಿಂದ ಯಾವುದೇ ವೈಫಲ್ಯ ಕಂಡುಬಂದಿಲ್ಲ ಎಂದು ತಜ್ಞರ ಸಮಿತಿ ವರದಿ ನೀಡಿರುವುದರಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹೇಳಿರುವ ಸುಳ್ಳುಗಳ ಸಮರ್ಥನೆಗಾಗಿ ಅವರಿಗೆ ಭಾಷಣ ಬರೆದುಕೊಡುವವರು ಇನ್ನಷ್ಟು ವಿಲಕ್ಷಣ ವಿವರಣೆಗಳನ್ನು ನೀಡುತ್ತಾರೆ ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ.

‘ರಫೇಲ್ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿದ ನಂತರ, ಸರ್ಕಾರವನ್ನು ಗುರಿಯಾಗಿಸಿ ರಾಹುಲ್ ಗಾಂಧಿ ನಡೆಸಿದ್ದ ಮತ್ತೊಂದು ಪ್ರಚಾರಕ್ಕೆ ತಡೆಬಿದ್ದಂತಾಗಿದೆ’ ಎಂದು ಬಿಜೆಪಿಯ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಕುಟುಕಿದ್ದಾರೆ.

ರೋಹ್ಟಗಿ ಪ್ರತಿಕ್ರಿಯೆ: ಅದಾನಿ ಸಮೂಹದ ಪರ ವಕೀಲ ಮುಕುಲ್ ರೋಹ್ಟಗಿ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ಅದಾನಿ ಸಮೂಹದ ವಿರುದ್ಧದ ಆರೋಪಗಳ ಕುರಿತು ಸೆಬಿಯ ತನಿಖೆ ಇನ್ನೂ ನಡೆಯುತ್ತಿದೆ. ಆದರೆ, ಈಗ ತಜ್ಞರ ಸಮಿತಿಯ ವರದಿ ಪ್ರಕಾರ ಅದಾನಿ ಸಮೂಹವು ಯಾವುದೇ ಉಲ್ಲಂಘನೆ ಮಾಡಿಲ್ಲ ಎಂದು ನಿರ್ಣಯಿಸಬಹುದು’ ಎಂದರು.

‘ತಜ್ಞರ ಸಮಿತಿ ಪ್ರಕಟಿಸಿದ ನಿರ್ಧಾರ ಸಮೂಹದ ಪರವಾಗಿಯೇ ಇದೆ. ಸಮೂಹದ ಷೇರುಗಳ ಮೌಲ್ಯದಲ್ಲಿ ಕೃತಕ ಏರಿಳಿತ ಮಾಡಿಲ್ಲ ಎಂಬುದನ್ನು ಸಮಿತಿ ಪತ್ತೆ ಮಾಡಿದೆ. ಹೀಗಾಗಿ, ಚಿಂತಿಸುವ ಕಾರಣ ಇಲ್ಲ’ ಎಂದರು.

ಆರೋಪಮುಕ್ತ ಮಾಡಿಲ್ಲ: ಕಾಂಗ್ರೆಸ್

ನವದೆಹಲಿ: ಅದಾನಿ ಸಮೂಹದ ಷೇರುಗಳ ಮೌಲ್ಯವನ್ನು ಕೃತಕವಾಗಿ ಏರಿಳಿತ ಮಾಡಲಾಗಿತ್ತು ಎಂಬ ಆರೋಪಗಳ ಕುರಿತು ತಜ್ಞರ ಸಮಿತಿ ಮಾಡಿರುವ ನಿರ್ಣಯಗಳು ಊಹಾತ್ಮಕವಾಗಿವೆ. ಆದರೆ, ಸಮೂಹವನ್ನು ಆರೋಪದಿಂದ ಮುಕ್ತ ಮಾಡಲಾಗಿದೆ ಎಂಬ ರೀತಿಯಲ್ಲಿ ವರದಿಯನ್ನು ತಿರುಚುವುದು ಸಲ್ಲ ಎಂದು ಕಾಂಗ್ರೆಸ್ ಶುಕ್ರವಾರ ಹೇಳಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ಸುಪ್ರೀಂಕೋರ್ಟ್ ನೇಮಿಸಿದ ತಜ್ಞರ ಸಮಿತಿ ನಡೆಸುವ ತನಿಖೆ ಸೀಮಿತ ವ್ಯಾಪ್ತಿ ಹೊಂದಿದೆ. ‘ಮೋದಾನಿ’ ಹಗರಣದ ಸಂಪೂರ್ಣ ಸತ್ಯಾಸತ್ಯತೆ ಹೊರಬೇಕಾದರೆ ಜಂಟಿ ಸಂಸದೀಯ ಸಮಿತಿಯಿಂದ ತನಿಖೆ ಅಗತ್ಯ ಎಂದು ಪಕ್ಷ ಹೇಳುತ್ತಲೇ ಬಂದಿದೆ’ ಎಂದಿದ್ದಾರೆ.

‘ಅದಾನಿ ಸಮೂಹವು ಸೆಬಿ ನಿಯಮಗಳನ್ನು ಉಲ್ಲಂಘಿಸಿದೆ ಎಂಬ ಬಗ್ಗೆ ಸ್ಪಷ್ಟ ನಿರ್ಧಾರಕ್ಕೆ ಬರಲು ತಜ್ಞರ ಸಮಿತಿಗೆ ಸಾಧ್ಯವಾಗಿಲ್ಲ. ಸ್ಪಷ್ಟ ನಿರ್ಧಾರಕ್ಕೆ ಬರಲು ಆಗದ ಕಾರಣ, ಸೆಬಿಯಿಂದ ಯಾವುದೇ ವೈಫಲ್ಯ ಕಂಡುಬಂದಿಲ್ಲ ಎಂಬ ನಿರ್ಣಯಕ್ಕೆ ಸಮಿತಿ ಬಂದಿದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಜ್ಞಾನವಾಪಿ ಮಸೀದಿ: ‘ಶಿವಲಿಂಗ’ದ ವೈಜ್ಞಾನಿಕ ಸಮೀಕ್ಷೆ

ಹೈಕೋರ್ಟ್ ಆದೇಶ ಜಾರಿ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಾರಾಣಸಿಯ ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ದೊರೆತಿದೆ ಎಂದು ಹೇಳಲಾಗಿರುವ ಶಿವಲಿಂಗವನ್ನು ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಒಳಪಡಿಸಲು ಹಾಗೂ ಈ ಕುರಿತು ವೈಜ್ಞಾನಿಕ ಪರಿಶೀಲನೆ ನಡೆಸಲು ಅನುಮತಿ ನೀಡಿ ಅಲಹಾಬಾದ್ ಹೈಕೋರ್ಟ್‌ನ ಆದೇಶದ ಅನುಷ್ಠಾನವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಮುಂದೂಡಿತು.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ.ಪಾರ್ದೀವಾಲಾ ಅವರಿದ್ದ ನ್ಯಾಯಪೀಠ, ‘ವೈಜ್ಞಾನಿಕ ಸಮೀಕ್ಷೆ ನಡೆಸುವುದಕ್ಕಾಗಿ ಮೇ 12ರಂದು ಹೈಕೋರ್ಟ್ ಹೊರಡಿಸಿರುವ ಆದೇಶದ ಪರಿಣಾಮಗಳ ಕುರಿತು ಕೂಲಂಕಷ ಪರಿಶೀಲನೆಯ ಅಗತ್ಯ ಇದೆ. ಹೀಗಾಗಿ ಮುಂದಿನ ವಿಚಾರಣೆ ವರೆಗೆ ಈ ಆದೇಶವನ್ನು ಜಾರಿಗೊಳಿಸಬಾರದು’ ಎಂದು ಹೇಳಿತು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಇದಕ್ಕೆ ಸಹಮತ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ, ಅಂಜುಮಾನ್ ಇಂತೆಜಾಮಿಯಾ ಮಸೀದಿ ಕಮಿಟಿ ಪರ ವಾದ ಮಂಡಿಸಿದ ಹಿರಿಯ ವಕೀಲ ಹುಜೇಫಾ ಅಹ್ಮದಿ, ವೈಜ್ಞಾನಿಕ ಸಮೀಕ್ಷೆಗೆ ಹೈಕೋರ್ಟ್ ನೀಡಿರುವ ಆದೇಶದ ಸಿಂಧುತ್ವವನ್ನು ಪ್ರಶ್ನಿಸಿದರು.

ಹಿಂದೂಗಳ ಪರ ವಾದ ಮಂಡಿಸಿದ ವಕೀಲ ವಿಷ್ಣುಶಂಕರ್ ಜೈನ್, ‘ಹೈಕೋರ್ಟ್ ನೀಡಿರುವ ಆದೇಶವು ಸಿವಿಲ್ ಪ್ರಕ್ರಿಯಾ ಸಂಹಿತೆಯ ನಿಬಂಧನೆಗಳ ಉಲ್ಲಂಘನೆಯಾಗುವುದಿಲ್ಲ. ಶಿವಲಿಂಗಕ್ಕೆ ಯಾವುದೇ ಧಕ್ಕೆ ಆಗದಂತೆ ಸಮೀಕ್ಷೆ ನಡೆಸಬಹುದು ಎಂಬುದಾಗಿ ಎಎಸ್‌ಐ ವರದಿ ನೀಡಿರುವುದನ್ನು ನ್ಯಾಯಾಲಯ ಪರಿಶೀಲಿಸಬಹುದು’ ಎಂದರು.

ನ್ಯಾಯಾಧೀಶರ ಬಾಕಿ ವೇತನ ಪಾವತಿಗೆ ಸೂಚನೆ

ನವದೆಹಲಿ(ಪಿಟಿಐ): ಎರಡನೇ ರಾಷ್ಟ್ರೀಯ ನ್ಯಾಯಾಂಗ ವೇತನ ಆಯೋಗದ (ಎಸ್‌ಎನ್‌ಜೆಪಿಸಿ) ಶಿಫಾರಸು ಅನ್ವಯ ದೇಶದ ಎಲ್ಲಾ ಜಿಲ್ಲಾ ಮತ್ತು ಅಧೀನ ನ್ಯಾಯಾಲಯಗಳ ನ್ಯಾಯಾಧೀಶರಿಗೆ ಕೂಡಲೇ ಬಾಕಿ ವೇತನ ಪಾವತಿಸಬೇಕು ಎಂದು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಜುಲೈ 30ರೊಳಗೆ ಸಂಬಂಧಪಟ್ಟವರ ಬ್ಯಾಂಕ್ ಖಾತೆಗಳಿಗೆ ಬಾಕಿ ಪಾವತಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠ ಆದೇಶಿಸಿದೆ.

ನ್ಯಾಯಾಂಗ ವ್ಯವಸ್ಥೆ ಆಧಾರಸ್ತಂಭಗಳಾದ ಜಿಲ್ಲಾ ನ್ಯಾಯಾಲಯಗಳ ಸಿಬ್ಬಂದಿಯ ಆರ್ಥಿಕ ಭದ್ರತೆ ಮತ್ತು ಸ್ವಾವಲಂಬನೆಗೆ ಒತ್ತು ನೀಡುವುದು ಅಗತ್ಯ ಎಂದು ಪೀಠ ಹೇಳಿದೆ. 2020ರ ಜನವರಿ 29ರಂದು ನಿವೃತ್ತ ನ್ಯಾಯಮೂರ್ತಿ ಪಿ.ವಿ. ರೆಡ್ಡಿ ನೇತೃತ್ವದ ಆಯೋಗವು ಅಂತಿಮ ವರದಿ ಸಲ್ಲಿಸಿದೆ.

‘ವಿಚಾರಣೆಗೂ ಮುನ್ನ ಆರೋಪಿ ಹೇಳಿಕೆಯ ವಿವರಣೆ ಅಪೇಕ್ಷಣೀಯ’

ನವದೆಹಲಿ (ಪಿಟಿಐ): ಒಬ್ಬ ವ್ಯಕ್ತಿ ವಿರುದ್ಧ ಎಸ್‌ಸಿ,ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯಡಿ ವಿಚಾರಣೆ ನಡೆಸುವುದಕ್ಕೂ ಮೊದಲು ಆ ವ್ಯಕ್ತಿ ಸಾರ್ವಜನಿಕವಾಗಿ ನೀಡಿರುವ ಹೇಳಿಕೆಯ ಸಾರಾಂಶವನ್ನು ಕನಿಷ್ಠಪಕ್ಷ ದೋಷಾರೋಪ ಪಟ್ಟಿಯಲ್ಲಿಯಾದರೂ ಉಲ್ಲೇಖಿಸುವುದು ಅಪೇಕ್ಷಣೀಯ ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.

ಆರೋಪಿಯ ಹೇಳಿಕೆಯನ್ನು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖ ಮಾಡುವುದರಿಂದ, ಅಪರಾಧ ಕೃತ್ಯವು ಎಸ್‌ಸಿ,ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯಡಿ ಪರಿಗಣಿಸಲು ಯೋಗ್ಯವೇ ಎಂಬ ಬಗ್ಗೆ ನಿರ್ಣಯಿಸಲು ನ್ಯಾಯಾಲಯಕ್ಕೆ ಸಾಧ್ಯವಾಗಲಿದೆ ಎಂದು ನ್ಯಾಯಮೂರ್ತಿಗಳಾದ ಎಸ್.ಆರ್. ಭಟ್ ಹಾಗೂ ದೀಪಂಕರ್ ದತ್ತ ಅವರಿದ್ದ ನ್ಯಾಯಪೀಠ ಹೇಳಿತು.

ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಯನ್ನು ಸಾರ್ವಜನಿಕವಾಗಿ ಅವಮಾನಿಸಿದ ಅಥವಾ ಆತನಿಗೆ ಬೆದರಿಕೆ ಒಡ್ಡುವ ಉದ್ದೇಶದಿಂದಲೇ ಅವಮಾನಿಸಿದ ಆರೋಪಕ್ಕೆ ಸಂಬಂಧಿಸಿ ವ್ಯಕ್ತಿ ವಿರುದ್ಧ ಎಸ್‌ಸಿ.ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯ ಸೆಕ್ಷನ್ 3(1)(x) ಅಡಿ ದೋಷಾರೋಪ ಪಟ್ಟಿ ಸಲ್ಲಿಸಿದ ಪ್ರಕರಣದ ವಿಚಾರಣೆ ವೇಳೆ ನ್ಯಾಯಪೀಠ ಹೀಗೆ ಹೇಳಿತು.

‘ಸಂತ್ರಸ್ತನು ಎಸ್‌ಸಿ ಅಥವಾ ಎಸ್‌ಟಿ ಸಮುದಾಯಕ್ಕೆ ಸೇರಿರದ ಹೊರತು, ಒಬ್ಬ ವ್ಯಕ್ತಿಯನ್ನು ಗುರಿಯಾಗಿಸಿ ಮಾಡುವ ಅವಮಾನ ಅಥವಾ ಒಡ್ಡುವ ಬೆದರಿಕೆಯು ಎಸ್‌ಸಿ.ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯ ಸೆಕ್ಷನ್ 3(1)(x) ಅಡಿ ಅಪರಾಧವಾಗದು. ಇದು ಕಾಯ್ದೆಯ ಸ್ಪಷ್ಟ ಉದ್ದೇಶವಾಗಿದೆ’ ಎಂದು ಹೇಳಿತು.

‘ಅಪರಾಧ ನಡೆದ ಸ್ಥಳದಲ್ಲಿ ಆರೋಪಿ, ದೂರುದಾರ ಹಾಗೂ ಆತನ ಕುಟುಂಬದ ಇಬ್ಬರು ಸದಸ್ಯರನ್ನು ಬಿಟ್ಟರೆ ಇತರರ ಪೈಕಿ ಯಾರೊಬ್ಬರ ಹೆಸರನ್ನು ಆರೋಪಿಯ ವಿರುದ್ಧ ಸಲ್ಲಿಸಲಾದ ಎಫ್‌ಐಆರ್ ಅಥವಾ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿಲ್ಲ’ ಎಂದು ಹೇಳಿದ ನ್ಯಾಯಪೀಠ, ಆರೋಪಿ ವಿರುದ್ಧದ ವಿಚಾರಣೆಯನ್ನು ರದ್ದುಗೊಳಿಸಿತು.

‘ಜಾಮಾ ಮಸೀದಿ ಕೆಳಗೆ ಕೃಷ್ಣನ ವಿಗ್ರಹ’

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಐತಿಹಾಸಿಕ ಜಾಮಾ ಮಸೀದಿಯ ಮೆಟ್ಟಿಲುಗಳ ಕೆಳಗೆ ಕೃಷ್ಣನ ವಿಗ್ರಹಗಳನ್ನು ಹೂತಿಡಲಾಗಿದೆ ಎಂದು ಕೃಷ್ಣ ಜನ್ಮಭೂಮಿ ಸಂರಕ್ಷಿತ್ ಸೇವಾ ಟ್ರಸ್ಟ್ ಆರೋಪಿಸಿದೆ. ವಿಗ್ರಹ ಪತ್ತೆಗೆ ಉತ್ಖನನ ನಡೆಸುವಂತೆ ಕೋರಿ ಜಿಲ್ಲಾ ನ್ಯಾಯಾಲಯದ ಮೆಟ್ಟಿಲೇರಿದೆ.

ಈ ಸಂಬಂಧ ಇಂತಿಜಾಮಿಯಾ, ಶಾಹಿ ಮಸೀದಿ ಮತ್ತು ಉತ್ತರ ಪ್ರದೇಶ ಕೇಂದ್ರೀಯ ವಕ್ಫ್ ಬೋರ್ಡ್‌ಗೆ ನೋಟಿಸ್ ಕಳುಹಿಸಲಾಗಿದೆ. ಪ್ರಕರಣದ ವಿಚಾರಣೆಯನ್ನು ಮೇ 31ರಂದು ನಡೆಸುವುದಾಗಿ ಕೋರ್ಟ್ ತಿಳಿಸಿದೆ.

ಮೊಘಲ್ ದೊರೆ ಔರಂಗಜೇಬ ಶ್ರೀಕೃಷ್ಣ ಜನ್ಮಭೂಮಿ ದೇಗುಲ ಧ್ವಂಸದ ನಂತರ ಮಥುರಾದಿಂದ ಕೃಷ್ಣನ ವಿಗ್ರಹಗಳನ್ನು ತಂದು ಜಾಮಾ ಮಸೀದಿಯ ಮೆಟ್ಟಿಲುಗಳಲ್ಲಿ ಹೂತಿದ್ದ ಎಂದು ಹಿಂದೂ ಸಂಘಟನೆ ಆರೋಪಿಸಿದೆ.

ಮೂಲ ದಾಖಲೆ ಸಲ್ಲಿಸಲು ಬಿಹಾರ ಸರ್ಕಾರಕ್ಕೆ ‘ಸುಪ್ರೀಂ’ ನಿರ್ದೇಶನ

ನವದೆಹಲಿ(ಪಿಟಿಐ): ಜಿಲ್ಲಾಧಿಕಾರಿ ಜಿ.ಕೃಷ್ಣಯ್ಯ ಅವರ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ ಮಾಜಿ ಸಂಸದ ಆನಂದ್ ಮೋಹನ್ ಅವಧಿಪೂರ್ವ ಬಿಡುಗಡೆಗೆ ಸಂಬಂಧಿಸಿದ ಎಲ್ಲ ಮೂಲದಾಖಲೆಗಳನ್ನು ಸಲ್ಲಿಸುವಂತೆ ಬಿಹಾರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಸೂರ್ಯಕಾಂತ ಹಾಗೂ ಜೆ.ಬಿ.ಪಾರ್ದೀವಾಲಾ ಅವರಿದ್ದ ನ್ಯಾಯಪೀಠವು, ‘ಪ್ರಕರಣದ ವಿಚಾರಣೆಯನ್ನು ಮುಂದೂಡುವುದು ಸಾಧ್ಯವಿಲ್ಲ. ಅವಧಿಪೂರ್ವ ಬಿಡುಗಡೆಗೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನು ಕೋರ್ಟ್ ಸಲ್ಲಿಸಬೇಕು’ ಎಂದು ಬಿಹಾರ ಸರ್ಕಾರದ ಪರ ಹಾಜರಿದ್ದ ವಕೀಲ ಮನೀಷ್ ಕುಮಾರ್ ಅವರಿಗೆ ಹೇಳಿತು.

ಬಿಹಾರದ ಗೋಪಾಲಗಂಜ್ ಜಿಲ್ಲಾಧಿಕಾರಿಯಾಗಿದ್ದ ಜಿ.ಕೃಷ್ಣಯ್ಯ ಅವರನ್ನು 1994ರಲ್ಲಿ ಕೊಲೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಆನಂದ್ ಮೋಹನ್ ಅವರನ್ನು ಅವಧಿಗೂ ಮುನ್ನವೇ ಬಿಡುಗಡೆ ಮಾಡಿದ ಬಿಹಾರ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಕೃಷ್ಣಯ್ಯ ಅವರ ಪತ್ನಿ ಉಮಾ ಮೇಲ್ಮನವಿ ಸಲ್ಲಿಸಿದ್ದಾರೆ.

ಉಮಾ ಕೃಷ್ಣಯ್ಯ ಪರ ವಕೀಲ ಸಿದ್ಧಾರ್ಥ ಲೂಥ್ರ, ‘ಆನಂದ್ ಮೋಹನ್ ಎಸಗಿದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಬೇಕು ಹಾಗೂ ವಿಚಾರಣೆಯನ್ನು ಆಗಸ್ಟ್‌ನಲ್ಲಿ ನಡೆಸಬೇಕು’ ಎಂದು ಕೋರಿದರು.

ಆಗ, ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಆಗಸ್ಟ್ 8ಕ್ಕೆ ಮುಂದೂಡಿತು.

ವಟ ಸಾವಿತ್ರಿ ಪೂಜೆ

ವಟ ಸಾವಿತ್ರಿ ಪೂಜೆಯ ಪ್ರಯುಕ್ತ ಶುಕ್ರವಾರದಂದು ಪಟ್ನಾದಲ್ಲಿ ಮಹಿಳೆಯರು ಆಲದ ಮರಕ್ಕೆ ದಾರ ಕಟ್ಟಿದರು –ಪಿಟಿಐ ಚಿತ್ರ

ಆರು ದಿನ ಪ್ರವಾಸ: ಜಪಾನ್, ಪಪುವಾ ನ್ಯೂಗಿನಿ, ಆಸ್ಟ್ರೇಲಿಯಾಕ್ಕೂ ಭೇಟಿ

ಹಿರೋಷಿಮಾದಲ್ಲಿ ಜಿ7 ಶೃಂಗ ಸಭೆ: ಮೋದಿ ಭಾಗಿ

ನವದೆಹಲಿ/ ಹಿರೋಷಿಮಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರದಿಂದ ಆರು ದಿನಗಳ ಕಾಲ ಜಪಾನ್, ಪಪುವಾ ನ್ಯೂಗಿನಿ ಹಾಗೂ ಆಸ್ಟ್ರೇಲಿಯಾ ಪ್ರವಾಸ ಕೈಗೊಂಡಿದ್ದಾರೆ. ಈ ವೇಳೆ ಜಾಗತಿಕ ಸವಾಲುಗಳು ಮತ್ತು ಪರಿಹಾರೋಪಾಯಗಳ ಕುರಿತು ವಿಶ್ವದ ನಾಯಕರೊಂದಿಗೆ ಚರ್ಚಿಸಲಿದ್ದಾರೆ.

ಜಿ7 ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲು ಹಿರೋಷಿಮಾಕ್ಕೆ ಆಗಮಿಸಿದ ಮೋದಿ ಅವರನ್ನು ಜಪಾನ್‌ನ ಹಿರಿಯ ಅಧಿಕಾರಿಗಳು ಸ್ವಾಗತಿಸಿದರು. ಜಿ7 ಒಕ್ಕೂಟದಲ್ಲಿ ಜಪಾನ್, ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಕೆನಡಾ, ಇಟಲಿ ಸೇರಿದಂತೆ ಐರೋಪ್ಯ ಒಕ್ಕೂಟ ಸೇರಿವೆ.

ಜಪಾನ್ ಪ್ರವಾಸದ ನಂತರ ಮೋದಿ ಅವರು ಪಪುವಾ ನ್ಯೂಗಿನಿ ದೇಶದ ರಾಜಧಾನಿ ಪೋರ್ಟ್ ಮೊರೆಸ್ಬಿಗೆ ತೆರಳಲಿದ್ದಾರೆ. ಅಲ್ಲಿನ ಪ್ರಧಾನಿ ಜೇಮ್ಸ್ ಮರಾಪೆ ಅಧ್ಯಕ್ಷತೆಯಲ್ಲಿ ಮೇ 22ರಂದು ನಡೆಯಲಿರುವ ಇಂಡಿಯಾ–ಪೆಸಿಫಿಕ್ ದ್ವೀಪ ರಾಷ್ಟ್ರಗಳ ಸಹಕಾರ ಒಕ್ಕೂಟದ(ಎಫ್‌ಐಪಿಐಸಿ) ಸಭೆಯಲ್ಲಿ ಅವರು ಭಾಗವಹಿಸಲಿದ್ದಾರೆ.

‘ಈ ಸಭೆಯಲ್ಲಿ 14 ಪೆಸಿಫಿಕ್ ದ್ವೀಪ ರಾಷ್ಟ್ರಗಳು ಪಾಲ್ಗೊಳ್ಳಲು ಒಪ್ಪಿರುವುದು ಸಂತಸ ತಂದಿದೆ. ಸಭೆಯಲ್ಲಿ ಹವಾಮಾನ ವೈಪರೀತ್ಯ, ಸುಸ್ಥಿರ ಅಭಿವೃದ್ಧಿ, ಆರ್ಥಿಕ ಪ್ರಗತಿ, ಮೂಲ ಸೌಕರ್ಯ, ಆರೋಗ್ಯ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಗುವುದು’ ಎಂದು ತಿಳಿಸಿದ್ದಾರೆ. ಬಳಿಕ ಅವರು ಮೇ 22ರಿಂದ 24ರ ವರೆಗೆ ಆಸ್ಟ್ರೇಲಿಯಾದ ಸಿಡ್ನಿಗೆ ತೆರಳಲಿದ್ದು, ಅಲ್ಲಿನ ಪ್ರಧಾನಿ ಆ್ಯಂಟನಿ ಅಲ್ಬನೆಸ್ ಜೊತೆ ಮಾತುಕತೆ ನಡೆಸಲಿದ್ದಾರೆ.

ಜಿ7 ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲು ಶುಕ್ರವಾರ ಜಪಾನ್‌ನ ಹಿರೋಷಿಮಾಕ್ಕೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಾರತ ಸಮುದಾಯದವರು ಸ್ವಾಗತಿಸಿದರು –ಪಿಟಿಐ ಚಿತ್ರ

ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಜೊತೆ ಮೋದಿ ಮಾತುಕತೆ ನಿರೀಕ್ಷೆ

ನವದೆಹಲಿ(ಪಿಟಿಐ): ಜಿ7 ಶೃಂಗ ಸಭೆಯಲ್ಲಿ ಪಾಲ್ಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮಾತುಕತೆ ನಡೆಸುವ ನಿರೀಕ್ಷೆಯಿದೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ಉಕ್ರೇನ್ ಮೇಲೆ ರಷ್ಯಾ ಯುದ್ಧ ಘೋಷಿಸಿದ ಬಳಿಕ ಈ ಇಬ್ಬರು ನಾಯಕರು ಇದೇ ಮೊದಲ ಬಾರಿಗೆ ಮುಖಾಮುಖಿಯಾಗುತ್ತಿದ್ದಾರೆ. ಹಾಗಾಗಿ, ಶನಿವಾರ ದ್ವಿಪಕ್ಷೀಯ ಮಾತುಕತೆ ನಡೆಸುವ ಸಾಧ್ಯತೆಯಿದೆ. ಆದರೆ, ಈ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ಇನ್ನೂ ಹೊರಬಿದ್ದಿಲ್ಲ ಎಂದು ಭಾರತ ಮತ್ತು ಉಕ್ರೇನ್‌ನ ಹಿರಿಯ ರಾಜತಾಂತ್ರಿಕರು ಹೇಳಿದ್ದಾರೆ.

ಇಬ್ಬರೂ ನಾಯಕರು ಮಾತುಕತೆ ನಡೆಸುವ ಸಂಬಂಧ ಅಂತಿಮ ಹಂತದ ಪ್ರಸ್ತಾವವನ್ನು ಸಿದ್ಧಪಡಿಸಲಾಗುತ್ತಿದೆ ಎಂದೂ ತಿಳಿಸಿದ್ದಾರೆ.

ಒಳ ಮೀಸಲಾತಿ: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಪಂಗಡದ ಜಾತಿಗಳನ್ನು ನಾಲ್ಕು ಗುಂಪುಗಳಾಗಿ ವರ್ಗೀಕರಿಸಿ, ಒಳ ಮೀಸಲಾತಿ ಹಂಚಿಕೆ ಮಾಡಿ ಬಿಜೆಪಿ ನೇತೃತ್ವದ ಸರ್ಕಾರ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಂಗಳೂರಿನ ಎಚ್.ರವಿ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ರಜಾಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಅನಂತ ರಾಮನಾಥ ಹೆಗ್ಡೆ ಅವರು, ಪ್ರತಿವಾದಿಗಳಾದ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಸಮಾಜ ಕಲ್ಯಾಣ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ್ದಾರೆ. ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಲಾಗಿದೆ.

ಅರ್ಜಿಯಲ್ಲಿ ಏನಿದೆ?: ‘ಸಂಪುಟ ಉಪ ಸಮಿತಿಯ ಶಿಫಾರಸು ಆಧರಿಸಿ 2023ರ ಮಾರ್ಚ್ 27ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ಮೀಸಲಾತಿ ವರ್ಗೀಕರಿಸಿ ಆದೇಶ ಮಾಡಿದೆ. ಈ ವರ್ಗೀಕರಣವನ್ನು ರಾಜ್ಯಪಾಲರ ಒಪ್ಪಿಗೆಯ ಬಳಿಕ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ನಿರ್ಧರಿಸಿದೆ. ನಿಕಟಪೂರ್ವ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ನೇತೃತ್ವದ ಸಂಪುಟ ಉಪ ಸಮಿತಿಯು 101 ಪರಿಶಿಷ್ಟ ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ಶೇ 17ರಷ್ಟು ಮೀಸಲಾತಿಯನ್ನು ನಾಲ್ಕು ವರ್ಗಗಳಾಗಿ ಪ್ರತ್ಯೇಕಿಸಿ ಮೀಸಲಾತಿ ಹಂಚಿಕೆ ಮಾಡಿದೆ. ಆದರೆ, ಸಂಪುಟ ಉಪ ಸಮಿತಿಯ ವರದಿಯನ್ನು ಸಾರ್ವಜನಿಕಗೊಳಿಸಿಲ್ಲ’ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

‘ಪರಿಶಿಷ್ಟ ಜಾತಿ ಪಟ್ಟಿಯಲ್ಲಿದ್ದ 101 ಜಾತಿಗಳಿಗೆ ಕಲ್ಪಿಸಲಾಗಿದ್ದ ಶೇ 17ರಷ್ಟು ಮೀಸಲಾತಿಯನ್ನು ಜನಸಂಖ್ಯೆಗೆ ಅನುಗುಣವಾಗಿ ರಾಜ್ಯ ಸರ್ಕಾರ ನಾಲ್ಕು ಪ್ರತ್ಯೇಕ ಗುಂಪುಗಳಾಗಿ ವಿಂಗಡಿಸಿ, ಮೀಸಲು ಹಂಚಿಕೆ ಮಾಡಿದೆ. ಮೊದಲ ಗುಂಪಿನಲ್ಲಿ ಆದಿ ದ್ರಾವಿಡ, ಭಾಂಬಿ, ಮಾದಿಗ, ಸಮಗಾರ ಜಾತಿಗಳನ್ನು ಉಲ್ಲೇಖಿಸಲಾಗಿದ್ದು, ಅವುಗಳಿಗೆ ಶೇ 6ರಷ್ಟು ಮೀಸಲು ಹಂಚಿಕೆ ಮಾಡಲಾಗಿದೆ. ಎರಡನೇ ಗುಂಪಿನಲ್ಲಿ ಆದಿ ಕರ್ನಾಟಕ, ಚಲವಾದಿ, ಚನ್ನದಾಸರ, ಹೊಲೆಯ, ಮಹಾರ್ ಜಾತಿಗಳನ್ನು ಉಲ್ಲೇಖಿಸಿದ್ದು, ಅವುಗಳಿಗೆ ಶೇ 5.5ರಷ್ಟು ಮೀಸಲು ನೀಡಲಾಗಿದೆ. ಮೂರನೇ ಗುಂಪಿನಲ್ಲಿ ಬಂಜಾರ ಮತ್ತು ಸಮಾನ ಜಾತಿಗಳು, ಭೋವಿ ಮತ್ತು ಸಮಾನ ಜಾತಿಗಳು, ಕೊರಚ ಮತ್ತು ಕೊರಮ ಜಾತಿಗಳನ್ನು ಉಲ್ಲೇಖಿಸಿ, ಶೇ 4.5ರಷ್ಟು ಹಾಗೂ ನಾಲ್ಕನೇ ಗುಂಪಿನಲ್ಲಿ 1, 2 ಮತ್ತು 3ನೇ ಗುಂಪಿನಲ್ಲಿ ಸ್ಥಾನ ಪಡೆಯದ, ಅಸ್ಪೃಶ್ಯ ಮತ್ತು ಇತರೆ ಜಾತಿಗಳಿಗೆ ಶೇ 1ರಷ್ಟು ಮೀಸಲಾತಿ ಹಂಚಿಕೆ ಮಾಡಲಾಗಿದೆ’ ಎಂಬ ಸರ್ಕಾರದ ಆದೇಶವನ್ನು ಅರ್ಜಿಯಲ್ಲಿ ವಿವರಿಸಲಾಗಿದೆ.

ಮನವಿ: ‘ಯಾವುದೇ ತತ್ವ ಹಾಗೂ ಹಿಂದುಳಿದಿರುವಿಕೆಯ ಆಧಾರವಿಲ್ಲದೆ ಮತ್ತು ಪೂರಕವಾದ ದತ್ತಾಂಶ ಸಂಗ್ರಹಿಸದೆ 101 ಪರಿಶಿಷ್ಟ ಜಾತಿಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಲಾಗಿದೆ. ಇದು ಅತಾರ್ಕಿಕ, ಅವೈಜ್ಞಾನಿಕ ಮತ್ತು ಅಸಾಂವಿಧಾನಿಕ. ಆದ್ದರಿಂದ, ರಾಜ್ಯ ಸರ್ಕಾರದ ಆದೇಶವನ್ನು ರದ್ದುಪಡಿಸಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಸಿಬಿಐ ಸಲ್ಲಿಸಿದ್ದ ಎಫ್‌ಐಆರ್‌ನಲ್ಲಿ ಹಲವು ಅಂಶಗಳು ಬೆಳಕಿಗೆ

ಸಮೀರ್ ವಾಂಖೆಡೆ ಐಷಾರಾಮಿ ಜೀವನ ಬಹಿರಂಗ

ಸಮೀರ್ ವಾಂಖೆಡೆ

ನವದೆಹಲಿ (ಪಿಟಿಐ): ಬಾಲಿವುಡ್ ನಟ ಶಾರುಕ್ ಖಾನ್ ಪುತ್ರ ಆರ್ಯನ್ ಖಾನ್ ಅವರನ್ನು ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಸೇವನೆ ಪ್ರಕರಣದಲ್ಲಿ ಬಂಧಿಸಿ, ಪ್ರಕರಣದ ತನಿಖೆ ನಡೆಸಿದ್ದ ಎನ್‌ಸಿಬಿಯ ಮುಂಬೈ ವಲಯದ ಮಾಜಿ ಮುಖ್ಯಸ್ಥ ಸಮೀರ್ ವಾಂಖೆಡೆ ಅವರ ಐಷಾರಾಮಿ ಜೀವನದ ಕುರಿತು ಮಾಹಿತಿ ಬಹಿರಂಗವಾಗಿದೆ.

ಸಮೀರ್ ಅವರ ದುಬಾರಿ ಕೈಗಡಿಯಾರಗಳು, ದುಬಾರಿ ವಿದೇಶ ಪ್ರಯಾಣಗಳ ಕುರಿತು ಎನ್‌ಸಿಬಿಯ ವಿಶೇಷ ತನಿಖಾ ತಂಡವು (ಎಸ್‌ಇಟಿ) ಕೇಂದ್ರ ಆಡಳಿತ ನ್ಯಾಯ ಮಂಡಳಿಗೆ (ಸಿಎಟಿ) ಕಳೆದ ವರ್ಷವೇ ವರದಿ ನೀಡಿತ್ತು. ಜೊತೆಗೆ ಡ್ರಗ್ಸ್ ಪ್ರಕರಣಕ್ಕೆ ಸಂಬಂಧಿಸಿ ಸಮೀರ್ ಅವರು ಐಷಾರಾಮಿ ಹಡಗಿನ ಮೇಲೆ ನಡೆಸಿದ ದಾಳಿಯು ಕಾನೂನು|-ಬದ್ಧವಾಗಿರಲಿಲ್ಲ ಎಂದೂ ತನಿಖಾ ತಂಡ ಹೇಳಿತ್ತು. ವರದಿಯಲ್ಲಿನ ಈ ಅಂಶಗಳನ್ನು ಸಿಬಿಐ ಈಚೆಗೆ ದಾಖಲಿಸಿಕೊಂಡಿದೆ.

ಸಮೀರ್ ವಿರುದ್ಧದ ಪ್ರಕರಣದ ತನಿಖೆಯನ್ನು ಈಗ ನಡೆಸುತ್ತಿರುವ ಸಿಬಿಐ, ಈಚೆಗಷ್ಟೇ ಎಫ್‌ಐಆರ್ ದಾಖಲಿಸಿಕೊಂಡಿತ್ತು. ಅಲ್ಲದೆ, ಸಮೀರ್ ಅವರಿಗೆ ಸೇರಿದ ಮನೆ ಮತ್ತಿತರ ಕಡೆಗಳಲ್ಲಿ ಶೋಧ ಕಾರ್ಯ ನಡೆಸಿತ್ತು. ಆರ್ಯನ್ ಖಾನ್ ಅವರನ್ನು ಪ್ರಕರಣದಲ್ಲಿ ಸಿಲುಕಿಕೊಳ್ಳದಂತೆ ಮಾಡಲು ಸಮೀರ್ ಅವರು ಶಾರುಕ್ ಖಾನ್ ಅವರಿಂದ ₹ 25 ಕೋಟಿ ಕೇಳಿದ್ದರು ಎನ್ನುವ ಅಂಶ ಕೆಲವು ದಿನಗಳ ಹಿಂದೆ ಸದ್ದು ಮಾಡಿತ್ತು. ಈ ಅಂಶವೂ ಎಫ್‌ಐಆರ್‌ನಲ್ಲಿದೆ.

ಈ ಎಲ್ಲ ಆರೋಪಗಳನ್ನು ತಳ್ಳಿಹಾಕಿರುವ ಸಮೀರ್, ‘ನನ್ನ ಮೇಲೆ ದಾಖಲಾಗಿರುವ ಎಫ್‌ಐಆರ್ ಅನ್ನು ರದ್ದು ಮಾಡಬೇಕು’ ಎಂದು ಕೋರಿ ಬಾಂಬೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಸಮೀರ್ ಅವರ ವಿರುದ್ಧ ಬಂಧನದಂತಹ ತೀವ್ರ ಕ್ರಮಗಳನ್ನು ಇದೇ 22ರವರೆಗೆ ತೆಗೆದುಕೊಳ್ಳಬಾರದು ಎಂದು ಸಿಬಿಐಗೆ ಶುಕ್ರವಾರ ಸೂಚನೆ ನೀಡಿದೆ.

‘ನಾನು ಹಿಂದುಳಿದ ಜಾತಿಗೆ ಸೇರಿದ್ದೇನೆ ಎಂಬ ಕಾರಣಕ್ಕಾಗಿಯೇ ಎಸ್‌ಇಟಿಯ ಮುಖ್ಯಸ್ಥರಾಗಿದ್ದ ಎನ್‌ಸಿಬಿಯ ಉಪ ಮಹಾನಿರ್ದೇಶಕ ಜ್ಞಾನೇಶ್ವರ್ ಸಿಂಗ್ ಅವರು ನನ್ನನ್ನು ಅವಮಾನಿಸಿದ್ದು, ಕಿರುಕುಳ ನೀಡಿದ್ದಾರೆ’ ಎಂದು ಸಮೀರ್ ಹೇಳಿದ್ದಾರೆ. ‘ಕೇಂದ್ರ ಆಡಳಿತ ಮಂಡಳಿ (ಸಿಎಟಿ), ರಾಷ್ಟ್ರೀಯ ಹಿಂದುಳಿದ ಜಾತಿ ಸಮಿತಿ ಹಾಗೂ ಮುಂಬೈ ಪೊಲೀಸರಿಗೆ ಈ ಬಗ್ಗೆ ದೂರು ನೀಡಿದ್ದೇನೆ’ ಎಂದು ಸಮೀರ್ ಅವರು ಗುರುವಾರ ತಿಳಿಸಿದ್ದಾರೆ.

ಎಫ್‌ಐಆರ್‌ನಲ್ಲಿ ಏನಿದೆ?

- 2017–21ರ ವರೆಗೆ ಸಮೀರ್ ಅವರು ಕುಟುಂಬದವರೊಂದಿಗೆ ಐರ್ಲೆಂಡ್, ಪೋರ್ಚುಗಲ್, ದಕ್ಷಿಣ ಆಫ್ರಿಕಾ ಹಾಗೂ ಮಾಲ್ದೀವ್ಸ್ ಸೇರಿದಂತೆ ಹಲವು ದೇಶಗಳಿಗೆ ಪ್ರಯಾಣ ಮಾಡಿದ್ದಾರೆ. ಈ ಎಲ್ಲ ಕಡೆಗಳಲ್ಲೂ ಒಟ್ಟು 55 ದಿನಗಳವರೆಗೆ ಪ್ರವಾಸ ಮಾಡಿದ್ದರು. ಆದರೆ ಸಮೀರ್ ಅವರು ತಮ್ಮ ವಿದೇಶ ಪ್ರವಾಸದ ಖರ್ಚಿನ ಕುರಿತು ಮಾಹಿತಿ ನೀಡುವಾಗ ವೆಚ್ಚದ ಮೊತ್ತವನ್ನು ₹ 1 ಲಕ್ಷದಿಂದ ₹ 2.5 ಲಕ್ಷವಾಗಿದೆ ಎಂಬ ಸುಳ್ಳು ದಾಖಲೆ ನೀಡಿದ್ದರು
- ರಾಜನ್ ಎಂಬುವವರಿಂದ ₹22.05 ಲಕ್ಷ ಮೊತ್ತದ ರೋಲೆಕ್ಸ್ ಕೈಗಡಿಯಾರವನ್ನು ಸಮೀರ್ ಅವರು ₹17.40 ಲಕ್ಷಕ್ಕೆ ಖರೀದಿ ಮಾಡಿದ್ದಾರೆ. ಅವರು ಖರೀದಿಸಿದ್ದ ರೋಲೆಕ್ಸ್ ವಾಚ್‌ಗೆ ಒಂದಕ್ಕಿಂತ ಹೆಚ್ಚು ಬಿಲ್‌ಗಳಿದ್ದವು, ಕೆಲವು ವಿಚಾರಗಳ ಕುರಿತು ಅವರು ಸರ್ಕಾರಕ್ಕೆ ಮಾಹಿತಿ ನೀಡಿರಲಿಲ್ಲ ಅಥವಾ ತಪ್ಪು ಮಾಹಿತಿ ನೀಡಿದ್ದರು
- ಆರ್ಯನ್ ಖಾನ್ ಹಾಗೂ ಆತನ ಸ್ನೇಹಿತನನ್ನು ವಶಕ್ಕೆ ಪಡೆಯುವಲ್ಲಿ ಸಮೀರ್ ಹಲವು ತಪ್ಪುಗಳನ್ನು ಎಸಗಿದ್ದಾರೆ. ಆರ್ಯನ್ ಖಾನ್ ಅವರನ್ನು ಎನ್‌ಸಿಬಿ ಕಚೇರಿಗೆ ಕರೆತರುವಾಗ ಸರ್ಕಾರಿ ವಾಹನ ಬಳಸದೆ ಕೆ.ಪಿ. ಗೋಸಾವಿ ಎಂಬುವವರಿಗೆ ಸೇರಿದ ವಾಹನದಲ್ಲಿ ಕರೆತರಲಾಗಿದೆ. ಇವರು ಈ ಪ್ರಕರಣದ ಸ್ವತಂತ್ರ ಸಾಕ್ಷಿಯಾಗಿದ್ದಾರೆ.
- ಎನ್‌ಸಿಬಿ ಕಚೇರಿಯ ಸಿ.ಸಿ.ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದ, ಆರ್ಯನ್ ಖಾನ್ ಅವರನ್ನು ಬಂಧಿಸಿ ತಂದ ದೃಶ್ಯಗಳನ್ನು ಎಸ್‌ಇಟಿ ತನಿಖಾ ತಂಡವು ಪಡೆದುಕೊಂಡಿತ್ತು. ಆದರೆ, ಈ ವಿಡಿಯೊ ಹಾಳಾಗಿತ್ತು. ನಂತರ ಎಸ್‌ಇಟಿ ತಂಡವು ಕಚೇರಿಯ ಡಿವಿಆರ್ ಹಾಗೂ ಹಾರ್ಡ್ ಡಿಸ್ಕ್ ಅನ್ನು ಕೊಡಲು ಹೇಳಿತು. ಆದರೆ, ಈ ವೇಳೆ ಕಚೇರಿಯು ಬೇರೆಯದೇ ದೃಶ್ಯಾವಳಿಗಳು ಇರುವ ಡಿವಿಆರ್ ಮತ್ತು ಹಾರ್ಡ್‌ಡಿಸ್ಕ್ ನೀಡಿದೆ. ಬಹುಶಃ ಪ್ರಮುಖವಾದಂಥ ಅಂಶಗಳು ಈ ವಿಡಿಯೊದಲ್ಲಿ ಇದ್ದಿರಬಹುದು. ಆದ್ದರಿಂದಲೇ ಡಿವಿಆರ್ ಮತ್ತು ಹಾರ್ಡ್‌ಡಿಸ್ಕ್ ಬದಲಿಸಲಾಗಿದೆ ಎಂದು ತನಿಖಾ ತಂಡ ವರದಿಯಲ್ಲಿ ಹೇಳಿದೆ

ಲೆಫ್ಟಿನೆಂಟ್ ಗವರ್ನರ್ ಭೇಟಿಯಾದ ಕೇಜ್ರಿವಾಲ್

ನವದೆಹಲಿ (ಪಿಟಿಐ): ದೆಹಲಿ ಸರ್ಕಾರದ ಸೇವಾ ವಿಭಾಗದ ಕಾರ್ಯದರ್ಶಿ ಅಭಿಷೇಕ್ ಮೋರೆ ವರ್ಗಾವಣೆ ವಿವಾದ ಸಂಬಂಧ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಸಚಿವರು ಶುಕ್ರವಾರ ಪ್ರತ್ಯೇಕವಾಗಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಚುನಾಯಿತ ಸರ್ಕಾರಕ್ಕೆ ಆಡಳಿತಾತ್ಮಕ ಅಧಿಕಾರ ಇರಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಬೆನ್ನಲ್ಲೇ ದೆಹಲಿ ಸರ್ಕಾರ ಮತ್ತು ಲೆಫ್ಟಿನೆಂಟ್ ಗವರ್ನರ್ ನಡುವೆ ಆರೋಪ, ಪ್ರತ್ಯಾರೋಪ ನಡೆದಿದೆ.

ಸರ್ಕಾರ ಉರುಳಿಸಲು ಪಿತೂರಿ ನಡೆಯುತ್ತಿದೆ ಎಂದು ಕೇಜ್ರಿವಾಲ್ ದೂರಿದರೆ, ‘ಎಎಪಿಯು ನಿಯಮಾವಳಿಗಳನ್ನು ಉಲ್ಲಂಘಿಸುತ್ತಿದೆ’ ಎಂದು ಲೆಫ್ಟಿನೆಂಟ್ ಗವರ್ನರ್ ಆರೋಪಿಸಿದ್ದಾರೆ.

ಅಭಿಷೇಕ್ ಬ್ಯಾನರ್ಜಿಗೆ ಸಿಬಿಐ ಸಮನ್ಸ್

ಕೋಲ್ಕತ್ತ (ಬಂಕುರಾ) (ಪಿಟಿಐ): ಶಿಕ್ಷಕರ ನೇಮಕಾತಿ ಹಗರಣ ಸಂಬಂಧ ವಿಚಾರಣೆಗೆ ಇಲ್ಲಿನ ಸಿಬಿಐ ಕಚೇರಿ ಎದುರು ಶನಿವಾರ ಹಾಜರಿರುವಂತೆ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಅವರಿಗೆ ಸಮ್ಮನ್ ನೀಡಲಾಗಿದೆ.

ಬಂಕುರಾದಲ್ಲಿ ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಕಳೆದ ಹಲವು ವರ್ಷಗಳಿಂದ ಹಲವು ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಬಿಐ ವಿಚಾರಣೆ ನಡೆಸುತ್ತಿದೆ. ನನ್ನ ವಿರುದ್ಧ ಯಾವುದೇ ಸಾಕ್ಷ್ಯ ಲಭ್ಯವಾದರೆ ಬಂಧಿಸಲಿ’ ಎಂದು ಸವಾಲು ಹಾಕಿದರು. ವಿಚಾರಣೆಗೆ ಹಾಜರಾಗಿ ಅದೇ ದಿನ ಸಂಜೆ ಬಂಕುರದಲ್ಲಿ ರ‍್ಯಾಲಿ ನಡೆಸುವುದಾಗಿ ತಿಳಿಸಿದರು.

‘ಬಿಜೆಪಿ ಕ್ರಮಕ್ಕೆ ಹೆದರುವುದಿಲ್ಲ’: ಸಂಸ್ಥೆಗಳನ್ನು ಬಳಸಿಕೊಂಡು ತಮ್ಮ ಪಕ್ಷದ ಮುಖಂಡ ಹಾಗೂ ಆತನ ಕುಟುಂಬವನ್ನು ಬಿಜೆಪಿಯು ಗುರಿಯಾಗಿಸುತ್ತಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶುಕ್ರವಾರ ಹರಿಹಾಯ್ದಿದ್ದಾರೆ.

ವಿಚಾರಣೆಗೆ ಹಾಜರಾಗುವಂತೆ ತಮ್ಮ ಸೋದರಳಿಯ ಹಾಗೂ ತೃಣಮೂಲ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರಿಗೆ ಸಿಬಿಐ ಸಮನ್ಸ್ ನೀಡಿದ ಬಳಿಕ ಮಮತಾ ಈ ಹೇಳಿಕೆ ನೀಡಿದ್ದಾರೆ.

ಬಂಕುರಾದ ರ‍್ಯಾಲಿಯಲ್ಲಿ ವರ್ಚುವಲ್ ಆಗಿ ಪಾಲ್ಗೊಂಡಿದ್ದ ಮಮತಾ ಅವರು, ‘ಬಿಜೆಪಿಯ ಇಂತಹ ಬೆದರಿಕೆಗಳಿಗೆ ನಾವು ಬಗ್ಗುವುದಿಲ್ಲ’ ಎಂದಿದ್ದಾರೆ.

‘ನಮ್ಮ ಪ್ರಚಾರ ಕಾರ್ಯಕ್ರಮಗಳ ಯಶಸ್ಸನ್ನು ಕಂಡು ಬಿಜೆಪಿಗೆ ಭಯವಾಗಿದೆ. ಅಭಿಷೇಕ್‌ಗೆ ಸಿಬಿಐ ಸಮನ್ಸ್ ನೀಡಿರುವುದರ ಹಿಂದೆ ಬಿಜೆಪಿ ಕೈವಾಡ ಇದೆ’ ಎಂದರು.

‘ಬಿಜೆಪಿಯನ್ನು ಕೇಂದ್ರದಿಂದ ಹೊರ ಹಾಕುವವರೆಗೂ ನಮ್ಮ ಹೋರಾಟ ಮುಂದುವರಿಯಲಿದೆ’ ಎಂದಿದ್ದಾರೆ.

ಪಂಜಾಬ್ ತಂಡವನ್ನು ಹೊರದಬ್ಬಿದ ರಾಜಸ್ಥಾನ; ಸಂಜು ಬಳಗದ 'ಪ್ಲೇ ಆಫ್' ಸಾಧ್ಯತೆ ಜೀವಂತ

ಯಶಸ್ವಿ ಜೈಸ್ವಾಲ್, ಪಡಿಕ್ಕಲ್ ಮಿಂಚು

ಧರ್ಮಶಾಲಾ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದವರು ಪಂಜಾಬ್ ತಂಡವನ್ನು ಮಣಿಸಿ, ಐಪಿಎಲ್ ಟೂರ್ನಿಯಲ್ಲಿ 'ಪ್ಲೇ ಆಫ್' ಪ್ರವೇಶಿಸುವ ಅಲ್ಪ ಸಾಧ್ಯತೆಯನ್ನು ಜೀವಂತವಾಗಿ ಇರಿಸಿಕೊಂಡರು.

ಎಚ್‌ಪಿಸಿಎ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಬಳಗ ನಾಲ್ಕು ವಿಕೆಟ್‌ಗಳಿಂದ ಗೆದ್ದಿತು. ಸೋಲು ಅನುಭವಿಸಿದ ಶಿಖರ್ ಧವನ್ ಬಳಗ ಟೂರ್ನಿಯಿಂದ ಹೊರಬಿದ್ದಿತು.

ಮೊದಲು ಬ್ಯಾಟ್ ಮಾಡಿದ ಪಂಜಾಬ್ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 187 ರನ್ ಗಳಿಸಿದರೆ, ರಾಜಸ್ಥಾನ ತಂಡ ಎರಡು ಎಸೆತಗಳು ಇರುವಂತೆಯೇ ಆರು ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು.

ಲೀಗ್ ವ್ಯವಹಾರ ಕೊನೆಗೊಳಿಸಿದ ರಾಜಸ್ಥಾನ ತಂಡ ಐದನೇ ಸ್ಥಾನದಲ್ಲಿದೆ. ಸಂಜು ಬಳಗದ 'ಪ್ಲೇ ಆಫ್' ಸಾಧ್ಯತೆಯು ರಾಯಲ್ ಚಾಲೆಂಜರ್ಸ್ ಬೆಂಗಳೂರು–ಗುಜರಾತ್ ಟೈಟನ್ಸ್ ನಡುವಣ ಪಂದ್ಯದ ಫಲಿತಾಂಶವನ್ನು ಅವಲಂಬಿಸಿದೆ.

ಅರ್ಧಶತಕಗಳನ್ನು ಗಳಿಸಿದ ಯಶಸ್ವಿ ಜೈಸ್ವಾಲ್ (50, 36 ಎ.), ದೇವದತ್ತ ಪಡಿಕ್ಕಲ್ (51 ರನ್, 30 ಎ.) ಮತ್ತು ಕೊನೆಯಲ್ಲಿ ಬೀಸಾಟವಾಡಿದ ಶಿಮ್ರೊನ್ ಹೆಟ್ಮಯೆರ್ (46 ರನ್, 28 ಎ.) ಅವರು ರಾಯಲ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸವಾಲಿನ ಗುರಿ ಬೆನ್ನಟ್ಟಿದ ರಾಜಸ್ಥಾನ ತಂಡ, ಜೋಸ್ ಬಟ್ಲರ್ (0) ಅವರನ್ನು ಬೇಗನೇ ಕಳೆದುಕೊಂಡಿತು. ಜೈಸ್ವಾಲ್ ಮತ್ತು ಪಡಿಕ್ಕಲ್ ಎರಡನೇ ವಿಕೆಟ್‌ಗೆ 73 ರನ್ ಸೇರಿಸಿದರು.

ಪಡಿಕ್ಕಲ್ ಮತ್ತು ಸಂಜು ಸ್ಯಾಮ್ಸನ್ (2) ಅವರು ಐದು ರನ್‌ಗಳ ಅಂತರದಲ್ಲಿ ಔಟಾದರು. ಆದರೆ ಜೈಸ್ವಾಲ್ ಬಿರುಸಿನ ಆಟ ಮುಂದುವರಿಸಿದರು. ಕೊನೆಯಲ್ಲಿ ಹೆಟ್ಮಯೆರ್ ಅಬ್ಬರದ ಆಟವಾಡಿದರು. ಅವರಿಗೆ ರಿಯಾನ್ ಪರಾಗ್ (20) ತಕ್ಕ ಸಾಥ್ ನೀಡಿದರು.

ಗೆಲುವಿಗೆ ಕೊನೆಯ 3 ಓವರ್‌ಗಳಲ್ಲಿ 33 ರನ್‌ಗಳು ಬೇಕಿದ್ದವು. ಕಗಿಸೊ ರಬಾಡ ಬೌಲ್ ಮಾಡಿದ 18ನೇ ಓವರ್‌ನಲ್ಲಿ ರಿಯಾನ್ ಎರಡು ಸಿಕ್ಸರ್ ಹೊಡೆದರು. ಆದರೆ, ಆ ಓವರ್‌ನಲ್ಲಿ ಕೊನೆಯ ಎಸೆತದಲ್ಲಿ ಔಟಾದರು.

ಸ್ಯಾಮ್ ಕರನ್ ಅವರ 19ನೇ ಓವರ್‌ನಲ್ಲಿ ಹೆಟ್ಮಯೆರ್ ಔಟಾದರೂ 10 ರನ್‌ಗಳು ಬಂದವು. ಸ್ಪಿನ್ನರ್ ರಾಹುಲ್ ಚಾಹರ್ ಬೌಲ್ ಮಾಡಿದ ಕೊನೆಯ ಓವರ್‌ನಲ್ಲಿ 9 ರನ್‌ಗಳು ಬೇಕಿದ್ದವು. ಮೊದಲ ಮೂರು ಎಸೆತಗಳಲ್ಲಿ 4 ರನ್‌ಗಳು ಬಂದವು. ನಾಲ್ಕನೇ ಎಸೆತದಲ್ಲಿ ಚೆಂಡನ್ನು ಸಿಕ್ಸರ್‌ಗೆ ಅಟ್ಟಿದ ಧ್ರುವ್ ಜುರೆಲ್ (ಔಟಾಗದೆ 10) ಗೆಲುವು ತಂದಿತ್ತರು.

ಇದಕ್ಕೂ ಮುನ್ನ ಆರಂಭಿಕ ಆಘಾತದ ನಂತರ ಚೇತರಿಸಿಕೊಂಡ ಪಂಜಾಬ್ ಕಿಂಗ್ಸ್ ಹೋರಾಟದ ಮೊತ್ತ ಗಳಿಸಿತು. ಸ್ಯಾಮ್ ಕರನ್ (ಔಟಾಗದೆ 49), ಜಿತೇಶ್ ಶರ್ಮಾ (44; 28ಎ) ಹಾಗೂ ಶಾರೂಕ್ ಖಾನ್ (41, 23ಎ) ಅವರು ಉಪಯುಕ್ತ ಕಾಣಿಕೆ ನೀಡಿದರು.

ಮಧ್ಯಮವೇಗಿ ನವದೀಪ್ ಸೈನಿ (40ಕ್ಕೆ3) ಮತ್ತು ಟ್ರೆಂಟ್ ಬೌಲ್ಟ್ ದಾಳಿಯಿಂದಾಗಿ ರಾಜಸ್ಥಾನ ತಂಡವು 50 ರನ್‌ಗಳಿಗೇ ನಾಲ್ಕು ವಿಕೆಟ್ ಕಳೆದುಕೊಂಡಿತು.

